

ಕ್ರಾಂತಿಕಾರಿ
ನಾಯಕಿ
ಮಲ್ಲು ಸ್ವರಾಜ್ಯಂ

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16, ಸಂಚಿಕೆ 14, ಮಾರ್ಚ್ 28–ಏಪ್ರಿಲ್ 03, 2022 | ಪುಟ 16 | ರೂ. 10/-

http://janashakthi.wordpress.com e-mail : js_weekly@yahoo.com



ಜನತೆ ರೂಪಿಸಿದ ಪರ್ಯಾಯ ಬಜೆಟ್




ಶಾಲೆಗಳಲ್ಲಿ
ಭಗವದ್ಗೀತೆ ಬೋಧನೆ
ಅಗತ್ಯವೇ?



ಕ್ರಿಪ್ಟೋ ಕರೆನ್ಸಿ:
ಕಾನೂನು ಬದ್ಧವೋ ಬಾಹಿರವೋ?



ಹಿಂದುಳಿದ ವರ್ಗಗಳ
ಮೀಸಲಾತಿಗೆ
ಸಂಚಕಾರ!?



ದೇಶ ಉಳಿಸಿ - ಜನರನ್ನು ರಕ್ಷಿಸಿ

28-29
ಮಾರ್ಚ್ 2022

ಎರಡು ದಿನಗಳ
ಅಖಿಲ ಭಾರತ

ಸಾರ್ವತ್ರಿಕ ಮುಷ್ಕರ

ಪೆಟ್ರೋಲ್-ಡೀಸೆಲ್-ಎಲ್‌ಪಿಜಿ ಬೆಲೆಗಳ ಏರಿಕೆ ಮತ್ತೆ ಆರಂಭ
ಜನತೆಗೆ ಮೋದಿ ಸರಕಾರದ ಕ್ರೂರ ಚಾಟಿಯೇಟು-ಯೆಚೂರಿ ಖಂಡನೆ

ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಮತದಾನದ ಕೊನೆಯ ಘಟ್ಟ ಮುಗಿಯುತ್ತಿದ್ದಂತೆಯೇ ದೇಶದ ಜನಗಳು ಚುನಾವಣೆಗಳ ಫಲಿತಾಂಶಗಳಿಗಿಂತ ಹೆಚ್ಚಾಗಿ ಪೆಟ್ರೋಲ್-ಡೀಸೆಲ್- ಎಲ್‌ಪಿಜಿ ಬೆಲೆಗಳಲ್ಲಿ ಏರಿಕೆ ಎಷ್ಟಾಗಬಹುದು ಎಂದು ಭೀತಿ ಪಡುತ್ತಿದ್ದರು. ಏಕೆಂದರೆ ಈ ಚುನಾವಣೆಗಳ ಘೋಷಣೆಯಾಗುತ್ತಿದ್ದಂತೆಯೇ ನವೆಂಬರ್ 4 ರಿಂದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ಏರಿಕೆಯಾಗಲಿಲ್ಲ-ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ, ವಿಶೇಷವಾಗಿ ರಷ್ಯಾ-ಉಕ್ರೇನ್ ಮಿಲಿಟರಿ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾತೈಲದ ಬೆಲೆಗಳು ಏರುತ್ತಿದ್ದರೂ ಕೂಡ. ಆದರೆ ಅದೇಕೋ ಹಿಂದಿನ ಮತದಾನಗಳ ಸಂದರ್ಭದಲ್ಲಿ ಆದಂತೆ ಈ ಬಾರಿ ಕೇಂದ್ರ ಸರಕಾರ ತಕ್ಷಣವೇ ಇದನ್ನು ಆರಂಭಿಸಲು ಹಿಂದೇಟು ಹಾಕಿತು. ಆದರೆ ನೌಕರರ ಭವಿಷ್ಯನಿಧಿಯ ಮೇಲಿನ ಬಡ್ಡಿ ದರಗಳನ್ನು ಗಮನಾರ್ಹವಾಗಿ ಇಳಿಸಿ ಇದರ ಸಂಕೇತವನ್ನು ಕೊಟ್ಟಿತು.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್

ಈಗ, 137 ದಿನಗಳ ನಂತರ ಮಾರ್ಚ್ 22 ರಿಂದ ತೈಲ ಮಾರುಕಟ್ಟೆ ಕಂಪನಿಗಳಿಗೆ ಬೆಲೆಗಳನ್ನು ಏರಿಸಲು ಅವಕಾಶ ಕೊಟ್ಟಂತೆ ಕಾಣುತ್ತದೆ. ಸತತವಾಗಿ ಎರಡು ದಿನ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಲೀಟರಿಗೆ 80ಪೈಸೆಯಂತೆ ಏರಿಕೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಲೀಟರ್‌ಗೆ 102.26 ರೂ., ಡೀಸೆಲ್ 86.58 ರೂ. ಆಗಿದೆ. ಅಡುಗೆ ಅನಿಲದ ಬೆಲೆಯಲ್ಲೂ 50 ರೂ. ಏರಿಕೆ ಮಾಡಲಾಗಿದೆ.

ಈ ಬೃಹತ್ ಪ್ರಮಾಣದ ದರ ಏರಿಕೆಗಳು ಎಲ್ಲ ಸರಕುಗಳ ಬೆಲೆಗಳ ಮೇಲೂ ಒಂದಾದ ಮೇಲೊಂದರಂತೆ ಪ್ರಭಾವ ಬೀರುತ್ತವೆ, ಆಗಲೇ ಏರುತ್ತಿರುವ ಬೆಲೆಗಳನ್ನು ಮತ್ತಷ್ಟು ಏರಿಸುತ್ತವೆ. ಇದು ಜನತೆಗೆ ಮೋದಿ ಸರಕಾರದ ಕ್ರೂರ ಚಾಟಿಯೇಟು, ಜನರ ಬಗ್ಗೆ ಅಮಾನವೀಯ ನಿರ್ಲಕ್ಷ್ಯ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಬಲವಾಗಿ ಖಂಡಿಸಿದ್ದಾರೆ, ಕೇಂದ್ರ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೇರುತ್ತ ಬಂದಿರುವ ಕೇಂದ್ರೀಯ ಸೆಸ್‌ಗಳನ್ನು ಮತ್ತು ಸರ್ಚಾರ್ಜ್‌ಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಮತ್ತೊಮ್ಮೆ ಆಗ್ರಹಿಸಿದ್ದಾರೆ.

ಡೀಸೆಲ್ ಸಗಟು ಖರೀದಿ ದರದಲ್ಲಿ ಭಾರೀ ಏರಿಕೆ-ರಸ್ತೆ ಸಾರಿಗೆ ಕಾರ್ಮಿಕರ ದೇಶವ್ಯಾಪಿ ಪ್ರತಿಭಟನೆ

ರಾಜ್ಯ ರಸ್ತೆ ಸಾರಿಗೆಗಳಂತಹ ಡೀಸೆಲ್‌ನ ಸಗಟು ಖರೀದಿದಾರರಿಗೆ ಮತದಾನಗಳ ನಡುವೆಯೂ ಫೆಬ್ರುವರಿ 1 ರಿಂದಲೇ ಸದ್ದಿಲ್ಲದೆ ವಿವಿಧ ರಾಜ್ಯಗಳಲ್ಲಿ ಲೀಟರಿಗೆ 2 ರೂ. ನಿಂದ 6 ರೂ. ಗಳ ವರೆಗೆ ಬೆಲೆಗಳನ್ನು ಏರಿಸಲಾಗಿತ್ತು. ಈಗ ಚಿಲ್ಲರೆ ಖರೀದಿದಾರರಿಗೆ ಬೆಲೆಯೇರಿಕೆಗಳನ್ನು ಆರಂಭಿಸುವ ಮುನ್ನಾದಿನವೇ ಮತ್ತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಡೀಸೆಲ್ ದರಗಳಲ್ಲಿ ಲೀಟರಿಗೆ 25 ರೂ. ಗಳ ಭಾರೀ ಏರಿಕೆಯ ಹೊರೆಯನ್ನು ಹಾಕಲಾಗಿದೆ. ಇದನ್ನು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ ಬಲವಾಗಿ ಖಂಡಿಸಿದೆ. ಇದು ಸಗಟು ಖರೀದಿದಾರಿಗೆ ಕಡಿಮೆ ದರ ಎಂಬ ಸಾಮಾನ್ಯ ವ್ಯಾಪಾರ ನಿಯಮಕ್ಕೆ ತದ್ವಿರುದ್ಧವಾಗಿದೆ ಎಂದಿರುವ ಅದು ಮಾರ್ಚ್ 24 ರಂದು ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿ ಈ ಭಾರೀ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿದೆ.

ಕೃಷಿ ಕಾಯ್ದೆಗಳಿಗೆ ರೈತರ ಭಾರೀ "ಮೌನ ಬಹುಮತ" ಎಂಬುದು ಕಾರ್ಪೊರೇಟ್-ಪರ ಮುಖಂಡರ ಹಗಲುಗನಸು: ಎಐಕೆಎಸ್
"ಸುಪ್ರಿಂ ಕೋರ್ಟ್-ನೇಮಿತ ಸಮಿತಿಯಿಂದ ಕಾರ್ಪೊರೇಟ್-ಪಕ್ಷಪಾತಿ ಶಿಫಾರಸುಗಳು"

ಮೂರು ವಿವಾದಿತ ಕೃಷಿ ಕಾಯ್ದೆಗಳ ವಿರುದ್ಧ ದಿಲ್ಲಿ ಗಡಿಗಳಲ್ಲಿ ರೈತರು ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ಹೋರಾಟ ಆರಂಭಿಸಿದ ಮೂರು ತಿಂಗಳ ನಂತರ, ಜನವರಿ 2021ರಲ್ಲಿ ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶರು ನೇಮಿಸಿದ್ದ ಸಮಿತಿಯ ಶಿಫಾರಸು ಈಗ ಕೇಂದ್ರ ಸರಕಾರವೇ ತಾನು ತಂದ ಆ ಕಾಯ್ದೆಗಳನ್ನು ರದ್ದು ಮಾಡಿದ ನಾಲ್ಕು ತಿಂಗಳ ನಂತರ, ಐದು ವಿಧಾನಸಭಾ ಚುನಾವಣೆಗಳ ಫಲಿತಾಂಶ ಬಂದ ಕೆಲವು ದಿನಗಳ ನಂತರ ಬಿಡುಗಡೆಯಾಗಿದೆ. ಇದರಲ್ಲಿ ಈ ಕಾಯ್ದೆಗಳಿಗೆ ದೇಶದ ಬಹುಪಾಲು ರೈತರ ಬೆಂಬಲವಿದ್ದು ಇದನ್ನು ರದ್ದು ಮಾಡಿರುವುದರಿಂದ ಭಾರೀ ಪ್ರಮಾಣದಲ್ಲಿರುವ ರೈತರ "ಮೌನ ಬಹುಮತ"ಕ್ಕೆ ಅನ್ಯಾಯವಾಗಿದೆ ಎಂದು ಅದು ಹೇಳಿರುವುದಾಗಿ ವರದಿಯಾಗಿದೆ.

ಈ ಸಮಿತಿ ಈ ಕೃಷಿ ಕಾಯ್ದೆಗಳನ್ನು ಮತ್ತೆ ತರಲು ಶಿಫಾರಸು ಮಾಡುತ್ತಿದೆಯೇ? ಇದನ್ನು ಬಲವಾಗಿ ಖಂಡಿಸುವುದಾಗಿ ಈ ಸಮಿತಿಯನ್ನು ಬಹಿಷ್ಕರಿಸಿದ್ದ ದೊಡ್ಡ ರೈತ ಸಂಘಟನೆಗಳಲ್ಲಿ ಒಂದಾದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ. ಈ ಸಮಿತಿಯ ಶಿಫಾರಸುಗಳು ಕಾರ್ಪೊರೇಟ್-ಪರ ಪಕ್ಷಪಾತದಿಂದ ಕೂಡಿವೆ ಎಂದು ಅದು ಹೇಳಿದೆ.

ಈ ಸಮಿತಿಗೆ ಸುಪ್ರಿಂ ಕೋರ್ಟ್ ನೇಮಿಸಿದ್ದವರೆಲ್ಲರೂ ಈ ಕೃಷಿ ಕಾಯ್ದೆಗಳನ್ನು ಒಂದಿಲ್ಲೊಂದು ಕಾರಣಕ್ಕೆ ಬೆಂಬಲಿಸಿದ್ದವರಾದ್ದರಿಂದ, ಇದರಿಂದ ನ್ಯಾಯಯುತ ಶಿಫಾರಸುಗಳು ಸಾಧ್ಯವಿಲ್ಲ ಎಂದೇ ಸಂಯುಕ್ತ ಕಿಸಾನ್ ಮೋರ್ಚಾಕ್ಕೆ ಸೇರಿದ ರೈತ ಸಂಘಟನೆಗಳು ಇದನ್ನು ಬಹಿಷ್ಕರಿಸಿ ಹೋರಾಟ ಮುಂದುವರೆಸಿದವು, ಕೊನೆಗೂ ಈ ಕಾಯ್ದೆಗಳನ್ನು ಸರಕಾರವೇ ರದ್ದುಮಾಡುವಂತೆ ಮಾಡುವಲ್ಲಿ ಯಶಸ್ವಿಯಾದವು. ಇದಕ್ಕೆ ನೇಮಕರಾದ ಒಬ್ಬ ರೈತ ಮುಖಂಡರು ಈ ಸಮಿತಿಯಲ್ಲಿ ಸದಸ್ಯರಾಗಿ ಕೆಲಸ ಮಾಡಲು ನಿರಾಕರಿಸಿದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಸಮಿತಿಯ ಸದಸ್ಯರಲ್ಲಿ ಒಬ್ಬರೂ ಮತ್ತು ಶೇತಕರಿ ಸಂಘಟನ್ ಎಂಬ ಮಹಾರಾಷ್ಟ್ರದ ಒಂದು ರೈತ ಸಂಘಟನೆಯ ಮುಖಂಡರೂ ಆಗಿರುವ ಅನಿಲ್ ಘನ್ವತ್ ಇದನ್ನು ಮಾರ್ಚ್ 21ರಂದು ಬಿಡುಗಡೆ ಮಾಡಿರುವುದಾಗಿ ವರದಿಯಾಗಿದೆ. ಅವರು ಇದನ್ನು ಬಿಡುಗಡೆ ಮಾಡುವಂತೆ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಬರೆದಿದ್ದರಂತೆ, ಮತ್ತು ಅವರು ಬಿಡುಗಡೆ ಮಾಡದಿದ್ದರೆ ತಾನೇ ಬಿಡುಗಡೆ ಮಾಡುವುದಾಗಿ ಬೆದರಿಸಿದ್ದರಂತೆ. ಈಗ ಅದನ್ನು ಬಿಡುಗಡೆ ಮಾಡುತ್ತ "ಈ ಮೂರು ಕಾಯ್ದೆಗಳು ರದ್ದಾಗಿವೆ. ಆದ್ದರಿಂದ ಇದೀಗ ಪ್ರಸ್ತುತವಲ್ಲ" ಎಂದು ಹೇಳಿರುವುದಾಗಿಯೂ ವರದಿಯಾಗಿದೆ.

ಅಲ್ಲದೆ ಈ ಸಮಿತಿ ಸಂವಾದ ನಡೆಸಿದ ರೈತ ಸಂಘಟನೆಗಳಲ್ಲಿ 85.7% ಇದನ್ನು ಬೆಂಬಲಿಸಿದ್ದಾರೆ, ಕೇವಲ 13% ವಿರೋಧಿಸಿದ್ದಾರೆ, 1% ದಷ್ಟು ಕೆಲವು ಬದಲಾವಣೆಗಳೊಂದಿಗೆ ಇದನ್ನು ಬೆಂಬಲಿಸಿದ್ದಾರೆ ಎಂದು ಈ ವರದಿಯಲ್ಲಿ ಹೇಳಲಾಗಿದೆ. ಜತೆಗೇ ಈ ಸಮಿತಿ ಅಭಿಪ್ರಾಯ ಕೇಳಿ ಆಹ್ವಾನ ಕಳಿಸಿದ್ದ 266 ರೈತ ಸಂಘಟನೆಗಳಲ್ಲಿ 73 ಸಂಘಟನೆಗಳು ಮಾತ್ರವೇ ಸ್ಪಂದಿಸಿದವು ಎಂದೂ ಲೆಕ್ಕ ಕೊಟ್ಟಿದೆ. ಅಂದರೆ ಈ ಸಮಿತಿಯ ಪ್ರಕಾರವೂ ರೈತರ ನಡುವೆ ಈ ಕಾಯ್ದೆಗಳಿಗೆ ಇದ್ದ ಬೆಂಬಲ 24% ಮಾತ್ರ!

ರೈತ ಸಂಘಟನೆಗಳ ಪ್ರಾತಿನಿಧ್ಯದ ಒಂದು ಸಾಂಸ್ಥಿಕ ವ್ಯವಸ್ಥೆ ಇಲ್ಲದಿರುವಾಗ, ಈ ಕೃಷಿ ಕಾಯ್ದೆಗಳಿಗೆ ರೈತರ ನಡುವೆ "ಭಾರೀ ಮೌನ ಬಹುಮತ" ಇತ್ತು ಎನ್ನುವುದು ಅನಿಲ್ ಘನ್ವತ್‌ರಂತಹ ಕಾರ್ಪೊರೇಟ್-ಪರ ಮುಖಂಡರ ಹಗಲುಗನಸು ಎಂದು ಎಐಕೆಎಸ್ ಟಿಪ್ಪಣಿ ಮಾಡಿದೆ.

ಅದೇನೇ ಇರಲಿ, ಈ ಸಮಿತಿ ನೀಡಿದೆ ಎನ್ನಲಾದ ಶಿಫಾರಸುಗಳು ಎಲ್ಲವೂ ಕಾರ್ಪೊರೇಟ್-ಪರ ಸುಧಾರಣೆಗಳಿಗೆ ಅನುಕೂಲ ಮಾಡಿಕೊಡುವ ಗುರಿಯನ್ನೇ ಹೊಂದಿವೆ ಎಂಬುದು ಸ್ವಯಂವೇದ್ಯ ಎಂದು ಎಐಕೆಎಸ್ ಹೇಳಿದೆ. ಕೃಷಿ ಭೂಮಿ, ಕೃಷಿ ಮಾರುಕಟ್ಟೆಗಳು ಮತ್ತು ಕೃಷಿ ಉತ್ಪನ್ನಗಳನ್ನು ಕಾರ್ಪೊರೇಟ್‌ಗಳು ವಹಿಸಿಕೊಳ್ಳುವಂತಹ ವಾತಾವರಣವನ್ನು ನಿರ್ಮಿಸಲಿಕ್ಕಾಗಿ ವಾಸ್ತವತೆಯನ್ನು ವಿಕೃತಗೊಳಿಸುವ ಒಂದು ಶತಪ್ರಯತ್ನವಿದು ಎಂದು ಎಐಕೆಎಸ್ ಹೇಳಿದೆ.

ಸರಕಾರದಿಂದ ಅಕ್ಕಿ ಮತ್ತು ಗೋದಿಯ ಖರೀದಿಗೆ ಮಿತಿ ಹಾಕಬೇಕು ಎಂಬ ಶಿಫಾರಸು ರೈತರ ಒಟ್ಟು ಹಿತಾಸಕ್ತಿಗಳಿಗೆ ವಿರುದ್ಧವಾದದ್ದು, ಇದು ಈಗಿರುವ ಕನಿಷ್ಟ ಬೆಂಬಲ ಬೆಲೆ ಆಧಾರಿತ ವ್ಯವಸ್ಥೆಯನ್ನು ಮತ್ತಷ್ಟು ಅಪಾಯಕ್ಕೀಡು ಮಾಡುತ್ತದೆ ಎಂದಿರುವ ಎಐಕೆಎಸ್, ಈ ಕೃಷಿ ಕಾಯ್ದೆಗಳ ವಿರುದ್ಧ ದೇಶಾದ್ಯಂತ ರೈತರ ಬಲವಾದ ಆಕ್ರೋಶ, ಪ್ರತಿಭಟನೆ ವ್ಯಕ್ತವಾಗುತ್ತಿದ್ದಾಗ, ಈ ಸುಪ್ರಿಂ ಕೋರ್ಟ್-ನೇಮಿತ ಸದಸ್ಯರು ಈ ಕಾಯ್ದೆಗಳನ್ನು ಜಾರಿಗೊಳಿಸಬೇಕು ಎಂದು ಪ್ರತಿಪಾದಿಸುತ್ತಿದ್ದರು ಎಂದು ನೆನಪಿಸಿದೆ. ಎಂಎಸ್ ಸ್ವಾಮಿನಾಥನ್ ಸಮಿತಿಯ ಕನಿಷ್ಠ ಬೆಂಬಲ ಬೆಲೆ ಕುರಿತಾದ ಶಿಫಾರಸನ್ನು ಜಾರಿಗೊಳಿಸುವುದಾಗಿ ಬಿಜೆಪಿ 2014ರ ಲೋಕಸಭಾ ಚುನಾವಣೆಗಳ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದರೂ, ಮೋದಿ ಸರಕಾರ ಬಂದ ಏಳು ವರ್ಷಗಳ ನಂತರವೂ ಅದನ್ನು ಈಡೇರಿಸಿಲ್ಲ. ಆದರೂ ಈ ಸುಪ್ರಿಂ ಕೋರ್ಟ್-ನೇಮಿತ ಸಮಿತಿಗೆ ಎಲ್ಲ ಬೆಳೆಗಳಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆ ನೀಡಬೇಕು ಎಂದು ಶಿಫಾರಸು ಮಾಡುವ ಬಗ್ಗೆ ಏನೇನೂ ಆಸಕ್ತಿಯಿಲ್ಲ ಎಂಬುದನ್ನು ಅದರ ಶಿಫಾರಸುಗಳು ಹೊರಗೆಡಹುತ್ತವೆ ಎಂದು ಎಐಕೆಎಸ್ ಹೇಳಿದೆ.

ಕಾಮ್ರೇಡ್ ಮಲ್ಲು ಸ್ವರಾಜ್ಯಂ-ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ



ಪಕ್ಷದ ಹಿರಿಯ ಮುಂದಾಳು ಮತ್ತು ತೆಲಂಗಾಣದ ಜನತಾ ಸಶಸ್ತ್ರ ಹೋರಾಟದ ಪವಾಡ ಸದೃಶ ಹೋರಾಟಗಾರ್ತಿ ಕಾಮ್ರೇಡ್ ಮಲ್ಲು ಸ್ವರಾಜ್ಯಂ ಇನ್ನಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಳವಾದ ದುಃಖ ವ್ಯಕ್ತಪಡಿಸಿದೆ. ಅವರಿಗೆ 91 ವರ್ಷವಾಗಿತ್ತು.

ಮಲ್ಲು ಸ್ವರಾಜ್ಯಂ ಚಿಕ್ಕ ವಯಸ್ಸಿನಲ್ಲೇ ನಿಜಾಮರ ಊಳಿಗಮಾನ್ಯ ದಬ್ಬಾಳಿಕೆ ವಿರುದ್ಧ ಚಳವಳಿಗೆ ಧುಮುಕಿದರು. ಅವರು 1946 ರಿಂದ 1951 ರವರೆಗೆ ತೆಲಂಗಾಣ ಸಶಸ್ತ್ರ ಹೋರಾಟದಲ್ಲಿ ಭಾಗವಹಿಸಿದರು. ಶಸ್ತ್ರಾಸ್ತ್ರಗಳ ಬಳಕೆಯ ತರಬೇತಿಯನ್ನು ಪಡೆದ ಅವರು ಹೋರಾಟದಲ್ಲಿ ಭಾಗವಹಿಸಲು ಅನೇಕ ಮಹಿಳೆಯರಿಗೆ ಸ್ಫೂರ್ತಿ ನೀಡಿದರು.

ತುಳಿತಕ್ಕೊಳಗಾದ ಜನರ ಪರವಾಗಿ ನಿಲ್ಲಲು ಅವರು ಅನೇಕ ಸಾಮಾಜಿಕ ಕಟ್ಟಳೆಗಳನ್ನು ಮುರಿದರು ಮತ್ತು ಏಳು ದಶಕಗಳಿಗೂ ಹೆಚ್ಚು ಕಾಲ ಕಮ್ಯೂನಿಸ್ಟ್ ಚಳವಳಿಗೆ ಸೇವೆಯನ್ನು ಮುಂದುವರೆಸಿದರು.

ಅವರು ಸಂಯುಕ್ತ ಆಂಧ್ರಪ್ರದೇಶದ ವಿಧಾನ ಸಭೆಗೆ ಎರಡು ಬಾರಿ ಆಯ್ಕೆಯಾದರು; 2002 ರಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು ಮತ್ತು ನಂತರ ವಿಶೇಷ ಆಹ್ವಾನಿತರಾದರು.

ಅವರ ಕ್ರಾಂತಿಕಾರಿ ಜೀವನಕ್ಕೆ ಶ್ರದ್ಧಾಂಜಲಿ ಅರ್ಪಿಸುತ್ತ ಪೊಲಿಟ್‌ಬ್ಯೂರೋ ಅವರ ಕುಟುಂಬದ ಸದಸ್ಯರಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ತಿಳಿಸಿದೆ.

ಹಿಂದುಳಿದ ವರ್ಗಗಳ ಮೀಸಲಾತಿ ಉಳಿದೀತೆ?

ಸಂಪಾದಕೀಯ

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿಯನ್ನು ಮುಂದುವರಿಸುವ ಸಂಬಂಧ 2022 ಜನವರಿ 19 ರಂದು ಭಾರತದ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಇದರ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಉಳಿಸಲು ಬೇಕಾದ ಯಾವುದೇ ನಿರ್ಣಾಯಕ ಕ್ರಮಗಳನ್ನು ಕರ್ನಾಟಕ ಸರ್ಕಾರ ಕೈಗೊಳ್ಳದೇ ಇರುವುದರಿಂದ ಮೀಸಲಾತಿಯ ಅವಕಾಶವೇ ತಪ್ಪಿಹೋಗುವ ಆತಂಕ ಎದುರಾಗಿದೆ.

ಆಡಳಿತದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಮೂಲ ಆಶಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಅತ್ಯಂತ ಮಹತ್ವದ್ದಾಗಿದೆ. ಸಂವಿಧಾನದ ಆಶಯದಂತೆ ಸಮುದಾಯಗಳಿಗೆ ಶೈಕ್ಷಣಿಕ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಮತ್ತು ರಾಜಕೀಯ ಮೀಸಲಾತಿಯನ್ನು ಒದಗಿಸಲಾಗಿದೆ. ಕಳೆದ 73 ವರ್ಷಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ –ಎಸ್ಸಿ ಎಸ್ಟಿ ಸಮುದಾಯಗಳಿಗೆ ಮೀಸಲಾತಿ ಇದೆ. ಸಂವಿಧಾನದ 73–74ನೆಯ ತಿದ್ದುಪಡಿಯ ಬಳಿಕ ಹಿಂದುಳಿದ ವರ್ಗಗಳಿಗೂ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ರಾಜಕೀಯ ಮೀಸಲಾತಿ ನೀಡಲಾಯಿತು. 1990 ರಲ್ಲಿ ಮಂಡಲ್ ಆಯೋಗದ ವರದಿಯ ಜಾರಿ ಬಳಿಕ ಶೇ. 27 ಮೀಸಲಾತಿ ಇತರೆ ಹಿಂದುಳಿದ ವರ್ಗಗಳಿಗೆ ಲಭ್ಯವಾಯಿತು. ಪ್ರಸಕ್ತವಾಗಿ ಎಸ್.ಸಿ.–18, ಎಸ್.ಟಿ.–5, ಓ.ಬಿ.ಸಿ. ಶೇ. 27 ಸ್ಥಾನಗಳು ಮೀಸಲಿವೆ. ನಗರ ಸಭೆ, ಪಾಲಿಕೆ, ಮಹಾನಗರಪಾಲಿಕೆ ಗಳಂತಹ ಸ್ಥಳೀಯ ಸಂಸ್ಥೆಗಳಿಗೂ ಇದು ಅನ್ವಯವಾಗಿದೆ. ಆರ್ಥಿಕ, ಸಾಮಾಜಿಕ ಅಸಮಾನತೆಯಿಂದ ಕೂಡಿರುವ ಭಾರತದ ಸಮಾಜ ವ್ಯವಸ್ಥೆಯಲ್ಲಿ ಇಂತಹ ಮೀಸಲಾತಿ ಅವಕಾಶ ನೀಡದೇ ಹೋದಲ್ಲಿ ದುರ್ಬಲ ಸಮುದಾಯಗಳು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಆಡಳಿತದ ಸ್ಥಾನಗಳಿಗೆ ಪ್ರವೇಶಿಸುವುದು ಅತ್ಯಂತ ಕಠಿಣ ಮತ್ತು ಇಲ್ಲವೆಂದೇ ಹೇಳಬೇಕು. ಈ ದೆಸೆಯಲ್ಲಿ ರಾಜಕೀಯ ಮೀಸಲಾತಿ ಮಹತ್ವದ ಪಾತ್ರವನ್ನು ವಹಿಸಿದೆ. ಕನಿಷ್ಠ ಈ ಸಮುದಾಯಗಳು ತಮ್ಮ ಇರುವಿಕೆಯನ್ನು ಧ್ವನಿಸುವ ಅಲ್ಪಮಟ್ಟಿಗಾದರೂ ಆರ್ಥಿಕ– ರಾಜಕೀಯವಾಗಿ ಬೆಳೆಯುವ ಅವಕಾಶಗಳು ಉಂಟಾಗಿರುವುದು ಅತ್ಯಂತ ಗಮನಾರ್ಹ.

ಮೀಸಲಾತಿ ಎನ್ನುವುದು ಪ್ರಾತಿನಿಧ್ಯ ವಂಚಿತರಿಗೆ ಪ್ರಾತಿನಿಧ್ಯ ಖಾತ್ರಿ ಮಾಡುವ ಸಂವಿಧಾನಬದ್ಧ ಹಕ್ಕಾಗಿದೆ. ಈ ತಾತ್ವಿಕತೆಯ ಬಗೆಗೆ ಬಹುತೇಕರಿಗೆ ಭಿನ್ನಾಭಿಪ್ರಾಯ ಇರುವುದು ತೀರಾ ಕಡಿಮೆ. ಆದರೆ ಪ್ರಶ್ನೆ ಅದನ್ನು ಜಾರಿಗೊಳಿಸುವಾಗ ಆಗುತ್ತಿರುವ ಪರಿಣಾಮ, ಫಲಿತಾಂಶಗಳು ಏನು ಎಂಬುದಾಗಿದೆ. ಈಗ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಮೀಸಲಾತಿ ನಿಜಕ್ಕೂ ಎಲ್ಲ ಸಮುದಾಯಗಳಿಗೆ ದಕ್ಕಿದೆಯೇ ಮತ್ತು ಎಲ್ಲಾ ವಂಚಿತ ಸಮುದಾಯಗಳಿಗೆ ಅವಕಾಶ ಕಲ್ಪಿಸಲಾಗಿದೆಯೇ? ಮೀಸಲಾತಿಯ ಫಲದಿಂದ ಆಗಿರುವ ಸಾಮಾಜಿಕ ಆರ್ಥಿಕ ಬದಲಾವಣೆಗಳೇನು ಮತ್ತು ಅದು ಮುಂದುವರಿಯಬೇಕೇ ಎಂಬ ಪ್ರಶ್ನೆಗಳು ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಾಗ ರಾಹುಲ್ ರಮೇಶ್ ವಾಘ್ ಮತ್ತು ಮಹಾರಾಷ್ಟ್ರ ಸರ್ಕಾರದ ನಡುವಿನ ಪ್ರಕರಣ, 2021 ರಲ್ಲಿ ವಿಕಾಸ ಕೃಷ್ಣ ಗಾವಳಿ ಮತ್ತು ಮಹಾರಾಷ್ಟ್ರ ಸರ್ಕಾರದ ಪ್ರಕರಣಗಳಲ್ಲಿ ನೀಡಿದ ಮಧ್ಯಂತರ ಆದೇಶದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಮುನ್ನ ಮೂರು ಸ್ತರದ ಪರಿಶೀಲನೆ ನಡೆಸಿಯೇ ನಿರ್ಣಯಕ್ಕೆ ಬರಬೇಕು ಎಂದು ಆದೇಶಿಸಿದೆ. ಅದರಂತೆ 2022 ಜೂನ್ ರೊಳಗೆ ಈ ಕಾರ್ಯ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಎಸ್.ಸಿ, ಎಸ್.ಟಿ. ಹೊರತು ಪಡಿಸಿ ಹಿಂದುಳಿದ ವರ್ಗಗಳ ಮೀಸಲಾತಿ ರದ್ದಾಗಿ ಅವು ಸಾಮಾನ್ಯ ಸ್ಥಾನಗಳಾಗಿ ಮಾರ್ಪಾಡಾಗುತ್ತವೆ ಎಂದು ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದೆ.

ನ್ಯಾಯಾಲಯದ ಆದೇಶದಂತೆ ರಾಜ್ಯದೊಳಗಿನ ವಿವಿಧ ಸಮುದಾಯಗಳ ಸಾಮಾಜಿಕ–ಆರ್ಥಿಕ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಪ್ರತ್ಯೇಕ ಆಯೋಗವೊಂದನ್ನು ರಚಿಸಿ ವಿಚಾರಣೆ ನಡೆಸಿ ನಿಖರ ಅಂಕಿ ಸಂಖ್ಯೆ ಸಂಗ್ರಹಿಸುವುದು, ಆಯೋಗದ ಶಿಫಾರಸು ಆಧರಿಸಿ ಪ್ರತ್ಯೇಕವಾಗಿ ವಿವಿಧ ಸಮುದಾಯಗಳಿಗೆ ಮೀಸಲಾತಿ ನಿಗದಿ ಮಾಡುವುದು ಮತ್ತು ಇಂತಹ ಒಟ್ಟು ಮೀಸಲಾತಿ ಶೇ 50 ದಾಟದಂತೆ ಕ್ರಮವಹಿಸಬೇಕು ಎಂಬುದೇ ಮೂರು ಸ್ತರದ ಪರಿಶೀಲನೆಯಾಗಿದೆ.

ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಈ ಮೂರು ಹಂತದ ವ್ಯವಸ್ಥೆ ಜಾರಿಯಲ್ಲಿದೆ. ಸದಸ್ಯ ಸ್ಥಾನಗಳಿಗೆ ಮಾತ್ರವಲ್ಲ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನೀತಿ ಜಾರಿಯಲ್ಲಿದೆ. ಸದ್ಯ ರಾಜ್ಯದಲ್ಲಿ ಸುಪ್ರೀಂಕೋರ್ಟ್ ತೀರ್ಪನ್ನು ಜಾರಿಗೊಳಿಸುವಲ್ಲಿ ಅನುಕೂಲಕರ ಸಂಗತಿಗಳೂ ಇವೆ. ಈಗಾಗಲೇ ಕಾಂತರಾಜು ರವರ ನೇತೃತ್ವದಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಒಳಗೊಂಡ ಜಾತಿಗಣತಿ ಸಮೀಕ್ಷೆಯನ್ನು ನಡೆಸಿದ ವಿಸ್ತೃತವಾದ ಮಾಹಿತಿಗಳನ್ನು ಒಳಗೊಂಡ ವರದಿ ಇದ್ದು ಅದನ್ನು ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಬಳಿಯಿರುವ ಮಾಹಿತಿಗಳನ್ನು ಆಧರಿಸಿ ಅಗತ್ಯ ಕ್ರಮ ವಹಿಸಬಹುದು. ಆದರೆ ಆಯೋಗದ ಸಮೀಕ್ಷಾ ವರದಿಯನ್ನು ಇಲ್ಲಿಯವರೆಗೂ ಸರ್ಕಾರಗಳು ಅಂಗೀಕರಿಸಿಲ್ಲ. ಅಂದರೆ ವಾಸ್ತವಿಕ ಸ್ಥಿತಿಯನ್ನು ಜನರೆದುರು ತೆರೆದಿಡುವ ನೈತಿಕ, ರಾಜಕೀಯ ಧೈರ್ಯ, ಇಚ್ಛಾಶಕ್ತಿ ತೋರಲೇ ಇಲ್ಲ. ಈಗಿನ ಬಿಜೆಪಿ ಸರ್ಕಾರವು ಬಾಯಿ ಬಡಾಯಿ ಮಾತನಾಡಿದರೂ ಪ್ರಾಮಾಣಿಕವಾಗಿ ಉತ್ಸುಕವಾಗಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬಾಕಿಯಾಗಿ ಒಂದು ವರ್ಷ ಕಳೆದಿದೆ. ಜನತೆಯ ಕೈಗೆ ಆಡಳಿತ ನೀಡಬೇಕಿರುವ ಸಂವಿಧಾನಿಕ ಹೊಣೆಗಾರಿಕೆಯಿಂದ ಈ ಸರ್ಕಾರ ನುಣುಚಿ ಕೊಳ್ಳುತ್ತಿದೆ ಮತ್ತು ವಂಚಿಸುತ್ತಿದೆ. ಅಂದರೆ ಪರೋಕ್ಷವಾಗಿ ಅಧಿಕಾರಶಾಹಿಯ ಮೂಲಕ ಆಡಳಿತ ಪಕ್ಷದ ಕೈಯಲ್ಲೇ ಎಲ್ಲಾ ಅಧಿಕಾರ ಕೇಂದ್ರೀಕರಿಸಿಕೊಂಡಿದೆ.

ಸುಪ್ರೀಂಕೋರ್ಟ್ ಆದೇಶ ಪಾಲಿಸುವಲ್ಲಿ ಸಕಾಲದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಲು ರಾಜ್ಯದ ಬಿಜೆಪಿ ಸರ್ಕಾರ ನಿರ್ಲಕ್ಷ್ಯ ವಹಿಸುವಲ್ಲಿ ಅದರ ಸೈದ್ಧಾಂತಿಕ ವಿರೋಧ ಮತ್ತು ಸಂಕುಚಿತ ರಾಜಕೀಯ ಲೆಕ್ಕಾಚಾರಗಳು ಇಲ್ಲದಿಲ್ಲ. ಸಂಘಪರಿವಾರದ ಅಂಗವಾಗಿರುವ ಬಿಜೆಪಿ ಪಕ್ಷವು ವಂಚಿತ ಸಮುದಾಯಗಳ ಮೀಸಲಾತಿ ನೀತಿಯ ವಿರೋಧಿ ಎನ್ನುವುದು ಜಗಜ್ಜಾಹೀರಾಗಿದೆ. ಹಿಂದೆ ವಿ.ಪಿ ಸಿಂಗ್ ರವರು ಪ್ರಧಾನಿಯಾಗಿದ್ದಾಗ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ ಮಂಡಲ್ ಆಯೋಗದ ವರದಿಯನ್ನು ಅಂಗೀಕರಿಸಿದಾಗ ಅದನ್ನು ಹಿಂಸಾತ್ಮಕವಾಗಿ ವಿರೋಧಿಸಿತು. ಈಗಲೂ ಕೇಂದ್ರ ಸರ್ಕಾರ ಸಾಮಾಜಿಕ–ಆರ್ಥಿಕ ವಂಚಿತ ಸಮುದಾಯಗಳಿಗೆ ಇರುವ ಮೀಸಲಾತಿಯನ್ನು ದುರ್ಬಲಗೊಳಿಸುವ ಮತ್ತು ಅದನ್ನು ಅರ್ಥಹೀನಗೊಳಿಸುವ ಹತ್ತಾರು ಕ್ರಮಗಳನ್ನು ವಹಿಸುತ್ತಿದೆ. ಈಗಲೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದರೆ ಸರ್ಕಾರದ ವೈಫಲ್ಯಗಳಿಂದ ಬೇಸತ್ತಿರುವ ಜನ ಆಳುವ ಪಕ್ಷಕ್ಕೆ ವಿರೋಧವಾಗಿ

ಪುಟ 4 ಕ್ಕೆ

1954–55ರ ಕಾಲ. ಆಗ ಐಸೆನ್ ಹೋವರ್ ಅಮೆರಿಕದ ಅಧ್ಯಕ್ಷ. ಆತ ಅಪರಿಮಿತ ಸಂಗೀತಪ್ರೇಮಿ. ಸುಪ್ರಸಿದ್ಧ ಶಹನಾಯಿ ವಾದಕ ಬಿಸ್ಮಿಲ್ಲಾಖಾನ್ ರವರ ಶಹನಾಯಿಗೆ ಪೂರಾ ಮನ ಸೋತವ. ಹೀಗೊಮ್ಮೆ ಖಾನ್ ಸಾಹೇಬರಿಗೆ ಐಸೆನ್ ಹೋವರ್ ಕೇಳುತ್ತಾನೆ 'ಖಾನ್ ಸಾಹೇಬರೇ, ನೀವು ನಮ್ಮ ದೇಶಕ್ಕೆ ಬಂದು ನೆನೆಸಬಾರದೇಕೆ? ನಿಮಗೆ ಎಲ್ಲಾ ವ್ಯವಸ್ಥೆಗಳನ್ನು ನಾನು ಮಾಡಿಕೊಡುತ್ತೇನೆ'

ಬಿಸ್ಮಿಲ್ಲಾ ಖಾನ್ ರವರಿಗೆ ಈ ಆಹ್ವಾನ ಅನಿರೀಕ್ಷಿತವಾಗಿತ್ತು ಎನ್ನುವುದು ನಿಜ. ಹಾಗೆ ಅವರು ನಸುನಕ್ಕು ಹೇಳುತ್ತಾರೆ 'ಹೌದಾ ಸ್ವಾಮಿ, ಎಲ್ಲವನ್ನೂ ವ್ಯವಸ್ಥೆ ಮಾಡುವಿರಾ. ನನ್ನದು ದೊಡ್ಡ ಕುಟುಂಬ'

'ಆಗಲಿ, ನಿಮ್ಮ ಕುಟುಂಬದ ಆದಾಯದ ಎರಡರಷ್ಟು ನಾನು ವ್ಯವಸ್ಥೆ ಮಾಡುವೆ. ಅವರೂ ಸಂತಸದಲ್ಲಿ ಇರಬಹುದು. ನೀವೂ ಇರಬಹುದು' ಹೋವರರಿಗೆ ಅವರ ಕುಟುಂಬದಲ್ಲಿ 54 ಸದಸ್ಯರು ಇರುವುದರ ಅರಿವಿದೆ. ಈ ದೊಡ್ಡ ಸಂಸಾರದ ನಿರ್ವಹಣೆಗೆ ತಗಲುವ ವೆಚ್ಚವು ಗೊತ್ತು. ಅದನ್ನು ಗಮನದಲ್ಲಿರಿಸಿ ಸಿರಿವಂತ ದೇಶದ ಅಧ್ಯಕ್ಷ ಎಲ್ಲ ವ್ಯವಸ್ಥೆ ಮಾಡುವ ಮಾತನಾಡಿದ್ದ. ಆದರೆ ಸಾಹೇಬರಿಗೆ ಈ ಮಾತು ಪ್ರೀತಿ, ಕಾಳಜಿ, ಭರವಸೆಗಳಿಂದ ಸಂತೋಷವಾಗಿಲ್ಲ. ಹೇಳಲು ಹಿಂಜರಿಕೆ, ಏನೋ ಚಡಪಡಿಕೆ. ಇದನ್ನು ಗಮನಿಸಿದ ಹೋವರ್ 'ಮತ್ತೇನಾದರೂ ಆಗಬೇಕೇ? ಪ್ರಶ್ನೆ. ಸಾಹೇಬರನ್ನು ಬಿಡಬಾರದು, ಬಿಡಲಾಗದ ವರಾತ!

ಆಗ ಖಾನ್ ಸಾಹೇಬರು ಮ್ಲಾನ ಮುಖಭಾವದಿಂದ ಹೇಳುತ್ತಾರೆ 'ಹೌದು ತಾವು ಎಲ್ಲವನ್ನು ವ್ಯವಸ್ಥೆ ಮಾಡಬಲ್ಲಿರಿ. ಮನೆ ಕೊಡುವಿರಿ. ಹಣ ಕೊಡುವಿರಿ. ಅವೆಲ್ಲ ಸಿಗುತ್ತವೆ ನಿಜ. ಆದರೆ ನನಗೊಂದು ಕೊರತೆ ಕಾಡುತ್ತಿದೆ ಅದನ್ನು ನೀವು ತುಂಬಿಸಿ ಕೊಡಬಲ್ಲಿರಾ?' ಓ ಖಾನ್ ರವರದ್ದು ಅದೇನು ಕೋರಿಕೆ? ಏನಿದ್ದೀತು? 'ಹೇಳಿ ಏನದು?'

'ಅವೆಲ್ಲ ಸರಿ. ಆದರೆ ಪ್ರತಿ ಮುಂಜಾವಿನಲ್ಲಿ ನಾನು ಮನೆಯಿಂದ ಕಾಶಿ ವಿಶ್ವನಾಥನ ದೇವಸ್ಥಾನಕ್ಕೆ ನಡೆದು ಹೋಗುವ ರಸ್ತೆಗಳ ಇಬ್ಬದಿಗಳಲ್ಲೂ ವಾರಣಾಸಿಯ ಜನ ನನ್ನನ್ನು ಮಾತನಾಡಿಸುತ್ತಾರೆ. ಹಾರೈಸುತ್ತಾರೆ. ವಿಶ್ವನಾಥನ ದೇಗುಲದಲ್ಲಿ ಶಹನಾಯಿ ನುಡಿಸಿ ನಮಿಸುತ್ತೇನೆ. ಆ ಬೀದಿಗಳು, ಈ ಜನರನ್ನು, ವಿಶ್ವನಾಥನ ದೇಗುಲ, ಈ ವಾರಣಾಸಿಯನ್ನು ನೀವು ಅಮೆರಿಕದಲ್ಲಿ ಕೊಡಬಹುದೇ?'

ಐಸೆನ್ ಹೋವರ್ ಅವರ ಬಾಯಿ ತೆರೆದೇ ಇತ್ತು! ಖಾನ್ ಸಾಹೇಬರು ಕೇಳಿದ ಎಲ್ಲವೂ ಕಣ್ಮುಂದೆ ಹಾದು ಹೋದವು. ಆದರೆ ಅಮೆರಿಕದಲ್ಲಿ ಇವನ್ನೆಲ್ಲ ಎಲ್ಲಿಂದ ತರುವುದು? ಖಾನ್ ರ ಹೃದಯ ಮಿಡಿತ ಅರ್ಥವಾಗಿತ್ತು. ಬಿಸ್ಮಿಲ್ಲಾಖಾನರ ಕಡಿದುಕೊಳ್ಳದ ಕರುಳ ಸಂಬಂಧದ ಎದುರು ಅಮೆರಿಕದ ಅಧ್ಯಕ್ಷ ಸೋತು ಹೋಗಿದ್ದ!

ಕಡಿದುಕೊಳ್ಳಲಾಗದ ಕರುಳ ಸಂಬಂಧಗಳು

ಈ ವಾರ

ಎಸ್.ವೈ. ಗುರುಶಾಂತ್

ಭಾರತೀಯ ಸಮಾಜ, ಸಂಸ್ಕೃತಿ ಎನ್ನುವುದು ಇಂತಹ ಸಾವಿರಾರು ದಿಗ್ಗಜರು, ಲಕ್ಷಾಂತರ ವಿಭಿನ್ನ ಸಂಗತಿಗಳಿಂದ ವೈವಿಧ್ಯತೆ ಗಳಿಂದ ಹುಲುಸಾಗಿ ಬೆಳೆದು, ಬೆಳಗುತ್ತಾ ನಿಂತಿದೆ. ಸಂಘಪರಿವಾರದಂತೆ ಸಂಸ್ಕೃತಿಯ ಬಗೆಗೆ ಬಹುದೊಡ್ಡ ವ್ಯಾಖ್ಯಾನ ಮಾಡಲು ನೆಲದ ಮಕ್ಕಳಿಗೆ ಬರದೇ ಇರಬಹುದು. ಆದರೆ ಬದುಕಿನ ಸಣ್ಣ ಸಂಗತಿಗಳ ಎಳೆಗಳಿಂದ ಬಹುದೊಡ್ಡ ಸಂಸ್ಕೃತಿಯ ಸಂದೇಶವನ್ನು ನೇಯ್ದಿದ್ದಾರೆ.

ನಾಡಿನ ಎಲ್ಲಾ ಮೂಲೆ ಮೂಲೆಗಳಲ್ಲಿಯೂ ಸೌಹಾರ್ದದ ಶಿಖರವನ್ನು ಕಟ್ಟಿ ನಿಲ್ಲಿಸಿದ್ದಾರೆ. ನಮ್ಮದು ಭಾಷೆ, ಧರ್ಮ–ಜಾತಿಗಳ ಗಡಿ ಮೀರಿದ ಬಹುತ್ವದ ಸಂಸ್ಕೃತಿ. ಅದರ ಬಲದ ನೆಲೆ ಇರುವ ಸಂಸ್ಕೃತಿ ಪರಿವಾರಕ್ಕೆ ಸ್ಪಷ್ಟವಾಗಿ ಗೊತ್ತಿದೆ. ಅದ್ದರಿಂದಲೇ ಅದರ ಧ್ವಂಸಕ್ಕೆ ಟೊಂಕಕಟ್ಟಿ ನಿಂತಿರುವುದು. ಬಹುರಾಷ್ಟ್ರೀಯ ಬಂಡವಾಳಕ್ಕೆ ಏಕರೂಪಿ ಮಾರುಕಟ್ಟೆ ಅಗತ್ಯ ಇರುವಂತೆ ಅಂತಹ ಮಾರುಕಟ್ಟೆಗೆ ಬಹುಸಂಸ್ಕೃತಿಯ ಆಚಾರ–ವಿಚಾರ ಅಭಿರುಚಿಯ ವೈರುಧ್ಯಗಳನ್ನು ಒಡೆದು ಏಕ ಚಿಂತನೆ ಅಭಿರುಚಿಗೆ ಅಗತ್ಯವಿರುವ ಚಿಂತನೆ ಮಾರುಕಟ್ಟೆಯ ಮನೋಭಾವ ನಿರೂಪಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಬಡವರು ದುರ್ಬಲರು ದುಡಿಯುವವರ ಜೀವ ಹಿಂಡಿ ಲಾಭಗಳಿಸುವ ಧಾವಂತದಲ್ಲಿದ್ದಾರೆ.

ಮತಧರ್ಮದ ಯಜಮಾನಿಕೆಯ ಹೇರಿಕೆಯಲ್ಲಿ ಜಾತಿ ವ್ಯವಸ್ಥೆಯ ಹಿರಿಮೆಯ ಪಾರಮ್ಯ ಅಡಗಿದೆ.

ಇಲ್ಲಿ ಮುಸ್ಲಿಮರು ಅಂಗಡಿ ಹಾಕಕೂಡದು ಎಂದು ಫರ್ಮಾನು ಹೊರಡಿಸಿರುವ ಕಾಪು ವಿನ ಮಾರಿಗುಡಿಯಲ್ಲಿ ತಲೆತಲಾಂತರದಿಂದಲೂ ನಾದಸ್ವರ ನುಡಿಸುವುದು ಶೇಕ್ ಜಲೀಲ್ ಸಾಹೇಬರ ವಂಶಸ್ಥರು. ಏಳು ದಿನಗಳು ನಡೆಯುವ ಶೃಂಗೇರಿ ಕಿಗ್ಗದ ಋಷ್ಯಶೃಂಗ ಜಾತ್ರೆಯಲ್ಲಿ ಮಳೆ ದೇವರು ಎಂದು ಆರಾಧಿಸುವ ದೈವಕ್ಕೆ ನಡೆದುಕೊಳ್ಳುವವರು ಹಿಂದೂ–ಮುಸ್ಲಿಂ–ಜೈನ ಮುಂತಾದ ಧರ್ಮೀಯರು. ಶಿರಸಿಯ ಮಾರಿಕಾಂಬ ಜಾತ್ರೆಯಲ್ಲಿ ರಥ ಎಳೆಯಲು ಹಗ್ಗ ಕೊಡುವವರು ಮುಸ್ಲಿಂ ತೊನ್ಸೆ ಕುಟುಂಬ. ಇದನ್ನು ತಮ್ಮ ಪಾಲಿನ ಕರ್ತವ್ಯ ಎಂದು ಬಗೆದಿರುವ ಅವರು ಪಾರಂಪಾರಿಕವಾಗಿ ಅತ್ಯಂತ ಹೆಮ್ಮೆಯಿಂದ ನಿರ್ವಹಿಸುತ್ತಾರೆ. ಇಂತಹುದು ಒಂದೆರಡು ಕಡೆಗಳಲ್ಲಿ ಅಲ್ಲ, ನಾಡಿನ ತುಂಬಾ ತನ್ನದೇ ಆದ ವಿಶಿಷ್ಟವಾಗಿ ವ್ಯಾಪಿಸಿ ಜನಜೀವನದ ಒಳಗೆ ಹಾಸುಹೊಕ್ಕಾಗಿರುವ ಬಿಡಿಸಲಾಗದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಬಂಧಗಳು.

ಹಬ್ಬ, ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಸ್ಥರು ಅಂಗಡಿಗಳನ್ನು ಹಾಕಬಾರದು, ವ್ಯಾಪಾರ ಮಾಡಕೂಡದು ಎಂದು ಅವರನ್ನು ದೂರವಾಗಿರಿಸುವ ಕೃತ್ಯಗಳು ಈ ವಾರದಲ್ಲಿಯೂ ಮುಂದುವರೆದಿವೆ. ಹೊಸ, ಹೊಸ ಪ್ರದೇಶಗಳಿಗೂ ವಿಸ್ತರಿಸುತ್ತಿವೆ. ಕಾಪು, ಶಿವಮೊಗ್ಗದ ಬಳಿಕ ಈಗ ಬೆಂಗಳೂರಿನ ನೆಲಮಂಗಲ, ಹಾಸನದ ಬೇಲೂರು, ಹೀಗೆ ಸಾಂಕ್ರಾಮಿಕ ರೋಗದಂತೆ ಇದು ಹಬ್ಬುತ್ತಿದೆ ಇದರಲ್ಲಿ ಆರೆಸ್ಸೆಸ್–ಬಿಜೆಪಿ, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಗಳು ಸಕ್ರಿಯವಾಗಿ ತೊಡಗಿವೆ. ಬೆಳಗಾವಿಯಲ್ಲಿ ಮಾತನಾಡಿದ ಶ್ರೀರಾಮಸೇನೆ ಮುಖಂಡ ಪ್ರಮೋದ್ ಮುತಾಲಿಕ್ ರಾಜ್ಯದ ಎಲ್ಲಾ ಮುಸ್ಲಿಮರೊಂದಿಗೆ ವ್ಯಾಪಾರವನ್ನೇ ಮಾಡಕೂಡದು, ಏನನ್ನು ಖರೀದಿಸಬಾರದು ಎಂಬ ಬಹಿಷ್ಕಾರ ಆಂದೋಲನವನ್ನು ರಾಜ್ಯದಾದ್ಯಂತ ನಡೆಸುವುದಾಗಿ ಹೇಳಿದ್ದಾರೆ. ಹೀಗೆ ಹಬ್ಬ, ಜಾತ್ರೆಗಳಲ್ಲಿ ಮುಸ್ಲಿಮರನ್ನು ವ್ಯಾಪಾರದಿಂದ ದೂರವಿರಿಸಿದ ಜಾಗಗಳಲ್ಲಿ ವಿಶ್ವಹಿಂದೂ ಪರಿಷತ್–ಬಜರಂಗದಳ ಮುಂತಾದ ಸಂಘಪರಿವಾರದ ಅವರ ನಡುವೆ ವ್ಯಾಪಾರ ಹಂಚಿಕೆ ಮಾಡಿರುವುದು ತಿಳಿದು ಬಂದಿದೆ. ಹೀಗಾಗಿ ಮೂಲದಲ್ಲಿ ಈ ವಿವಾದ ಈಗಿರುವ ವ್ಯಾಪಾರಿಗಳನ್ನು ಅಲ್ಲಿಂದ ಹೊರದಬ್ಬಿ ಅದನ್ನು ಕಬಳಿಸುವ ಹುನ್ನಾರವು ಆಗಿದೆ.

ಈ ಪ್ರಕರಣಗಳ ಬಗ್ಗೆ ಪ್ರಶ್ನೆಗಳನ್ನೆತ್ತಿ ಸರಕಾರ ಮಧ್ಯಪ್ರವೇಶಿಸಲು ವಿರೋಧ ಪಕ್ಷಗಳ ನಾಯಕರು ಕೋರಿದಾಗ ಸರಕಾರದ ಉತ್ತರ ಎಲ್ಲವನ್ನೂ ಬಯಲುಗೊಳಿಸಿದೆ! ಮುಜರಾಯಿ ಇಲಾಖೆಯ ಧಾರ್ಮಿಕ ದತ್ತಿ ಕಾನೂನಿಗೆ 2002ರಲ್ಲಿ ತಂದ ತಿದ್ದುಪಡಿಯನ್ವಯ ಹಿಂದೂಯೇತರರಿಗೆ ಅವಕಾಶ

ಪುಟ 6 ಕ್ಕೆ

ವರದಿ: ವಾ.ಉ.

ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ ಕೊಲೆಗೆ 6 ವರ್ಷ
ಎಸ್.ಐ.ಟಿ. ತನಿಖೆಗೆ ಆಗ್ರಹ

ವೆಂಕಟರಮಣ ಸ್ವಾಮಿ ದೇವಸ್ಥಾನ ಇರುವುದು ಮಂಗಳೂರು ನಗರದ ಕೇಂದ್ರ ಸ್ಥಳವಾದ ರಥಬೀದಿಯಲ್ಲಿ. ಕೊಂಕಣಸ್ಥರು ಅಥವಾ ಕೊಂಕಣಿಗರು ಎಂದು ಕರೆಯಲ್ಪಡುವ ಗೌಡಸಾರಸ್ವತ ಬ್ರಾಹ್ಮಣ (ಜಿಎಸ್‌ಬಿ) ಜಾತಿಯವರ ಒಡೆತನದ ದೇವಸ್ಥಾನವಿದು. ವ್ಯಾಪಾರವೇ ಪ್ರಮುಖ ಕಸುಬು ಈ ಜಾತಿಯವರದಾಗಿರುವುದರಿಂದ ಉತ್ತಮ ಆದಾಯವುಳ್ಳ ದೇವಸ್ಥಾನವೂ ಆಗಿದೆ. ಈ ಜಾತಿಯವರ ಗುರುಪೀಠ ಕಾಶೀಮಠವೂ ದೇವಸ್ಥಾನದ ಸಮೀಪದಲ್ಲೇ ಇದ್ದು, ಕರಾವಳಿಯ ಎಲ್ಲ ಜಿಎಸ್‌ಬಿ ವೆಂಕಟರಮಣ ದೇವಸ್ಥಾನಗಳೂ ಜಾತ್ಯಸ್ಥರೂ ಕಾಶೀಮಠದಿಂದಲೇ ಧಾರ್ಮಿಕ ಮಾರ್ಗದರ್ಶನ ಪಡೆಯುತ್ತಾರೆ. ಮಂಗಳೂರಿನ ವೆಂಕಟರಮಣ ದೇವಸ್ಥಾನಕ್ಕೆ ಆಡಳಿತ ನಡೆಸಲು ಟ್ರಸ್ಟ್ ಕೂಡಾ ಇದೆ.

ಸಂಪತ್ತು ಜಮೆಯಾಗಿರುವಲ್ಲಿ ಬಿಲಗಳೂ ಇಲಿಗಳೂ ಇರುವುದು ಸಾಮಾನ್ಯ. ಅದರಲ್ಲೂ ಬೇಲಿಯೇ ಹೊಲ ನುಂಗಿದರೇ? ಹಾಗೆ ಆಗಬಾರದೆಂದು ಕಣ್ಣಲ್ಲಿ ಎಣ್ಣೆ ಇಟ್ಟು ಕಾಯುವ ಸತ್ಯಸಂಧರೂ ಪ್ರಾಮಾಣಿಕರೂ ಈ ಕಾಲದಲ್ಲಿ ಇದ್ದಾರೆ. ಅಂಥವರಲ್ಲೊಬ್ಬರು 6 ವರ್ಷಗಳ ಹಿಂದೆ 2016 ಮಾರ್ಚ್ 21 ರಂದು ಕೊಲೆಯಾದ ವಿನಾಯಕ ಬಾಳಿಗ.

ವಿನಾಯಕ ಬಾಳಿಗ ಕೌಟುಂಬಿಕ ಹಿನ್ನಲೆ:

ಕೊಂಕಣಿಗರಲ್ಲಿ ಬಹುಪಾಲು ಲಾಗಾಯ್ತಿನಿಂದಲೂ ಆರೆಸ್ಸೆಸ್ ಬೆಂಬಲಿಗರು. ಆರೆಸ್ಸೆಸ್ ರಾಷ್ಟ್ರಪ್ರೇಮಿ ಸಂಘಟನೆಯೆಂದು ಭ್ರಮಿಸಿ ನಂಬಿದವರು. ಹಾಗಾಗಿ ಅವರಲ್ಲಿ ಆರೆಸ್ಸೆಸ್ ಪರಿವಾರದ ಜನಸಂಘದ ಕಾರ್ಯಕರ್ತರೂ ಈಗ ಬಿಜೆಪಿಯ ಕಾರ್ಯಕರ್ತರೂ ಹೆಚ್ಚಿಗೆ ಇದ್ದಾರೆ. ಆರೆಸ್ಸೆಸ್ ಮತ್ತು ಆರೆಸ್ಸೆಸ್ ಪ್ರಾಯೋಜಿತ ಪಕ್ಷಗಳು ಮಾತ್ರ ಭ್ರಷ್ಟಾಚಾರವನ್ನು ಆಗಗೊಡವು ಎಂದು ದೃಢವಾಗಿ ನಂಬುತ್ತಾರೆ. ಅಂತ ಕುರುಡು ನಂಬಿಕೆ ಹೊತ್ತು ಆರೆಸ್ಸೆಸ್ ಮತ್ತು ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತ ಆಗಿದ್ದವರು ವಿನಾಯಕ ಬಾಳಿಗ.

ವೆಂಕಟರಮಣ ದೇವಸ್ಥಾನದಿಂದ ನವಭಾರತ ಸರ್ಕಲ್‌ಗೆ ತಿರುಗಿ ಶಾರದಾ ವಿದ್ಯಾಲಯ ದಾಟಿ ಕೊಡಿಯಾಲಬೈಲಿನಲ್ಲಿ ಇದೆ ವಿನಾಯಕ ಬಾಳಿಗರ ಮನೆ. ವಿದ್ಯುತ್ ಸಲಕರಣೆಗಳ ಪೂರೈಕೆದಾರರಾಗಿ ಜೀವನ ನಿರ್ವಹಣೆ ಅವರದು. ಐದಾರು ಸೆಂಟ್ಸ್ ಜಾಗದಲ್ಲಿ ಬಹಳ ಹಿಂದೆಯೇ ಹಂಚಿನ ಉಪ್ಪರಿಗೆ ಮನೆಯನ್ನೇನೋ ಅವರ ತಂದೆ ಕಟ್ಟಿಸಿದ್ದರು. ತನ್ನ ಬೆನ್ನಿಗೆ ನಾಲ್ವರು ತಂಗಿಯರಿದ್ದುದಕ್ಕೆ ವಿನಾಯಕ ಮದುವೆ ಆಗಲೇ ಇಲ್ಲ. ಇಬ್ಬರಿಗೆ ಮದುವೆಯಾಯಿತು. ಇನ್ನಿಬ್ಬರಿದ್ದಾರೆ. ತನಗೆ 45 ವರ್ಷ ಆಗಿದ್ದರೂ ತಂಗಿಯರ ಕಾರಣ ಮದುವೆಯಾಗಲಿಲ್ಲ. ಆರೆಸ್ಸೆಸ್ ತರಬೇತಿ ಹೊಂದಿ ಅದರ ಮಾರ್ಗದರ್ಶನದಲ್ಲಿ ಕೆಲಸ ಮಾಡುವುದು ಅವರ ಶ್ರದ್ಧೆ. ಪರಮ ದೈವಭಕ್ತ. ಬೆಳಿಗ್ಗೆ ಎದ್ದು ಮೊತ್ತ ಮೊದಲು ಮಾಡುವ ಕೆಲಸವೆಂದರೆ ಒಂದೂವರೆ ಕಿ.ಮೀ.ದೂರದ ವೆಂಕಟ್ರಮಣ ದೇವಸ್ಥಾನಕ್ಕೆ ತೆರಳಿ ಕೈಮುಗಿದು ಬರುವುದು. ದೇವಸ್ಥಾನದ ಎಲ್ಲ ಕೆಲಸಗಳಲ್ಲೂ ಉತ್ಸುಕ, ಸದಾ ತೊಡಗಿರುವವರು. ಅಂತೆಯೇ ದೇವಸ್ಥಾನದ ಕಾಣಿಕೆ, ದೇಣಿಗೆ ಹಾಗೂ ಉತ್ಸವ ಖರ್ಚುಗಳ ಬಗ್ಗೆ ನಿಗಾ ಇಡುತ್ತಿರುವವರು. ಈ ಪ್ರವೃತ್ತಿ ಮಂಗಳೂರಿನ ಪಾಲಿಕೆಯ ಹಾಗೂ ಸರಕಾರದ ಕಾಮಗಾರಿಗಳ ಬಗ್ಗೆಯೂ ಹದ್ದುಗಣ್ಣಿಡುವುದಕ್ಕೆ ಪ್ರೇರೇಪಣೆ ನೀಡಿತು.

ವಿನಾಯಕ ಬಾಳಿಗ ಕೊಲೆಯ ಹಿನ್ನಲೆ:

ಮಂಗಳೂರು ನಗರಪಾಲಿಕೆ, ವಿದ್ಯುತ್ ಇಲಾಖೆ, ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಲ್ಲಿ ಭ್ರಷ್ಟಾಚಾರದ ಸುಳಿವು ಕಂಡಾಗಲೆಲ್ಲ ಆರ್‌ಟಿಐ ಕಾಯ್ದೆ ಬಳಸಿಕೊಂಡು ಮಾಹಿತಿ ಪಡೆಯುವ ಕಾರ್ಯಕರ್ತನಾಗಿ ಪ್ರಬುದ್ಧರಾದರು ವಿನಾಯಕ ಬಾಳಿಗ. ಹಲವು ಹಗರಣಗಳನ್ನು ಬಯಲಿಗೆಳೆದರು. ಹಲವು ಪ್ರಕರಣದಲ್ಲಿ ಸರಕಾರಿ ಹಣ ಸೋರಿ ಹೋಗುವುದನ್ನು ತಡೆದರು. ಆದರೆ ಯಾವಾಗ ವೆಂಕಟರಮಣ ದೇವಸ್ಥಾನದ ಹಣಕಾಸು ಲೆಕ್ಕಾಚಾರವನ್ನು ಆರ್‌ಟಿಐನಲ್ಲಿ ವಿವರ ಪಡೆಯಲು ನ್ಯಾಯಾಲಯದವರೆಗೆ ಮುಂದುವರಿದರೋ, ಅದು ಅವರ ಪ್ರಾಣಕ್ಕೇ ಸಂಚಕಾರವಾಯ್ತು.

ಜಿಎಸ್‌ಬಿ ಸಮುದಾಯದ ವಂಚಕ ಕುಳಗಳು ವೆಂಕಟ್ರಮಣ ದೇವಸ್ಥಾನದ ಆಡಳಿತದಲ್ಲಿ ಸೇರಿಕೊಂಡಿದ್ದವು. ಅವರಿಗೆ ವಂಚನೆ ಮಾಡಲು ಮಾರ್ಗದರ್ಶನ ನೀಡುವಲ್ಲಿ ಕೆಲವರು ಸಜಾತಿಯ ಬಿಜೆಪಿ ಮುಖಂಡರುಗಳೂ ಇದ್ದಾರೆನ್ನುವುದು ಬಾಳಿಗರ ಅನುಮಾನವಾಗಿತ್ತು. ಈ ಗೋಲ್‌ಮಾಲ್ ಇನ್ನೇನು ಬೇಗನೇ ಬಹಿರಂಗವಾಗಬಹುದು ಎಂದು ಅವರು ನಿರೀಕ್ಷಿಸಿದ್ದರು. 2016 ಎಪ್ರಿಲ್ 1 ರಂದು ನ್ಯಾಯಾಲಯದ ಮುಂದೆ ದೇವಸ್ಥಾನದ ಹಣಕಾಸು ದಾಖಲೆಗಳನ್ನು ದೇವಸ್ಥಾನದ ಟ್ರಸ್ಟಿಗಳು ಹಾಜರುಪಡಿಸಲು ಆದೇಶ ಹೊರಟಿತ್ತು. ಅದಕ್ಕಿಂತ 10 ದಿನ ಮೊದಲೇ ವೃತ್ತಿಪರ ಕೊಲೆಗಡುಕರಿಂದ ಬಾಳಿಗರ ಕೊಲೆ ಅವರ ಮನೆ ಸಮೀಪ ಬೀದಿಯಲ್ಲೇ ನಡೆಯಿತು.


ವಿನಾಯಕ ಬಾಳಿಗರ ಕೊಲೆಯನ್ನು ಮಾಡಿಸಿದವರು ರಾಜಕೀಯವಾಗಿ ಎಷ್ಟೊಂದು ಪ್ರಬಲರೆಂದರೆ, ಅವರನ್ನು 6 ವರ್ಷಾಗಳಾದರೂ ಇನ್ನೂ ಪೊಲೀಸ್ ಇಲಾಖೆ ತನಿಖೆ ಮೂಲಕ ಗುರುತಿಸಿಲ್ಲ. ಒಬ್ಬ ಪ್ರಮುಖ ಆರೋಪಿ ಮೇಲಿನ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದಾನೆ. ಜಾಮೀನು ಶರ್ತಗಳನ್ನು ಕಡೆಗಣಿಸಿ ಆತ ದೇವಸ್ಥಾನದ ಆವರಣಕ್ಕೆ ಪದೇ ಪದೇ ಹೋಗುತ್ತಿದ್ದಾನೆ. ಇನ್ನೂ ಚಾರ್ಜುಶೀಟ್ ಸಲ್ಲಿಕೆಯಾಗಿಲ್ಲ. ಎಸ್‌ಐಟಿ ಮೂಲಕ ತನಿಖೆ ನಡೆಸಬೇಕೆಂಬ ಬಾಳಿಗರ ತಂಗಿಯರ ಕೋರಿಕೆಯನ್ನು ಹಳ್ಳ ಹಿಡಿಸಲಾಗಿದೆ. ವಿಶೇಷ ತನಿಖಾ ಅಧಿಕಾರಿಯನ್ನು ಸರಕಾರ ಒಮ್ಮೆ ನೇಮಿಸಿದಾಗ, ಪ್ರಥಮ ಆರೋಪಿಯು ಕಾಣಿಸಿದ ಕ್ಷುಲ್ಲಕ ಕಾರಣಗಳಿಗಾಗಿ ನೇಮಕಾತಿ ರದ್ದುಗೊಳಿಸಲಾಯಿತು. ಆ ಬಳಿಕ ಬಹಳ ಕಾಲದಿಂದಲೂ ವಿಶೇಷ ತನಿಖಾಧಿಕಾರಿಯ ನೇಮಕವಾಗಲೀ, ಎಸ್‌ಐಟಿ ಕೋರಿಕೆಗಾಗಿ ಕ್ರಮವನ್ನೂ ಪೊಲೀಸು ಇಲಾಖೆ ಕೈಗೊಂಡಿಲ್ಲ. ರಾಜ್ಯ ಆಡಳಿತದಲ್ಲಿರುವ ಬಿಜೆಪಿ ಪಕ್ಷದ ಪ್ರಧಾನ ಪಾತ್ರವಲ್ಲದೆ ಹಾಗೆ ಆಗಲು ಸಾಧ್ಯವೇ ಇಲ್ಲ.

ಕೈಕೊಟ್ಟ ಬಿಜೆಪಿ ಮತ್ತು ಸಂಘ ಪರಿವಾರ:

ವಿನಾಯಕ ಬಾಳಿಗ ಬಿಜೆಪಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಎಲ್ಲಾ ಚುನಾವಣೆಗಳಲ್ಲೂ ಪಕ್ಷದ ವಾರ್ಡು ಕಾರ್ಯಕರ್ತನಾಗಿ ಸಕ್ರಿಯರಾಗಿದ್ದರೆಂದು ಸ್ಥಳೀಯರು, ತಂಗಿಯರು ತಿಳಿಸುತ್ತಾರೆ. ಆದಾಗ್ಯೂ ಅವರ ಕೊಲೆಯಾದ ಬಳಿಕದ 6 ವರ್ಷಗಳಲ್ಲಿ ಯಾವೊಬ್ಬ ಬಿಜೆಪಿ ನಾಯಕರೂ ಅವರ ಮನೆಗೆ ಭೇಟಿ ನೀಡಿಲ್ಲ. ಸ್ಥಳೀಯ ಬಿಜೆಪಿ ಶಾಸಕನಾಗಲೀ, ಜಿಲ್ಲೆಯ ಸಂಸದರಾಗಲೀ ಅಥವಾ ಪಕ್ಷದ ಜಿಲ್ಲಾ, ನಗರ ಮುಖ್ಯಸ್ಥರಾಗಲೀ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ನೀಡಿಲ್ಲ. ಜಿಎಸ್‌ಬಿ ಸಮುದಾಯದ ಬಿಜೆಪಿ ಗಣ್ಯನೇ ಪ್ರಧಾನ ಆರೋಪಿಯಾಗಿದ್ದು, ಆತನ ಸಂರಕ್ಷಣೆಗಾಗಿಯೇ ಬಿಜೆಪಿ ನಾಯಕರು ಕೊಲೆಯಾದವನ ಮನೆಗೆ ಭೇಟಿ ನಿಡಿಲ್ಲವೆಂಬುದು ಸ್ಪಷ್ಟ. ಕೊಲೆ ಆಪಾದಿತರು ಬಿಜೆಪಿಯೇತರ ಪಕ್ಷದವರಾಗಿದ್ದರೆ, ಸಂಘ ಪರಿವಾರದವರು ಅದನ್ನು ಒಂದು ಘೋರ ಪ್ರಸಂಗವಾಗಿ ಮಾಡಿ ಜಿಲ್ಲೆಯನ್ನೇ ಒಂದು ರಣರಂಗವಾಗಿಸುತ್ತಿದ್ದರು. ವಿನಾಯಕ ಬಾಳಿಗರ ಸಾವಿನಿಂದ ಆತನ ಕುಟುಂಬ ತುಂಬ ನಿರ್ಗತಿಕವಾಗಿದೆ. ಅವಿವಾಹಿತ ತಂಗಿಯರಿಬ್ಬರು ಮನೆಯಲ್ಲೇ ಇದ್ದು, ಕಡಿಮೆ ಗಳಿಕೆಯ ಉದ್ಯೋಗ ಮಾಡಿ ಜೀವಿಸುತ್ತಿದ್ದಾರೆ. ಯಾರೂ, ಸರಕಾರವೂ ಕೂಡಾ ಏನೂ ಆರ್ಥಿಕ ಪರಿಹಾರಗಳನ್ನು ಈ ಕುಟುಂಬಕ್ಕೆ ನೀಡಿಲ್ಲ. ವಿನಾಯಕರ ಸಾವಿನ ವೇಳೆ ಅವರ ತಂದೆ ತಾಯಿಗಳಿನ್ನೂ ಬದುಕಿದ್ದರು. ಮಗನ ಸಾವಿನ ಕೊರಗಿನಿಂದ ತಾಯಿ 9 ತಿಂಗಳ ಬಳಿಕ ತೀರಿಕೊಂಡರು, ತಂದೆ ಇನ್ನೊಂದು ವರ್ಷದ ಬಳಿಕ ತೀರಿಕೊಂಡರು. ತಮ್ಮ ಅಣ್ಣನಿಗೆ ನ್ಯಾಯ ಸಿಗಬೇಕೆಂದು ತಂಗಿಯರಿಬ್ಬರು–ಅನುರಾಧಾ ಮತ್ತು ಹರ್ಷಾ ಕೋರ್ಟಿಗೆ ಅಲೆಯುತ್ತಿದ್ದಾರೆ. ವೆಂಕಟರಮಣನಲ್ಲೂ ಮೊರೆ ಇಡುತ್ತಿದ್ದಾರೆ.

ಪ್ರೊ. ನರೇಂದ್ರ ನಾಯಕ್ ಪ್ರತಿಭಟನಾ ಕಣಕ್ಕೆ:

ಖ್ಯಾತ ವಿಚಾರವಾದಿ ಹಾಗೂ ಮಾನವ ಹಕ್ಕು ಹೋರಾಟಗಾರರಾದ ಪ್ರೊ.ನರೇಂದ್ರ ನಾಯಕ್ ಸಾಮಾನ್ಯವಾಗಿ ಸಂಘ ಪರಿವಾರದ ಕಾರ್ಯಕರ್ತರ ಬಗ್ಗೆ ಆಸಕ್ತಿ ಹೊಂದಿದವರಲ್ಲ. ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ ಪ್ರಾಮಾಣಿಕ ಎಂದು ಹಿರಿಯ ಪೊಲೀಸ್ ಅಧಿಕಾರಿಗಳಿಂದಲೇ ಅವರಿಗೆ ತಿಳಿದು ಬಂತು. ವೆಂಕಟರಮಣ ದೇವಸ್ಥಾನದಲ್ಲಿ ಗೋಲ್‌ಮಾಲ್ ನಡೆಯುತ್ತಿರುವ ಬಗ್ಗೆ ಅವರಿಗೆ ಊಹೆ ಇದ್ದರೂ ಸಾಕ್ಷ್ಯ ಸಿಕ್ಕಿರಲಿಲ್ಲ. ಬಾಳಿಗ ಆ ಸಾಕ್ಷ್ಯಗಳನ್ನು ಕಂಡುಕೊಳ್ಳುವ ಹಂತಕ್ಕೆ ಬಂದಿದ್ದರು. ಮತ್ತು ಅದರಿಂದಾಗಿಯೇ ಅವರ ಕೊಲೆಯಾಯಿತು ಎಂಬುದು ನರೇಂದ್ರ ನಾಯಕ್ ಅವರಿಗೆ ಬಾಳಿಗ ತೀರಿಕೊಂಡ 2–3 ದಿನಗಳಲ್ಲೇ ದೃಢವಾಯಿತು. ಬಾಳಿಗರ ಆರೆಸ್ಸೆಸ್ ಹಿನ್ನೆಲೆ ಪ್ರೊ.ನಾಯಕರಿಗೆ ಒಪ್ಪಿತವಲ್ಲದಿದ್ದರೂ, ಪ್ರಾಮಾಣಿಕತೆಗಾಗಿ ಭ್ರಷ್ಟಾಚಾರ ವಿರೋಧಕ್ಕಾಗಿ ಕೊಲೆಯಾದರೆಂಬುದಕ್ಕಾಗಿ ಕಳವಳಪಟ್ಟರು. ಕೊಲೆಗಡುಕರು ಕಾನೂನುಕ್ರಮಕ್ಕೆ ಒಳಗಾಗಬೇಕೆಂದು ಮುನ್ನುಗ್ಗಿ ಪ್ರಯತ್ನಿಸಿದರು.



ದೇಶಪ್ರೇಮಿ ಸಂಘಟನೆಗಳ ಒಕ್ಕೂಟದ 6 ವರ್ಷಗಳ ನಿರಂತರ ಹೋರಾಟ:


ವಿಚಾರವಾದಿ ಸಂಘ, ಡಿವೈಎಫ್ಐ, ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಎಡ ರಾಜಕೀಯ ಪಕ್ಷಗಳು, ಎಡ ಕಾರ್ಮಿಕ ಸಂಘಟನೆಗಳು, ಬಳಕೆದಾರರ ಸಂಘಟನೆ ಒಟ್ಟುಗೂಡಿ ದೇಶಪ್ರೇಮಿ ಸಂಘಟನೆಗಳ ಒಕ್ಕೂಟ ರಚಿಸಿಕೊಂಡು ವಿನಾಯಕ ಬಾಳಿಗ ಹತ್ಯೆ ತನಿಖೆಗಾಗಿ ಸರಕಾರವನ್ನು ಒತ್ತಾಯಿಸುತ್ತಿವೆ. ಪ್ರೊ.ನರೇಂದ್ರ ನಾಯಕರ ಮಾರ್ಗದರ್ಶನ ಈ ಹೋರಾಟಕ್ಕಿದೆ. ಮೊದಮೊದಲು ಜಿಎಸ್‌ಬಿ ಕೊಂಕಣಿ ಸಮುದಾಯದವರು ಈ ಹೋರಾಟದ ಜೊತೆಗೂಡಲು ಹಿಂಜರಿಯುತ್ತಿದ್ದರು. ಯಾಕೆಂದರೆ ಪ್ರಥಮ ಆರೋಪಿ ಅಷ್ಟೊಂದು ಪ್ರಭಾವಿಯಾಗಿದ್ದ. ಆದರೆ ನಿಧನಿಧಾನ ಅವರೂ ಜೊತೆಗೂಡುತ್ತಿದ್ದಾರೆ. ಪ್ರತಿ ವರ್ಷ ಮಾರ್ಚ್ 21 ವಿನಾಯಕ ಬಾಳಿಗ ಕೊಲೆಯಾದ ದಿನ ಒಕ್ಕೂಟದ ವತಿಯಿಂದ ವೆಂಕಟರಮಣ ದೇವಸ್ಥಾನದಿಂದ ಬಾಳಿಗ ಮನೆಯವರೆಗೆ ಪ್ರತಿಭಟನಾ ಪಾದಯಾತ್ರೆ ನಡೆದು ಮನೆಯಂಗಳದಲ್ಲಿ ಸಭೆ ಸೇರಿ ಕೋರ್ಟ್ ಹಾಗೂ ಪೊಲೀಸ್ ತನಿಖೆ ಯಾವ ಹಂತ ತಲುಪಿದೆ, ಮುಂದೇನು ಮಾಡಬೇಕು ಎಂಬ ಚರ್ಚೆ ನಡೆಯುತ್ತಿದೆ. ಇದೇ 2022ರ ಮಾರ್ಚ್ 21 ರಂದು ದೊಡ್ಡ ಸಂಖ್ಯೆಯಲ್ಲಿ ಪಾದಯಾತ್ರೆಗೆ ಜನ ಸೇರಿದ್ದರು.

ಬಾಳಿಗ ಮನೆಗೆ ಭೇಟಿಯಿತ್ತ ಬೃಂದಾಕಾರಟ್:

ಮಾರ್ಚ್ 21 ರಂದು ಬೆಳಿಗ್ಗೆ ಮಂಗಳೂರಿನ ಪುರಭವನದಲ್ಲಿ ಸಿಪಿಐ(ಎಂ) ಪಕ್ಷ ಏರ್ಪಡಿಸಿದ್ದ 'ಸೌಹಾರ್ದತಾ ಸಮಾವೇಶದಲ್ಲಿ ಭಾಗವಹಿಸಲು ಮಂಗಳೂರಿಗೆ ಆಗಮಿಸಿದ್ದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯೆ ಕಾ.ಬೃಂದಾ ಕಾರಟ್ ಬಾಳಿಗ ಮನೆಗೆ ಭೇಟಿಯಿತ್ತು ಅವರ ತಂಗಿಯರಿಗೆ ಸಾಂತ್ವನಾ ಹೇಳಿದರು. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ತಮ್ಮಿಂದ ಸಾಧ್ಯವಾದ ಎಲ್ಲ ಸಹಕಾರ ತನಿಖೆಯಲ್ಲಿ ಕೊಡಿಸುವುದಾಗಿ ಅವರಿಗೆ ಭರವಸೆಯಿತ್ತರು.

ವಿನಾಯಕ ಬಾಳಿಗಾ ಅವರ ದುಃಖತಪ್ತ ಸಹೋದರಿಯರೊಂದಿಗೆ





ಹೋರಾಟದ ಮುಂಚೂಣಿಯಲ್ಲಿರುವ ಪ್ರೊ. ನರೇಂದ್ರ ನಾಯಕ್ ಅವರೊಂದಿಗೆ ಚರ್ಚೆಯಲ್ಲಿ

ಹಿಂದುಳಿದ ವರ್ಗಗಳ ಮೀಸಲಾತಿ........ ಪುಟ 3 ರಿಂದ

ಜನಾದೇಶ ನೀಡಬಹುದು. ಹಾಗಾದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಹಿನ್ನಡೆ ಅನುಭವಿಸುವ ಆತಂಕವೂ ಅದಕ್ಕಿದೆ. ಹೀಗಾಗಿ ತನ್ನ ರಾಜಕೀಯ ಅಧಿಕಾರದ ಆಸೆಗಾಗಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಬಲಿಕೊಡುವ ಅಪಾಯಕಾರಿ ನಿರ್ಧಾರ ಈಗಿನ ಬಿಜೆಪಿ ಸರ್ಕಾರಕ್ಕೆ ಇದ್ದಂತಿದೆ.

ಹಾಗಾಗಿ ಯಾವುದೇ ಕಾರಣಕ್ಕೆ ಚುನಾವಣೆಗಳನ್ನು ಮುಂದೂಡಬಾರದು. ಹಿಂದುಳಿದ ವರ್ಗಗಳಿಗೆ ಈಗಿರುವಂತೆ ಉಳಿಸಿ ಚುನಾವಣೆ ನಡೆಯಬೇಕು. ನ್ಯಾಯಾಲಯವೂ ಕ್ರಮವಹಿಸಬೇಕು.

ಹಾಗಾಗಿ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಸಮಾನತೆ, ಸಾಮಾಜಿಕ ನ್ಯಾಯ, ಸಂವಿಧಾನಾತ್ಮಕ ಪ್ರಜಾಪ್ರಭುತ್ವೀಯ ಮೌಲ್ಯಗಳನ್ನು ಸಂರಕ್ಷಿಸುವ ದಿಕ್ಕಿನಲ್ಲಿ ಜನತೆ ಹಾಗೂ ಜನಪರ ರಾಜಕೀಯ ಶಕ್ತಿಗಳು ತೀವ್ರ ಮಧ್ಯಪ್ರವೇಶ ಮಾಡುವ ಅಗತ್ಯವಿದೆ.

ಮಂಗಳೂರಿನಲ್ಲಿ ಸೌಹಾರ್ದ ಸಮಾವೇಶ

ಸಂಘ ಪರಿವಾರದಿಂದ ದೇಶದ ಏಕತೆ, ವೈವಿಧ್ಯತೆ, ಐಕ್ಯತೆಗೆ ಧಕ್ಕೆ: ಬೃಂದಾ ಕಾರಟ್

ದೇಶದ ಏಕತೆ, ವೈವಿಧ್ಯತೆ ಮತ್ತು ಸಂವಿಧಾನವನ್ನು ಛಿದ್ರಗೊಳಿಸಲು ಸಂಘ ಪರಿವಾರವು ಕಟಿಬದ್ಧವಾಗಿವೆ ಎಂಬುದಾಗಿ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಾಟ್ ಆರೋಪಿಸಿದರು.

ಅವರು ಮಂಗಳೂರಿನಲ್ಲಿ ಸಿಪಿ(ಎಂ) ದ.ಕ. ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಮಾರ್ಚ್ 21 ರಂದು ಏರ್ಪಡಿಸಿದ್ದ "ಸೌಹಾರ್ದತಾ ಸಮಾವೇಶ" ವನ್ನು ಉದ್ದೇಶಿಸಿ ಪುರಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಭಾರತದ ಆಂತರಿಕ ಶಕ್ತಿಯಾದ ಏಕತೆ, ವೈವಿಧ್ಯತೆ ಮತ್ತು ಸಂವಿಧಾನವನ್ನು ಹಾಳುಗೆಡಹಲು ಪ್ರಯತ್ನಿಸುತ್ತಿರುವ ಶಕ್ತಿಗಳನ್ನು, ಭಾರತದ ಜನತೆ ಎಲ್ಲ ಬಲವನ್ನು ಉಪಯೋಗಿಸಿ ಸೋಲಿಸಲು ಅವರು ಕರೆಕೊಟ್ಟರು.

ಉಡುಪಿಯಲ್ಲಿ ಹಿಜಾಬ್ ಪ್ರಶ್ನೆಯಲ್ಲಿ ಶಿರೋವಸ್ತ್ರ ಧರಿಸಿರುವ ಮುಸ್ಲಿಂ ಹೆಣ್ಣು ಮಕ್ಕಳಿಗೆ ಕಾಲೇಜುಗಳಲ್ಲಿ ಪ್ರವೇಶ ನಿರಾಕರಿಸಲಾಗಿದೆ. ಯಾವ ಸಮುದಾಯದ ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿದಿದ್ದರೋ ಅವರು ಎಲ್ಲ ಅಡೆತಡೆಗಳನ್ನು ಮೀರಿ ಶಿಕ್ಷಣಕ್ಕಾಗಿ ಕಾತರಿಸಿ ಮುನ್ನುಗ್ಗುತ್ತಿರುವ ಹೊತ್ತಿನಲ್ಲಿ, ಅವರಿಗೆ ಶಿಕ್ಷಣದ ಅವಕಾಶಗಳನ್ನು ವಂಚಿಸುತ್ತಿರುವುದು ನಾಚಿಕೆ ಪಡಬೇಕಾದ ಸಂಗತಿಯಾಗಿದೆ. ಜಿಹಾಬ್ ಧರಿಸಲು ನಿಷೇಧವನ್ನು ಎತ್ತಿ ಹಿಡಿದ ಕರ್ನಾಟಕ ರಾಜ್ಯ ಹೈಕೋರ್ಟ್ ತೀರ್ಪು ಅತ್ಯಂತ ದುರದೃಷ್ಟಕರ. ಹಾಗಾಗಿ ಸುಪ್ರೀಂ ಕೋರ್ಟ್ ಅತಿ ಶೀಘ್ರದಲ್ಲಿ ಕೆಳ ನ್ಯಾಯಾಲಯದ ತೀರ್ಪನ್ನು ಸರಿಪಡಿಸಬೇಕೆಂದು ಆಶಿಸಬೇಕಾಗಿದೆ.

ಇಡೀ ಹಿಜಾಬ್ ಪ್ರಕರಣವು, ಆಳುವ ಬಿಜೆಪಿ ಸರಕಾರಗಳು ತಮ್ಮ ಆಡಳಿತ ವೈಫಲ್ಯವನ್ನು ಮುಚ್ಚಿ ಹಾಕಲು ಹಾಗೂ ಆ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯಲು ಮಾಡಿದ ಉತ್ಪಾದಿತ ಹುನ್ನಾರವಾಗಿದೆ. ಈ ಘಟನೆಯಲ್ಲಿ ಉಡುಪಿಯ ಎಂಎಲ್ಎ ರಘುಪತಿ ಭಟ್ ಮಾಡಿರುವ ಪ್ರಚೋದಕ ಹೇಳಿಕೆಗಳು ಖಂಡನೀಯ. ಈ ಹೇಳಿಕೆಗಳಿಗಾಗಿ ರಾಜ್ಯ ಸರಕಾರವಾಗಲೀ, ಹೈಕೋರ್ಟಾಗಲೀ ಈಗಾಗಲೇ ಯಾವ ಕಾನೂನು ಕ್ರಮ ಕೈಗೊಂಡಿದೆ?

ಹೆಣ್ಣು ಮಕ್ಕಳು ಇಲ್ಲವೇ ಅವರ ಹೆತ್ತವರು ಮಾತ್ರವೇ ತಮ್ಮ ಮಕ್ಕಳು ಶಿರವಸ್ತ್ರ ಧರಿಸಬೇಕೇ ಬೇಡವೇ ಎಂಬುದನ್ನು ನಿಶ್ಚಯಿಸಬೇಕೇ ಹೊರತು ಇತರರಲ್ಲ. ಕೇಂದ್ರೀಯ ವಿದ್ಯಾಲಯಗಳಲ್ಲಿ, ಪಕ್ಕದ ಕೇರಳ ರಾಜ್ಯದಲ್ಲಿ ಶಿರೋವಸ್ತ್ರ ಧರಿಸುವ ವಿದ್ಯಾರ್ಥಿನಿಯರು, ಶಾಲಾ ಕಾಲೇಜು ಸಮವಸ್ತ್ರಕ್ಕೆ ಹೊಂದಿಕೊಳ್ಳುವ ಶಿರೋವಸ್ತ್ರ ಧರಿಸುವುದನ್ನು ನಾವು ನೋಡಿದ್ದೇವೆ. ಪೇಟಾ ಧರಿಸುವ ಸಿಖ್ ವಿದ್ಯಾರ್ಥಿಗಳೂ ಸಮವಸ್ತ್ರಕ್ಕೆ ತಕ್ಕುದಾದದನ್ನೇ ಧರಿಸುತ್ತಾರೆ. ಅಲ್ಲೆಲ್ಲೂ ಕಾಣಿಸದ ನಿಷೇಧ, ಕರ್ನಾಟಕದಲ್ಲಿ ಮಾತ್ರ ಯಾಕೆ ಬಂದಿದೆ? ಇದು ಸಂಘ ಪರಿವಾರದ ಸೃಷ್ಟಿಯಲ್ಲದೆ ಬೇರೆಯಲ್ಲ. ಇನ್ನೊಂದೆಡೆ ಮುಸ್ಲಿಂ ಸಮುದಾಯದ ನಡುವೆಯೂ ಹೆಣ್ಣು ಮಕ್ಕಳು ಶಿರೋವಸ್ತ್ರವನ್ನು ಧರಿಸಲೇ ಬೇಕು ಎಂಬ ಒತ್ತಾಯವನ್ನು ಕೆಲವು ಶಕ್ತಿಗಳು ಮಾಡುತ್ತಿವೆ. ಅವರು ಹಿಜಾಬ್ ಧರಿಸದಿದ್ದರೆ ಶಿಕ್ಷಣವಿಲ್ಲ ಎಂಬ ರೀತಿ ಬಹಿಷ್ಕಾರ ಮಾಡಲು ಪಿಎಫ್ಐ, ಎಸ್‌ಡಿಪಿಐ ಅಂತಹ ಸಂಘಟನೆಗಳು ಒತ್ತಡ ಹೇರುತ್ತಿವೆ. ಇದರ ಬಗ್ಗೆ ಸಮುದಾಯ ಎಚ್ಚರವಾಗಿರುವುದು ಅಗತ್ಯ.

ಹಲವು ಸವಾಲುಗಳ ನಡುವೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ ಭಾರತದ ಸಂವಿಧಾನ ರಚನೆಯಾದಾಗ, ಈ ದೇಶದ ವಿಭಿನ್ನ ಸಂಸ್ಕೃತಿ, ಜನಸಮುದಾಯಗಳನ್ನು ಒಗ್ಗೂಡಿಸುವ ದೊಡ್ಡ ಕನಸಿತ್ತು. ಆದರೆ ಸಂವಿಧಾನ ಜಾರಿಗೆ ಬಂದ ದಿನದಂದೇ, ಸಂವಿಧಾನವು ಭಾರತದ ಸಂಸ್ಕೃತಿಗೆ ಅನುಗುಣವಾಗಿಲ್ಲ ಅಂದರೆ 'ಮನುಸ್ಮೃತಿ'ಗೆ ಅನುಗುಣವಾಗಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಪತ್ರಿಕೆಯಲ್ಲಿ ಹೇಳಿಕೆ ನೀಡಿತ್ತು. ಈಗ ಸಂಘ ಪರಿವಾರದ ಸಂಘಟನೆ ಬಿಜೆಪಿ ದೇಶದ ಅಧಿಕಾರ ಪಡೆದುಕೊಂಡು, ಸಂವಿಧಾನದ ಮೇಲೆ ನಿರಂತರ ಧಾಳಿ ನಡೆಸುತ್ತಿದೆ. ಬುಲ್‌ಡೋಜರ್ ಮಾದರಿಯಲ್ಲಿ ದೇಶದ ಬಹುಸಂಸ್ಕೃತಿಯನ್ನು ನೆಲಸಮ ಮಾಡಿ ಏಕ ಸಂಸ್ಕೃತಿಯನ್ನು ಹೇರಲು ಸಿದ್ಧತೆ ನಡೆಸಿವೆ. ಅದರ ಭಾಗವಾಗಿ ಅಲ್ಪಸಂಖ್ಯಾಕ ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯದ ಮೇಲೆ ಒಂದಲ್ಲ ಒಂದು ಬಗೆಯಲ್ಲಿ ದಾಳಿ ನಡೆಸುತ್ತಿವೆ. ಕರ್ನಾಟಕದ ಮತಾಂತರ ನಿಷೇಧ ಕಾಯ್ದೆಯು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ ನಡೆಯುತ್ತಿರುವ ದಾಳಿಯ ಒಂದು ಉದಾಹರಣೆಯಾಗಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಸಂವಿಧಾನ ಒದಗಿಸಿದ್ದು, ಈ ಮತಾಂತರ ನಿಷೇಧ ಕಾಯ್ದೆಯು ಸಂವಿಧಾನ ನೀಡಿರುವ ಹಕ್ಕನ್ನು ನಿರಾಕರಿಸುವ ಅತ್ಯಂತ ಕೆಟ್ಟ ಶಾಸನವಾಗಿದೆ. ಅಲ್ಲದೆ ಬಲವಂತದ ಮರುಮತಾಂತರವನ್ನು ಕಾನೂನಿನ ಮೂಲಕ ತಂದಿದೆ. ಡಾ.ಬಿ.ಆರ್.ಅಂಬೇಡ್ಕರ್ ಇವತ್ತಿನ ದಿನಗಳಲ್ಲಿ ಬದುಕಿದ್ದದ್ದೇ ಆಗಿದ್ದರೆ, ಈ ಕಾಯ್ದೆಯ ಪ್ರಕಾರ ಅವರು ಕೂಡಾ ಜೈಲಿನಲ್ಲಿ ಇರಬೇಕಾಗುತ್ತಿತ್ತು ಎಂಬುದಾಗಿ ಬೃಂದಾ ಕಾರಾಟ್ ವ್ಯಂಗ್ಯವಾಡಿದರು.



ಕೇವಲ ಅಲ್ಪಸಂಖ್ಯಾತರ ಮೇಲೆ ಮಾತ್ರವಲ್ಲ, ಹಿಂದೂ ಮತೀಯರೂ ಕೂಡಾ, ಸಂಘ ಪರಿವಾರದ ಆಡಳಿತದಲ್ಲಿ ಕ್ಷೇಮವಾಗಿ ಇರುವಂತಿಲ್ಲ. 6 ವರ್ಷದ ಹಿಂದೆ ಮಂಗಳೂರಿನಲ್ಲಿ ಸಂಘ ಪರಿವಾರದವರೇ ಆದ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ ಮಂಗಳೂರಿನ ತನ್ನ ಸಮುದಾಯದ ದೇವಾಲಯದ ಭ್ರಷ್ಟಾಚಾರ ಬಯಲಿಗೆಳೆಯಲು ಲೆಕ್ಕಪತ್ರ ಬಹಿರಂಗ ಪಡಿಸಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಾಗ, ಅವರನ್ನು ಅವರ ಮನೆಯ ಸಮೀಪವೇ ಕೊಲೆಗೈಯ್ಯಲಾಯಿತು. ಇನ್ನೂ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಪೊಲೀಸರು ಸಲ್ಲಿಸಿಲ್ಲ.

ಅಂತೆಯೇ ರಾಷ್ಟ್ರೀಯ ಸಮಾಜ ಸುಧಾರಕರಾದ ನಾರಾಯಣ ಗುರುಗಳ ಸ್ತಬ್ಧಚಿತ್ರವನ್ನು ಈ ವರ್ಷದ ದೆಹಲಿಯ ಗಣರಾಜ್ಯೋತ್ಸವಕ್ಕೆ ಕೇರಳ ರಾಜ್ಯ ಸರಕಾರ ಸಿದ್ಧಪಡಿಸಿದ್ದಾಗ, ಅದಕ್ಕೆ ಕೇಂದ್ರ ಸರಕಾರ ಅವಕಾಶ ನೀಡದೆ, ಶಂಕರಾಚಾರ್ಯರ ಸ್ತಬ್ಧಚಿತ್ರ ನೀಡುವಂತೆ ಸೂಚಿಸಿದ್ದು, ಆಳುವ ಕೇಂದ್ರ ಸರಕಾರದ ಸಿದ್ಧಾಂತ ಯಾವ ರೀತಿ ಕಾರ್ಯಾಚರಿಸುತ್ತಿದೆ ಎಂಬುದರ ಸೂಚನೆಯಾಗಿದೆ ಎಂಬುದಾಗಿ ಹಲವಾರು ನಿದರ್ಶನಗಳ ಮೂಲಕ ಬೃಂದಾ ಕಾರಾಟ್ ನಿರೂಪಿಸಿದರು.

ಆರೆಸ್ಸೆಸ್ ಮತ್ತು ಅದರ ಅಂಗಸಂಸ್ಥೆಗಳು ದೇಶದ ದೊಡ್ಡ ಶತ್ರುಗಳು. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಅವರ ಪೂರ್ವಜರು ಯಾವುದೇ ಕೊಡುಗೆ ನೀಡಿಲ್ಲ. ಬ್ರಿಟಿಷರ ಪರವಾಗಿದ್ದ ಹಾಗೂ ಬ್ರಿಟಿಷರಿಗೆ ತಪ್ಪೊಪ್ಪಿಗೆ ಪತ್ರ ಬರೆದಿದ್ದ ಹಿಂದೂತ್ವದ ಸಿದ್ಧಾಂತದ ವಿ.ಡಿ.ಸಾವರ್ಕರ್‌ರನ್ನು ಹೀರೋ ಮಾಡುತ್ತಿದ್ದಾರೆ. ಅವರೆಂದೂ ದೇಶಪ್ರೇಮಿಯಾಗಲು ಸಾಧ್ಯವಿಲ್ಲ. ಸಮಾಜಕ್ಕೆ ಸಂಬಂಧಿಸಿ ಬಿಜೆಪಿಯು ಬ್ರಾಹ್ಮಣವಾದಿ ಹಾಗೂ ಸರ್ವಾಧಿಕಾರಿ ದೃಷ್ಟಿಯನ್ನು ಹೊಂದಿದೆ. ಇವುಗಳ ವಿರುದ್ಧ ಸಿಪಿಐ(ಎಂ) ರಾಜಿಯಿಲ್ಲದ ಹೋರಾಟವನ್ನು ನಡೆಸುತ್ತಿದೆ. ಅದೇ ರೀತಿ ಕೇಂದ್ರ ಸರಕಾರವು ಬಡವರನ್ನು ಕಡೆಗಣಿಸಿ, ಕಾರ್ಪರೇಟುಗಳ ಪರವಾಗಿ ಜಾರಿಗೊಳಿಸುತ್ತಿರುವ ನೀತಿಯ ವಿರುದ್ಧವೂ ರಾಜಿ ರಹಿತ ಹೋರಾಟ ನಡೆಸುತ್ತಿದೆ ಎಂದವರು ಹೇಳಿದರು.

["ಕಾಶ್ಮೀರ ಫೈಲ್ಸ್" ಎಂಬ ಚಲನಚಿತ್ರಕ್ಕೆ ಬಿಜೆಪಿ ಸೇರಿ ಸಂಘ ಪರಿವಾರದ ಶಕ್ತಿಗಳು ಅಬ್ಬರದ ಪ್ರಚಾರ ಕೊಡುತ್ತಿವೆ. ಆದರೆ ಆ ಚಿತ್ರವು ಕಾಶ್ಮೀರಿಯತ್‌ನ ನಿಜ ವಾಸ್ತವವನ್ನು ಬಹಿರಂಗಗೊಳಿಸುತ್ತಿಲ್ಲ. ಕಾಶ್ಮೀರದ ಚರಿತ್ರೆಯಲ್ಲಿ ಚಿತ್ರವು ನಿರೂಪಿಸುವ ಘಟನೆಗಳು ಇದ್ದುದು ನಿಜ ಹಾಗೂ ಅದು ಚರಿತ್ರೆಯ ಕಪ್ಪು ಚುಕ್ಕೆಯಾಗಿದೆ. ಆದರೆ ಚಿತ್ರದಲ್ಲಿ ತೋರಿಸಿದಂತೆ ಕೇವಲ ಕಾಶ್ಮೀರಿ ಪಂಡಿತರು ಮಾತ್ರ ಘಟನೆಗಳಲ್ಲಿ ಬಾಧೆಗೊಳಗಾದುದಲ್ಲ. ಹಿಂದಿನ ಸ್ಪೀಕರೊಬ್ಬರನ್ನು, ಶಾಸಕರುಗಳನ್ನೊಳಗೊಂಡು ಅನೇಕ ಮುಸ್ಲಿಮರು ಭಯೋತ್ಪಾದಕರನ್ನು ಎದುರಿಸಿ ಬಂದೂಕುಗಳಿಂದ ಹತ್ಯೆಗೀಡಾದರು. ಆದರೆ ಚಲನಚಿತ್ರದಲ್ಲಿ ಒಂದು ವಿಭಾಗದ ಹತ್ಯೆಯನ್ನು ಮಾತ್ರ ನಿರೂಪಿಸಿ ಇನ್ನೊಂದು ವಿಭಾಗ ಅಂದರೆ ಇಡೀ ಮುಸ್ಲಿಂ ಸಮುದಾಯವೇ ಈ ದೌರ್ಜನ್ಯಗಳಿಗೆ ಕಾರಣವಾಗಿದೆ ಎಂಬಂತೆ ನಿರೂಪಿಸಿರುವುದರಿಂದ, ಮುಸ್ಲಿಂ ಸಮುದಾಯದ ಮೇಲೆ ದ್ವೇಷವನ್ನು ಹುಟ್ಟು ಹಾಕಲಾಗಿದೆ. ಈ ಬಗೆಯ ನಿರೂಪಣೆಯಿಂದ ಏನೂ ಸಾಧನೆ ಆಗಲಾರದು ಎಂದು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದರು.]

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸದಸ್ಯೆ ಹಾಗೂ ಸಾಹಿತಿ ಕೆ. ನೀಲಾ ಮಾತನಾಡಿ ಕರ್ನಾಟಕದಲ್ಲಿ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಇದ್ದ ಸೌಹಾರ್ದದ ಮತ್ತು ಮಾತೃತ್ವದ ಪರಂಪರೆಯ ಬಗ್ಗೆ ವಿವರಿಸಿದರು. ವಚನಗಳಲ್ಲಿ ತತ್ವಪದಗಳಲ್ಲಿ ಇರುವ ಸಮಾನತಾ ಭಾವ, ಕರಾವಳಿಯ ಅಬ್ಬಕ್ಕ ಕಥನ, ಸಿರಿ ಕಥನಗಳಲ್ಲಿ ಇರುವ ಮಾತೃತ್ವದ ಹಕ್ಕುಗಳನ್ನು ನೆನಪಿಸಿ, ಈ ಪರಂಪರೆಯನ್ನು ಜೀವಂತವಾಗಿಡುವ ಜವಾಬ್ದಾರಿ ನಮ್ಮದಾಗಿದೆ ಎಂದರು. ಸ್ವನಿರ್ಣಯ ಕೈಗೊಳ್ಳಲು ಮಹಿಳೆಯರಿಗೆ ಇರುವ ಹಕ್ಕನ್ನು ಕಿತ್ತುಕೊಳ್ಳುವ ಹುನ್ನಾರವೇ ಶಿರೋವಸ್ತ್ರದ ಪ್ರಕರಣವಾಗಿದೆ ಎಂದವರು ನಿರೂಪಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಡಾ.ಕೆ.ಪ್ರಕಾಶ್ ಬೃಂದಾ ಕಾರಾಟ್ ಅವರ ಭಾಷಣವನ್ನು ಕನ್ನಡಕ್ಕೆ ಭಾಷಾಂತರ ಮಾಡಿದರು. ರಾಜ್ಯ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ ಪ್ರಾಸ್ತಾವಿಕ ಮಾತುಗಳಲ್ಲಿ ಕರಾವಳಿ ಕರ್ನಾಟಕವು ಹಿಜಾಬ್ ಪ್ರಕರಣದ ಮೂಲಕ ಹೇಗೆ ಮತ್ತೆ ಮತ್ತೆ ಕೋಮುವಾದದ ಪ್ರಯೋಗಶಾಲೆಯಾಗುತ್ತಿದೆ ಎಂಬ ಚಿತ್ರಣವನ್ನು ನೀಡಿದರು.

ಸಮಾವೇಶದ ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಎಸ್.ವೈ.ಗುರುಶಾಂತ್, ಕೆ.ಮಹಾಂತೇಶ್, ವಸಂತ ಆಚಾರಿ, ವಿವಿಧ ಜಿಲ್ಲೆಗಳ ಸಿಪಿಐ(ಎಂ) ಕಾರ್ಯದರ್ಶಿಗಳಾದ ಬಾಲಕೃಷ್ಣ ಶೆಟ್ಟಿ ಉಡುಪಿ, ಯಮುನಾ ಗಾಂವ್ಕರ್ ಉತ್ತರಕನ್ನಡ, ಕೆ.ಪ್ರಭಾಕರನ್ ಶಿವಮೊಗ್ಗ, ರಮೇಶ್ ಕೊಡಗು ಅಲ್ಲದೆ ಪಕ್ಷದ ದ.ಕ.ಜಿಲ್ಲಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಪಕ್ಷದ ಹಿರಿಯ ಮುಖಂಡರಾಗಿದ್ದ ಕೆ.ಆರ್.ಶ್ರೀಯಾನ್, ಯು.ಬಿ.ಲೋಕಯ್ಯ, ಕೆ.ಶಂಕರ್, ಮಹಾಬಲ ವಡೇರಹೋಬಳಿ, ಸಿಪಿಐ ದ.ಕ. ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್ ಸಮಾವೇಶದಲ್ಲಿ ಭಾಗವಹಿಸಿದ್ದರು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಉಡುಪಿ ಬಾಲಕೃಷ್ಣ ಶೆಟ್ಟಿ ವಂದಿಸಿದರು.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	U. BASAVARAJ
	(Whether Citizen of India? If Foreigner, State the Country of Origin)	:	Indian
4.	Address	:	No. 12, 18th Cross, Sampangirama Nagar, Bangalore 560027
5.	Editor`s Name	:	NITYANANDASWAMI
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I U. BASAVARAJ, here by declare that the particulars given above are true to the best of my knowledge and belief.

Sd/-

Date : March 25, 2022
Bangalore

U. BASAVARAJ
Publisher

ವಿದ್ಯಾರ್ಥಿ ದೆಸೆಯಲ್ಲಿಯೇ ಹಿರಿಯ ಸಂಗಾತಿ ಮಲ್ಲು ಸ್ವರಾಜ್ಯಂ ಅವರನ್ನು ಕಂಡು, ಅವರ ಹೋರಾಟದ ಸಮರಧೀರ ಮಾತುಗಳನ್ನು ಕೇಳಿ ಪುಳಕಿತರಾಗಿದ್ದ ಕವಯಿತ್ರಿ ಡಾ.ಕೆ. ಷರೀಫಾ ಅವರು ತಮ್ಮ ನೆನಪುಗಳನ್ನು ತೆರೆದಿಡುವ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ.

ಕ್ರಾಂತಿಯ ನಿಗಿ ನಿಗಿ ಕೆಂಡ: ಮಲ್ಲು ಸ್ವರಾಜ್ಯಂ



ಅವಿಭಜಿತ ಆಂಧ್ರಪ್ರದೇಶದ ಹಿರಿಯ ಹೋರಾಟಗಾರ್ತಿ, ರಾಜಕಾರಣಿಯಾದ ಕಾಮ್ರೇಡ್ ಮಲ್ಲು ಸ್ವರಾಜ್ಯಂರವರು ಹುಟ್ಟಿದ್ದು 1931ರಲ್ಲಿ. ಹೈದರಾಬಾದ್‌ನ ನಲ್ಗೊಂಡ ಜಿಲ್ಲೆಯ ಕೂರ್ವಿರಾಲ ಕೊತಗುಡೆಂನಲ್ಲಿ. ದಿನಾಂಕ 19–03–2022 ರಂದು ಬಹು ಅಂಗಾಂಗಗಳ ವೈಫಲ್ಯದಿಂದ ನರಳುತ್ತಿದ್ದ ಅವರು ಹೈದರಾಬಾದಿನಲ್ಲಿ ನಿಧನರಾದರು. ನಿಧನರಾದಾಗ ಅವರಿಗೆ 91 ವರ್ಷ ವಯಸ್ಸಾಗಿತ್ತು. ಸಾವಿನ ನಂತರ ತಮ್ಮ ದೇಹವನ್ನು ವೈದ್ಯಕೀಯ ಅಧ್ಯಯನಕ್ಕೆ ನೀಡಬೇಕೆಂಬ ಅವರ ಕೋರಿಕೆಯಂತೆ ನಲ್ಗೊಂಡದ ಸರಕಾರಿ ಆಸ್ಪತ್ರೆಗೆ ದಾನ ಮಾಡಲಾಯಿತು.

ಮಲ್ಲು ಸ್ವರಾಜ್ಯಂರವರು ಮಲ್ಲು ಗೌತಮ್ ರೆಡ್ಡಿ ಮತ್ತು ಮಲ್ಲು ನಾಗಾರ್ಜುನ್ ರೆಡ್ಡಿ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ಪಾದೂರಿ ಕರುಣಾ ಎಂಬ ಮಗಳನ್ನು, ಪ್ರೀತಿಸುವ ಅಪಾರ ಸಂಗಾತಿಗಳನ್ನು ಅಗಲಿದ್ದಾರೆ. ಹೋರಾಟವನ್ನೇ ಉಸಿರಾಗಿಸಿಕೊಂಡಿದ್ದ ಅವರು ಅಖಿಲ ಭಾರತ ಜನವಾದೀ ಮಹಿಳಾ ಸಂಘಟನೆಯ ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿದ್ದರು. ಇವರ ಪತಿ ಮಲ್ಲು ವೆಂಕಟ ನರಸಿಂಹರೆಡ್ಡಿಯವರು ಸಹ ಅವರು ಕಮ್ಯೂನಿಸ್ಟ್ ಪಕ್ಷದ ನಾಯಕರಾಗಿದ್ದರು. ನಿಜಾಮನ ಆಡಳಿತ ವಿರುದ್ಧ ನಡೆದ ಹೋರಾಟದಲ್ಲಿ ಭಾಗಿಯಾಗಿದ್ದ ಅವರು 4–12–2004ರಲ್ಲಿ ನಿಧನರಾದರು.

1978ರಲ್ಲಿ ಆಗಿನ ಮದ್ರಾಸಿನಲ್ಲಿ ನಡೆದ ಅಖಿಲ ಭಾರತ ಪ್ರಜಾಸತ್ತಾತ್ಮಕ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಷ್ಟ್ರ ಸಮಾವೇಶ ಆಯೋಜಿಸಲಾಗಿತ್ತು. ಆ ಸಮ್ಮೇಳನದಲ್ಲಿ ನಾನು ಗುಲಬರ್ಗಾದಿಂದ ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ಆಗ ಬಿ.ಎ. ಎರಡನೆಯ ವರ್ಷದಲ್ಲಿ ಓದುತ್ತಿದ್ದೆ. ನಾನು ಶೀಲಾ ತಿವಾರಿ, ಶ್ಯಾಮಲಾ ಪೂಜಾರ ಇಂದು ಚೆನ್ನೈ ಎಂದು ಕರೆಯಲ್ಪಡುವ ಅಂದಿನ ಮದ್ರಾಸಿನಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ದುಡಿಯುವ ಮಹಿಳೆಯರ 3 ದಿನಗಳ ಸಮಾವೇಶದಲ್ಲಿ ಪಾಲ್ಗೊಂಡಿದ್ದೆವು. ಆ ಮದ್ರಾಸಿನ ಸಮ್ಮೇಳನದಲ್ಲಿ ಮೊದಲ ಬಾರಿಗೆ ನಾನು ಮಲ್ಲು ಸ್ವರಾಜ್ಯಂರವರನ್ನು ನೋಡಿ ಪುಳಕಿತಳಾಗಿದ್ದೆ.

ಆ ವೇದಿಕೆಯಿಂದ ಮಾತನಾಡಿದ ಮಲ್ಲು ಸ್ವರಾಜ್ಯಂ ತಾವು ತೊಡಗಿದ್ದ ಸಶಸ್ತ್ರ ಗೆರಿಲ್ಲಾ ಹೋರಾಟದ ವಿವರಗಳನ್ನು ನೀಡಿದಾಗ ನನಗೆ ಮೈ ಜುಂ ಎನ್ನುವ ಅನುಭವ. ಆಗಿನ ಜಮಿನ್ದಾರರ ಮತ್ತು ನಿಜಾಮ ಸರ್ಕಾರದ ದೌರ್ಜನ್ಯಗಳನ್ನು ವಿರೋಧಿಸಿ ಮತ್ತು ಭಾರತದ ಸ್ವಾತಂತ್ರಕ್ಕಾಗಿ ಹೋರಾಟ ಮಾಡುತ್ತಾ, ಗೆರಿಲ್ಲಾ ಹೋರಾಟದಲ್ಲಿ ಕಾಡು ಮೇಡುಗಳನ್ನು ಲೆಕ್ಕಿಸದೇ ಹೆಗಲ ಮೇಲೆ ಭಾರದ ಬಂದೂಕನ್ನು ಹೊತ್ತು ನಿಡಿದಾದ ಮತ್ತು ದಟ್ಟ ಕಾಡಿನಲ್ಲಿ ಅಲೆಯುತ್ತಾ, ಊಟ, ವಸತಿ ಸೌಕರ್ಯವಿಲ್ಲದೆ ಅವರು ಕಾಡಿನಲ್ಲಿ ಕಳೆದ ದಿನಗಳ ಕುರಿತು ಹೇಳಿದರು. ಅವರು ಕಾಡಿನಲ್ಲಿ ಮೂರು ಬಾರಿ ಹುಲಿಗೆ ಎದುರಾಗಿದ್ದರು. ಹಾವುಗಳು, ಹುಲಿ, ಕರಡಿ, ಮುಂತಾದ ವನ್ಯಜೀವಿಗಳ ನಡುವೆ ಜೀವ ಉಳಿಸಿಕೊಳ್ಳುವುದು ಬಹಳ ಸಮಸ್ಯೆಯಾಗುತ್ತಿತ್ತು. ಸುಮಾರು ಮೂರು ವರ್ಷಗಳ ಕಾಲ ಯಾರಿಗೂ ಸಿಗದೇ ಭೂಗತರಾಗಿ ಕಾಡುಗಳಲ್ಲಿ ಅಲೆದಾಡಿದರು. ಅವರ ಸ್ವಾತಂತ್ರ ಹೋರಾಟದ ಕೆಚ್ಚುಗಳು ನಮಗೆಲ್ಲ ಭಿನ್ನವಾದ ಹೊಸ ಅನುಭವ ಲೋಕವನ್ನೇ ತೆರೆದು ತೋರಿದವು. ಅವರ ತೆಲಂಗಾಣಾದ ಭೂಮಿಗಾಗಿ ಬಂದೂಕು ಹಿಡಿದು ಸಂಘರ್ಷಮಯ ಬದುಕು ನಡೆಸಿದ ಈ ಕ್ರಾಂತಿಕಾರಿ ನಾಯಕಿಯನ್ನು ಹಿಡಿದು ಕೊಟ್ಟವರಿಗೆ ನಿಜಾಮನ ಸರ್ಕಾರ ವಾರಂಟ್ ಹೊರಡಿಸಿ, ಅವರ ತಲೆಗೆ ರೂ.10,000ಗಳನ್ನು ಬಹುಮಾನ ಘೋಷಿಸಿತ್ತು. ಆದರೂ ಅವರು ಯಾರಿಗೂ, ಎಂದಿಗೂ ಸಿಕ್ಕಿಬೀಳಲಿಲ್ಲವಂತೆ. ಆಗಿನ್ನೂ ಕಾಲೇಜು ಓದುತ್ತಿದ್ದ ನಮಗೆ ಮಲ್ಲು ಸ್ವರಾಜ್ಯಂರವರ ಮಾತುಗಳು ಮನಸಿಗೆ ನಾಟಿದವು. ಅದೆಂತಹ ದಿಟ್ಟ ಹೋರಾಟದ ನಿಲುವು ಸಂಗಾತಿಯದು. ಅಂದಿನಿಂದಲೂ ನಾನು ಅವರ ಆದರ್ಶ, ಗುರಿ ಮುಟ್ಟುವ ಸಾಹಸ, ಹೋರಾಟದ ಕೆಚ್ಚು, ಕಾರ್ಯಗಳನ್ನು ಗಮನಿಸುತ್ತಲೇ ಬೆಳೆದಿರುವೆ. ಅವರನ್ನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು "ದಿ ಬುಲೆಟ್ ಲೇಡಿ ಆಫ್ ತೆಲಂಗಾಣ" ಎಂದು ಕರೆದಿದೆ.

ತೆಲಂಗಾಣದ ವೀರ ಹೋರಾಟದ ಕ್ರಾಂತಿ ಕಿರಣ ಮಲ್ಲು ಸ್ವರಾಜ್ಯಂ ಈಗೊಂದು ದಂತಕಥೆ ಮಾತ್ರ. ಹೈದ್ರಾಬಾದ್ ನಿಜಾಮನ ಆಡಳಿತದ ವಿರುದ್ಧ ಹಾಗೂ ಭೂಮಾಲಿಕರ ವಿರುದ್ಧ ನಡೆದ ಸಶಸ್ತ್ರ ಹೋರಾಟದ ನಾಯಕಿಯಾಗಿ, ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದಾರೆ. ಅವರು ಮಾಜಿ ಶಾಸಕಿಯಾಗಿ ನಲಗೊಂಡ ಜಿಲ್ಲೆಯ ತುಂಗತುರ್ತಿ ಕ್ಷೇತ್ರದಿಂದ ಸಿಪಿಐ(ಎಂ) ನಿಂದ 1978ರಿಂದ 1983ರವರೆಗೆ ಮತ್ತು 1983ರಿಂದ 1984ರವರೆಗೆ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಹಿರಿಯ ಹೋರಾಟಗಾರ್ತಿ ಹಾಗೂ ತೆಲಂಗಾಣಾ ಸಶಸ್ತ್ರ ಹೋರಾಟದ ವೀರ ನಾರಿ ಕಾಮ್ರೇಡ್ ಮಲ್ಲು ಸ್ವರಾಜ್ಯಂ ಅಸ್ತಂಗತರಾಗಿದ್ದಾರೆ. 1945–46ರರ ತೆಲಂಗಾಣ ಸಶಸ್ತ್ರ ಹೋರಾಟದ ಫಲವಾಗಿ 1947–48ರಲ್ಲಿ ನಿಜಾಮನನ್ನು ಪದಚ್ಯುತ ಗೊಳಿಸಲಾಯಿತು. ಇದರಿಂದ ಕುಪಿತನಾದ ನಿಜಾಮ್‌ನ ಗುಂಡಾಗಳು ಸ್ವರಾಜ್ಯಂರವರ ಮನೆಯನ್ನು ಸುಟ್ಟು ಹಾಕಿದರು.

ಭೀಮಿರೆಡ್ಡಿ ರಾಮಿರೆಡ್ಡಿ ಮತ್ತು ಸೊಕ್ಕಮ್ಮನವರ ಮಗಳಾಗಿ ಜನಿಸಿದ, ಇವರ ತಂದೆ ಸೂರ್ಯಾಪೇಟೆ ತಾಲ್ಲೂಕಿನಲ್ಲಿ ಜಮಿನ್ದಾರರಾಗಿದ್ದರು. ಅವರ ತಂದೆಯವರು ಕೇವಲ 40 ವರ್ಷಗಳ ವಯಸ್ಸಿನಲ್ಲಿಯೇ ನಿಧನರಾದರು. ಕಟ್ಟಾ ಜಮೀನ್ದಾರರ ನಡಾವಳಿಯನ್ನು ರೂಢಿಸಿಕೊಂಡಿದ್ದ ಭೀಮಿರೆಡ್ಡಿಯವರು ತಮ್ಮ ಮಗಳನ್ನು ಹೊರಗೆ ಓದಲು ಕಳಿಸದೇ, ಶಿಕ್ಷಕರನ್ನೇ ಮನೆಗೆ ಕರೆಸಿ ಓದಿಸುತ್ತಿದ್ದರು. ಹೆಣ್ಣು ಮಕ್ಕಳಿಗೂ ಕುದುರೆ ಸವಾರಿ, ಈಜುಗಾರಿಕೆ, ದೈಹಿಕ ವ್ಯಾಯಾಮದ ತರಬೇತಿಯನ್ನು ಕೊಡಿಸಿದರು. ತಂದೆಯವರ ನಿಧನದಿಂದಾಗಿ ಮಲ್ಲು ಸ್ವರಾಜ್ಯಂರವರ ಶಿಕ್ಷಣ ಕೇವಲ ಮೂರನೇ ತರಗತಿಗೆ ಬಂದು ನಿಲ್ಲುತ್ತದೆ. ಅವರ ತಾಯಿ ಸೊಕ್ಕಮ್ಮನವರೂ ಕೂಡ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಿಂದ ಪ್ರೇರಿತರಾಗಿದ್ದವರು. ಹೀಗಾಗಿಯೇ ತಮ್ಮ ಐದು ಜನ ಮಕ್ಕಳಲ್ಲಿ ಮೂರನೆಯವಳಿಗೆ 'ಸ್ವರಾಜ್ಯಂ' ಎಂದು ಹೆಸರಿಟ್ಟರು.

ಅವರು ತಮ್ಮ ಕೇವಲ 10 ವರ್ಷ ವಯಸ್ಸಿನಲ್ಲಿಯೇ ಮ್ಯಾಕ್ಸಿಂ ಗಾರ್ಕಿಯ "ಮದರ್(ತಾಯಿ)" ಕೃತಿಯ ತೆಲುಗು ಅವತರಣಿಕೆಯನ್ನು ಓದಿ ಅದರಿಂದ ಪ್ರಭಾವಿತರಾದವರು. ಸಿಪಿಎಂ. ಪಕ್ಷದ ನಾಯಕಿಯಾಗಿ ಮತ್ತು ಹೈದರಾಬಾದಿನ ತುಂಗತುರ್ಥಿ ಕ್ಷೇತ್ರದ ಅಭ್ಯರ್ಥಿಯಾಗಿ 9 ವರ್ಷಗಳ ಕಾಲ ಶಾಸಕರಾದವರು. ಇತಿಹಾಸದಲ್ಲಿ ಅಳಿಸಲಾಗದ ಐತಿಹಾಸಿಕ ಹೆಗ್ಗುರುತುಗಳನ್ನು ಉಳಿಸಿ ಹೋದವರು ಮಲ್ಲು ಸ್ವರಾಜ್ಯಂ ಅಮ್ಮ. ಅವರು ಆಧುನಿಕ ತೆಲಂಗಾಣದ ರೂವಾರಿಯಾಗಿದ್ದಾರೆ ಕೂಡ. ಒಂದೊಮ್ಮೆ ಚುನಾವಣಾ ಕಣದಲ್ಲಿ ಆಡಳಿತ ಪಕ್ಷದ ಎದುರಾಳಿ ಇವರೊಂದಿಗೆ ವಾಗ್ವಾದಕ್ಕೆ ಇಳಿಯುತ್ತಾನೆ. ಅದಕ್ಕೆ ತಕ್ಕ ಉತ್ತರವನ್ನು ಸಂಗಾತಿಗಳು ನೀಡಿದಾಗ ಪಿಸ್ತೂಲ್ ತೆಗೆದು ಕಾಂ.ಸ್ವರಾಜ್ಯಂ ಅವರನ್ನೇ ಬೆದರಿಸುತ್ತಾನೆ. ಎಳ್ಳಷ್ಟೂ ವಿಚಲಿತರಾಗದ ಅವರು 'ನೀನು ಕೊಲ್ಲಬೇಕೆಂದಿದ್ದೀಯಾ? ಹಾಗಾದರೆ ನನ್ನಮೇಲೆಯೇ ಹಾರಿಸು ನೋಡೋಣ' ಎಂದು ಎದೆಯೊಡ್ಡಿ ನಿಲ್ಲುತ್ತಾರೆ ಕಾಮ್ರೇಡ್ ಮಲ್ಲು ಸ್ವರಾಜ್ಯಂ. ಅವರ ಪ್ರತಿರೋಧ ಕಂಡು ಆಗ ತೆಪ್ಪಗೆ ಜಾಗ ಖಾಲಿ ಮಾಡಿದ ಅಭ್ಯರ್ಥಿ. ಅವರು ಒಬ್ಬ ಅಸಾಧಾರಣ ಮಾನಸಿಕ ಸ್ಥೈರ್ಯವುಳ್ಳ ಮಹಿಳೆಯಾಗಿದ್ದರು. ತುಂಬಾ ಚಿಕ್ಕ ವಯಸ್ಸಿನಲ್ಲಿ ಅವರು ಸಾಮಾಜಿಕ ಅನ್ಯಾಯದ ವಿರುದ್ಧ ಧ್ವನಿ ಎತ್ತಿದವರು.

ಸ್ವರಾಜ್ಯಂ ಅಮ್ಮ ನಿರ್ಭಂಧಗಳನ್ನು ಉಲ್ಲಂಘಿಸುವುದರಲ್ಲಿ ನಿಸ್ಸೀಮರು. ಆಗಿನ ನಿಜಾಮನ ಆಳ್ವಿಕೆಯಲ್ಲಿದ್ದ ಹೈದ್ರಾಬಾದನ ಭಾಗವಾಗಿದ್ದ ತೆಲಂಗಾಣದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟವು ಮುಖ್ಯವಾಗಿ ನಿಜಾಮನ ತೀವ್ರ ಶೋಷಣೆ, ದಬ್ಬಾಳಿಕೆಯ, ಜನ ನೀತಿ ದ್ರೋಹಿ ಮತ್ತು ನಿರಂಕುಶ ಪ್ರವೃತ್ತಿಯನ್ನು ಪ್ರತಿಭಟಿಸುವುದಾಗಿತ್ತು. ಸ್ವರಾಜ್ಯಂ ಅಮ್ಮ ಸ್ವತಃ ಒಬ್ಬ ಜಮೀನ್ದಾರೀ ಕುಟುಂಬದ ಮಗಳಾಗಿ ಜಮೀನ್ದಾರಿ ಪದ್ಧತಿಯನ್ನು ವಿರೋಧಿಸಿ ಹೋರಾಡಿದರು. ಹಳ್ಳಿಯ ಹೆಂಗಸರ ನಡುವಿನ ಜೋಗುಳ ಹಾಡುಗಳನ್ನು ಹೆಕ್ಕಿಕೊಂಡು ಜೋಗುಳ ಪದ "ತೊಟ್ಟಿಲ ಹಾಡು"ಗಳನ್ನು ವೈಚಾರಿಕಗೊಳಿಸಿದರು. ಮುಂದೆ ಅವು ಹೊರಾಟಕ್ಕೆ ಪ್ರಬಲ ಅಸ್ತ್ರಗಳಾದವು. 1944ರಲ್ಲಿ ಐಲಮ್ಮನ ಆಸ್ತಿ ಕಿತ್ತುಕೊಳ್ಳಲು ಪ್ರಯತ್ನಿಸಿದ ವಿಷ್ಣು ದೇಶಮುಖ್‌ನ ದೌರ್ಜನ್ಯದ ವಿರುದ್ಧ ಹೋರಾಡಿದರು. ತೆಲಂಗಾಣಾ ಸಶಸ್ತ್ರ ಹೋರಾಟದ ನಾಯಕಿಯಾದ ಇವರು "ನಾ ಮಾಟೆ ತುಪಾಕೀ ತೂಟಾ" ಎಂಬ ಆತ್ಮಚರಿತ್ರೆಯನ್ನು (ನನ್ನ ಮಾತು ಬುಲೆಟ್) ಹೈದ್ರಾಬಾದಿನ ಬುಕ್ ಟ್ರಸ್ಟ್ 2019ರಲ್ಲಿ ಪ್ರಕಟಿಸಿತು. ಸ್ವರಾಜ್ಯಂ 'ಚೈತನ್ಯ ಮನವಿ' ಮಹಿಳಾ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯಳಾಗಿಯೂ ಶ್ರಮಿಸಿದ್ದಾರೆ.

1964ರಲ್ಲಿ ಕಮ್ಯೂನಿಷ್ಟ ಪಕ್ಷವು ವಿಭಜನೆಯಾದಾಗ ಅವರು ಸಿ.ಪಿ.ಎಂ. ಪಕ್ಷ ಸೇರಿದರು. ಅವರು ತಮ್ಮ 16ನೇ ವಯಸ್ಸಿಗೇ ಪಕ್ಷದ ಸದಸ್ಯತ್ವ ಪಡೆದಿದ್ದರು. ಉಕ್ಕಿನ ಮಹಿಳೆಯಾಗಿದ್ದ ಇವರು ಗೆರಿಲ್ಲಾ ಸಶಸ್ತ್ರ ಹೋರಾಟದ ಮೊಟ್ಟ ಮೊದಲ ಕಮಾಂಡರ್ ಆಗಿದ್ದರು. ಅವರದೇ ಸಮಕಾಲೀನರಾದ ಲಕ್ಷ್ಮಿ ಸೆಹೆಗಲ್‌ರವರು ಸುಭಾಷ್‌ಚಂದ್ರ ಭೋಸ್‌ರವರ ಝಾನ್ಸಿ ರಾಣಿ ಬ್ರಿಗೇಡ್‌ಗೆ ಕ್ಯಾಪ್ಟನ್ ಆಗಿದ್ದರು. ಸ್ವರಾಜ್ಯಂ ತಮ್ಮ 12ನೇ ವಯಸ್ಸಿನಲ್ಲಿಯೇ ಮಹಿಳಾ ಸಭಾದ ಸದಸ್ಯತ್ವ ಪಡೆದರು. 1946ರಲ್ಲಿ ಸೂರ್ಯಾಪೇಟೆಯ ಹೋರಾಟ ಸಮಿತಿಗಳ ಸಂಚಾಲಕರಾಗಿ ನೇಮಕವಾದರು. 11 ನೆಯ ವಯಸ್ಸಿನಲ್ಲಿಯೇ ಜೀತ ಪದ್ಧತಿಯ ವಿರುದ್ಧ ಧ್ವನಿ ಎತ್ತಿದರು. ವಿವಿಧ ಜಾತಿಗಳ ದಮನಿತ ಜನತೆಗೆ ಆಹಾರದ ವಸ್ತುಗಳನ್ನು ನೀಡಿ ನೆರವಾದಳು. ಇದಕ್ಕೆ ತಾಯಿಯ ಬಲವಾದ ಬೆಂಬಲ. ಪಾನ ನಿಷೇಧಕ್ಕಾಗಿ, ಕೌಟುಂಬಿಕ ಹಿಂಸೆಗಳ ವಿರುದ್ಧ, ಅತ್ಯಾಚಾರಗಳ ವಿರುದ್ಧ, ಮಹಿಳೆಯರನ್ನು ಸಂಘಟಿಸಿದರು. ಆಗ ನಿಜಾಮನ ವಿರುದ್ಧ ನಡೆಯಬೇಕಿದ್ದ ಸಮರವನ್ನು ಸರ್ದಾರ್ ವಲ್ಲಭ್ ಭಾಯಿ ಪಟೇಲರು, ಕಮ್ಯೂನಿಷ್ಟರನ್ನು ಬಗ್ಗು ಬಡಿಯಲು ಪ್ರಯತ್ನಿಸಿದ ಕಾರಣ ಹಲವಾರು ಸಂಗಾತಿಗಳು ಅಸು ನೀಗಿದರು. ತೆಲಂಗಾಣ ಹೋರಾಟದ ವೀರ ರಮಣಿಯರು ಹಲವಾರು ಜನರಿದ್ದಾರೆ. ಮಲ್ಲು ಸ್ವರಾಜ್ಯಂ ಅವರೊಂದಿಗಿದ್ದ ಹಲವಾರು ಮಹಿಳಾ ಹೋರಾಟಗಾರ್ತಿಯರ ಚರಿತ್ರೆಯನ್ನೂ ದಾಖಲಾಗಬೇಕಿದೆ. ಈ ಹೋರಾಟದ ಸಿಂಹಿಣಿಯರ ಬದುಕು, ಹೋರಾಟಗಳು ಚರಿತ್ರೆಯ ಪುಟಗಳಲ್ಲಿ ದಾಖಲಾಗಬೇಕಾದುದು ತುರ್ತಿನ ಕೆಲಸವಾಗಿದೆ. ಅವರ ಹೋರಾಟಗಳಿಂದ ಸ್ಫೂರ್ತಿ ಪಡೆಯೋಣ. ಹೋರಾಟ ಮುಂದುವರಿಸೋಣ. ಇತಿಹಾಸದ ಪುಟಗಳಿಂದ ಇನ್ನಷ್ಟೂ ಇಂತಹ ಕ್ರಾಂತಿಯ ಕಿಡಿಗಳನ್ನು ಅರಿಯೋಣ. ಇದೇ ನಾವು ಮಲ್ಲು ಸ್ವರಾಜ್ಯಂ ರವರಿಗೆ ಸಲ್ಲಿಸುವ ಶ್ರದ್ಧಾಂಜಲಿಯಾಗಿದೆ.

ಕಡಿದುಕೊಳ್ಳಲಾಗದ ಕರುಳ ಸಂಬಂಧಗಳು.........

ಪುಟ 3 ರಿಂದ

ಇಲ್ಲವಂತೆ. ಹಾಗಾಗಿ ಕಾನೂನಾತ್ಮಕವಾಗಿ ನಾವು ಏನು ಮಾಡಲಾಗುವುದಿಲ್ಲ ಮತ್ತು ನಿರ್ಬಂಧದ ಕುರಿತು ಎತ್ತಿರುವ ಪ್ರಶ್ನೆ ಹಾಗೂ ಕೈಗೊಂಡಿರುವ ಕ್ರಮಗಳು ಸರಿಯಾಗಿವೆ ಎಂದು ಬೇಲಿಗೆ ಓತಿಕ್ಯಾತ ಸಾಕ್ಷಿ ಎಂಬಂತೆ ಪ್ರಮಾಣ ಪತ್ರ ನೀಡಿ ಬೆಂಬಲಿಸಿದ್ದಾರೆ. ಅಂದರೆ ಕಾಪುವಿನಿಂದ ಆರಂಭಗೊಂಡಿರುವ ವಿವಾದ ರಾಜ್ಯದಾದ್ಯಂತ ಸಾಮಾಜಿಕ ಸಾಮರಸ್ಯ, ಶಾಂತಿ, ಕದಡುವ, ಪ್ರಚೋದಿಸುವ ಕೃತ್ಯಗಳಿಗೆ ಸರ್ಕಾರವೇ ಮೌನ ಬೆಂಬಲ ನೀಡಿದೆ ಎನ್ನುವುದು ಎದ್ದು ಕಾಣುತ್ತದೆ.

ದ್ವೇಷದ ಕಿಚ್ಚು ಹಚ್ಚುವುದನ್ನು ತೀವ್ರವಾಗಿ ವಿರೋಧಿಸಿರುವ ವಿವಿಧ ಮತಧರ್ಮಗಳ ಪ್ರಮುಖರ ವಿವೇಕದ ಮಾತುಗಳನ್ನು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮತ್ತು ಬಿಜೆಪಿ ನಾಯಕರು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಅಂದರೆ ಸಮಾಜದಲ್ಲಿ ಧಾರ್ಮಿಕ ವಿಭಜನೆ ಮತ್ತು ಮತ ಕ್ರೋಢೀಕರಣಕ್ಕೆ ಅಶಾಂತಿ, ಆತಂಕಗಳು ಬೆಳೆದರೆ ಮಾತ್ರ ಸಾಧ್ಯ. ಮುಂದಿನ ಚುನಾವಣೆಯಲ್ಲಿ ನಿರಾತಂಕವಾಗಿ ಓಟುಗಳ ಬೆಳೆಯನ್ನು ಕುಯ್ದುಕೊಳ್ಳಬಹುದು ಎನ್ನುವ ದುರಾಲೋಚನೆ ಇರುವುದು ಸ್ಪಷ್ಟ.

ಎಲ್ಲಾ ದಿಕ್ಕುಗಳಿಂದಲೂ ಸಂಘ ಪರಿವಾರ ನಡೆಸುತ್ತಿರುವ ದಾಳಿ ಅದಕ್ಕೆ ಆಡಳಿತ ಯಂತ್ರದ ಬೆಂಬಲ ಗಮನಿಸಿದರೆ ದೊಡ್ಡ ಅನಾಹುತಕ್ಕೆ ಪೂರ್ವಸಿದ್ಧತೆಯ ಆರಂಭ ಎನ್ನುವಂತೆ ಕಾಣುತ್ತಿದೆ. ಜನರ ಸಮಸ್ಯೆಗಳಿಗೆ ಕಿಂಚಿತ್ತೂ ಪರಿಹಾರ ನೀಡದ ಬಿಜೆಪಿ ಸರ್ಕಾರ ಕೋಮು ವಿದ್ವೇಷದ ಹುಟ್ಟಿಸಲು ಅಲ್ಪಸಂಖ್ಯಾತರನ್ನು ನೇರ ಗುರಿಮಾಡಿ ಮಾಡುತ್ತಿರುವುದು ಅಪಾಯಕಾರಿ ಬೆಳವಣಿಗೆ.

ಇಂತಹ ಅಪಾಯಕಾರಿ ಆಟಗಳನ್ನು ಬಿಜೆಪಿ ಸರಕಾರ ನಿಲ್ಲಿಸಬೇಕು. ಸಾಮರಸ್ಯ ಕದಡುವ ಶಕ್ತಿಗಳ ಮೇಲೆ ಕಠಿಣ ಕ್ರಮ ಕೈಗೊಂಡು ನಿಯಂತ್ರಿಸಬೇಕು. 2002 ರ ಕಾಯ್ದೆಯು ಕೇವಲ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿನ ಕಟ್ಟಡ, ಆವರಣ ವ್ಯಾಪ್ತಿಗೆ ಸಂಬಂಧಿಸಿದ್ದು ಎನ್ನಲಾಗಿದೆ. ಅದರಂತೆ ನೋಡಿದರೂ ಹಿಂದೂಯೇತರರು ದೇವಸ್ಥಾನದ ಬಳಿಯೂ ಇರಬಾರದು ಎನ್ನುವುದಕ್ಕೆ ಯಾವುದೇ ಅರ್ಥವಿಲ್ಲ. ಒಂದು ವೇಳೆ ಅಂತಹ ನಿರ್ಬಂಧ ಇದ್ದಲ್ಲಿ ಅದನ್ನು ಕಾನೂನಿನಿಂದ ತೆಗೆದು ಎಲ್ಲ ನಾಗರೀಕರಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕು. ಆ ಧಾರ್ಮಿಕ ಪರಿಸರದಲ್ಲಿನ ವಾತಾವರಣಕ್ಕೆ ಭಂಗ ಬರದಂತೆ ಕಾಯ್ದುಕೊಳ್ಳುವ ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಅಭ್ಯಂತರ ಇರಕೂಡದು.

ಸಂಘಪರಿವಾರದ ಅತಿರೇಕದ ವರ್ತನೆಗಳು ಉದ್ವೇಗದ ವಾತಾವರಣ ಸೃಷ್ಟಿಸಲ್ಪಡುತ್ತಿವೆ. ತಾರತಮ್ಯ ಎಸಗುವುದು ನಮ್ಮ ನಾಗರೀಕರ ದೇಶದ ಪ್ರತಿ ಪ್ರಜೆಗಳ ಹಕ್ಕಿಗೆ ಸಂಚಕಾರ ತರುವ ಅಮಾನವೀಯ ಕೃತ್ಯಗಳು. ಸರಕಾರ ಈಗಲಾದರೂ ಎಚ್ಚೆತ್ತು ಅಂತಹ ಶಕ್ತಿಗಳಿಗೆ ಕಡಿವಾಣ ಹಾಕಬೇಕು. ಎಲ್ಲರಿಗೂ ಸಮಾನ ಅವಕಾಶ ಮತ್ತು ಸಾಮರಸ್ಯ ಕಾಯ್ದುಕೊಂಡು ಹೋಗುವಂತೆ ಕ್ರಮ ವಹಿಸಬೇಕು. ಭಾರತೀಯ ಸಮಾಜದ ವಿಶಿಷ್ಟ ಜನ ಸಂಯೋಜನೆಯಲ್ಲಿ ಈ ಸಂಬಂಧಗಳು ಕಡಿದು ಹೋಗಲಾರವು.

ಜಾತ್ಯತೀತ ವ್ಯವಸ್ಥೆ ನಾಶಕ್ಕೆ ಸಕಲ ಹುನ್ನಾರ ಶಾಲೆಗಳಲ್ಲಿ ಭಗವದ್ಗೀತೆ ಬೋಧನೆ ಮಾರ್ಗ



*** ಪ್ರಕಾಶ್ ಕಾರಟ್**

2022–23ನೇ ಶೈಕ್ಷಣಿಕ ವರ್ಷದಿಂದ 6 ರಿಂದ 12ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಭಾಗವಾಗಿ ಭಗವದ್ಗೀತೆಯನ್ನು ಬೋಧಿಸಲಾಗುತ್ತದೆ ಎಂದು ಗುಜರಾತ್ ಶಿಕ್ಷಣ ಸಚಿವರು ಪ್ರಕಟಿಸಿರುವುದು ಪ್ರಭುತ್ವದ ಜಾತ್ಯತೀತ ತತ್ವದ ಖುಲ್ಲಂಖುಲ್ಲಾ ಉಲ್ಲಂಘನೆಯಾಗಿದೆ. ಸರ್ಕಾರ ನಡೆಸುವ ಶಾಲೆಗಳು ಯಾವುದೇ ರೀತಿಯ ಧಾರ್ಮಿಕ ಬೋಧನೆ ಮಾಡುವಂತಿಲ್ಲ ಎನ್ನುವುದು ಎಲ್ಲ ಜಾತ್ಯತೀತ ಪ್ರಭುತ್ವಗಳ ಒಂದು ಮೂಲಭೂತ ಸಿದ್ಧಾಂತವಾಗಿದೆ. ಅಮೆರಿಕ, ಫ್ರಾನ್ಸ್, ಜಪಾನ್ ಮತ್ತಿತರ ಹಲವು ದೇಶಗಳಲ್ಲಿ ಈ ಸಿದ್ಧಾಂತವನ್ನು ಅನುಸರಿಸಲಾಗುತ್ತಿದೆ. ಯಾವುದೇ ಬಗೆಯ ಧಾರ್ಮಿಕ ಶಿಕ್ಷಣ ನೀಡಲು ಖಾಸಗಿ ಶಿಕ್ಷಣ ಸಂಸ್ಥೆಗಳು ಸ್ವತಂತ್ರರು; ಆದರೆ ಸರ್ಕಾರಿ ಸಂಸ್ಥೆಗಳಲ್ಲಿ ಹಾಗೆ ಮಾಡುವಂತಿಲ್ಲ.

ಭಗವದ್ಗೀತೆ ಒಂದು ಧಾರ್ಮಿಕ ಗ್ರಂಥವಾಗಿದೆ. ಅದು ಹಿಂದು ಧರ್ಮಾಧಾರಿತ ಪರಂಪರೆಗಳು ಹಾಗೂ ತತ್ವಶಾಸ್ತ್ರದ ಆಧಾರದಲ್ಲಿ ಜೀವನ ವಿಧಾನ ಹಾಗೂ ನಡವಳಿಕೆಯನ್ನು ಅನುಸರಿಸಲು ಬೋಧಿಸುತ್ತದೆ. ಆರ್‌ಎಸ್‌ಎಸ್–ಬಿಜೆಪಿ ಕೂಟ ಹೇಳುವಂತೆ ಅದು ಧಾರ್ಮಿಕ ಸಂದರ್ಭದಿಂದ ಹೊರತಾದ ನೀತಿಪಾಠಗಳ ಪಠ್ಯವೆಂದೇನೂ ಹೇಳಲು ಆಗುವುದಿಲ್ಲ. ಹಿಂದೂ ಧರ್ಮದೊಳಗಿನವರೇ ಕೆಲವರು ಗೀತೆಯ ಕೆಲವು ವಿಚಾರಗಳನ್ನು ವಿರೋಧಿಸುತ್ತಾರೆ. ಚಾತುರ್ವರ್ಣ ಆಧಾರಿತ ಜಾತಿ ಪದ್ಧತಿ ಪವಿತ್ರವಾದುದು ಎಂದು ಹೇಳುವ ಕರ್ಮ ಸಿದ್ಧಾಂತದ ಬೋಧನೆಗೆ ಹಲವರ ವಿರೋಧವಿದೆ. ಆದರೆ ಗೀತೆಯು ಗೊಡ್ಡುತನದಿಂದ ಕೂಡಿದ್ದೇ ಮತ್ತು ಅನೇಕ ಪ್ರತಿಗಾಮಿ ಚಿಂತನೆಗಳನ್ನು ಹೊಂದಿದೆಯೇ ಎನ್ನುವುದು ಇಲ್ಲಿ ಮುಖ್ಯವಲ್ಲ. ಆದರೆ ಒಂದು ನಿರ್ದಿಷ್ಟ ಬಗೆಯ ಧಾರ್ಮಿಕ ಶಿಕ್ಷಣವನ್ನು ಸರ್ಕಾರಿ ಶಾಲೆಗಳಲ್ಲಿ ಕಲಿಸುವುದು ಎಷ್ಟು ಸರಿ ಎನ್ನುವುದು ಪ್ರಮುಖ ಪ್ರಶ್ನೆಯಾಗಿದೆ.

ಸಂವಿಧಾನ ಹೇಳುವುದೇನು?

ಭಾರತದ ಸಂವಿಧಾನದ ಮೂಲಭೂತ ಹಕ್ಕುಗಳು ಅಧ್ಯಾಯದ ಆರ್ಟಿಕಲ್ 28 (1) ಹೀಗೆ ಹೇಳುತ್ತದೆ: 'ಸರ್ಕಾರಿ ಹಣದಲ್ಲಿ ನಡೆಯುವ ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ ನೀಡಬಾರದು'. ಸರ್ಕಾರ ನಡೆಸದ, ಆದರೆ ಸರ್ಕಾರ ಮಾನ್ಯ ಮಾಡಿರುವ ಅಥವಾ ಸರ್ಕಾರದ ಆರ್ಥಿಕ ನೆರವು ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ಧಾರ್ಮಿಕ ಬೋಧನೆ ಮಾಡಿದರೆ, ಮೈನರ್ ಆಗಿದ್ದಲ್ಲಿ ಆ ವಿದ್ಯಾರ್ಥಿಯ ಹೆತ್ತವರು ಅಥವಾ ಪೋಷಕರು ಅನುಮತಿ ನೀಡದಿದ್ದರೆ ಅಂಥ ವಿದ್ಯಾರ್ಥಿ ಅಂಥ ಯಾವುದೇ ಧಾರ್ಮಿಕ ಬೋಧನೆ ಅಥವಾ ಧಾರ್ಮಿಕ ಪೂಜೆಗಳಲ್ಲಿ ಭಾಗವಹಿಸುವಂತೆ ಮಾಡುವಂತಿಲ್ಲ ಎಂದೂ ಈ ಸೆಕ್ಷನ್ ಹೇಳುತ್ತದೆ.

ಆದ್ದರಿಂದ ಭಗವದ್ಗೀತೆ ಕಲಿಸುವ ಕುರಿತು ಗುಜರಾತ್ ಸರ್ಕಾರ ಕೈಗೊಂಡಿರುವ ನಿರ್ಧಾರ ಸಂವಿಧಾನದಲ್ಲಿ ಅಡಕವಾಗಿರುವ ಮೂಲಭೂತ ಸಿದ್ಧಾಂತಕ್ಕೇ ವಿರುದ್ಧವಾಗಿದೆ. ಸರ್ಕಾರದ ಹಣಕಾಸು ನೆರವು ಪಡೆಯುವ ಸಂಸ್ಥೆಗಳು ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ ಕೊಡುವಂತಿಲ್ಲ ಎನ್ನುವುದೇ ಆ ತತ್ವವಾಗಿದೆ.

ಕರ್ನಾಟಕದ ಅಪಾಯ

ಗುಜರಾತ್‌ನ ಈ ಮಾರ್ಗವನ್ನು ಬಿಜೆಪಿ ಆಡಳಿತದ ಇತರ ರಾಜ್ಯಗಳೂ ಅನುಸರಿಸಲಿವೆ. ಶಿಕ್ಷಣ ತಜ್ಞರೊಂದಿಗೆ ಸಮಾಲೋಚಿಸಿದ ನಂತರ, ಶಾಲೆಗಳಲ್ಲಿ ಭಗವದ್ಗೀತೆ ಬೋಧಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದೆಂದು ಕರ್ನಾಟಕದ ಪ್ರಾಥಮಿಕ ಶಿಕ್ಷಣ ಮಂತ್ರಿ ಈಗಾಗಲೇ ಪ್ರಕಟಿಸಿದ್ದಾರೆ. 'ಭಗವದ್ಗೀತೆ ಹಿಂದೂಗಳಿಗೆ ಮಾತ್ರವಲ್ಲದೆ ಎಲ್ಲರಿಗಾಗಿ ಇದೆ' ಎಂದವರು ಫರ್ಮಾನು ಹೊರಡಿಸಿದ್ದಾರೆ! ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದನ್ನು ನಿಷೇಧಿಸಿದ್ದು ಕರ್ನಾಟಕದ ಈ ಸರ್ಕಾರವೇ ಆಗಿದೆ.

'ಭಗವದ್ಗೀತೆ ನಮಗೆ ನೈತಿಕತೆಯನ್ನು ಬೋಧಿಸುತ್ತದೆ. ಪ್ರತಿ ರಾಜ್ಯ ಸರ್ಕಾರ ಅದನ್ನು ಕಲಿಸುವುದನ್ನು ಪರಿಶೀಲಿಸ ಬಹುದು' ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಷಿ ಹೇಳಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಹಿಂದೂ ಧಾರ್ಮಿಕ ಗ್ರಂಥಗಳನ್ನು ಬೋಧಿಸುವುದು ಭಾರತೀಯ ಪ್ರಭುತ್ವವನ್ನು ಅಜಾತ್ಯತೀತಗೊಳಿಸುವ ಆರ್‌ಎಸ್‌ಎಸ್–ಬಿಜೆಪಿಯ ಒಟ್ಟಾರೆ ಯೋಜನೆಯ ಭಾಗವಾಗಿದೆ. ಶಿಕ್ಷಣ ಪದ್ಧತಿಯಲ್ಲಿ 'ಭಾರತೀಯ ಸಂಸ್ಕೃತಿ ಮತ್ತು ಜ್ಞಾನ ವ್ಯವಸ್ಥೆಗಳನ್ನು' ಸೇರಿಸುವಂತೆ ಹೊಸ ಶಿಕ್ಷಣ ನೀತಿ ಶಿಫಾರಸು ಮಾಡಿರುವುದನ್ನು ಉಲ್ಲೇಖಿಸಿ ಗುಜರಾತ್ ಶಿಕ್ಷಣ ಮಂತ್ರಿ ಶಾಲಾ ಸಿಲಬಸ್‌ನಲ್ಲಿ ಗೀತೆ ಸೇರಿಸುವ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಪ್ರಭುತ್ವದ ಇತರ ಎಲ್ಲ ರಂಗಗಳಲ್ಲಿ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಹಿಂದೂ ಧಾರ್ಮಿಕ ಸಂಕೇತಗಳ ಬಳಕೆ ಮತ್ತು ಹಿಂದೂ ಪೂಜಾ ಸ್ಥಳಗಳ ವಿಸ್ತರಣೆಗೆ ಸರ್ಕಾರಿ ಹನವನ್ನು ನೀಡುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಪ್ರಧಾನ ಮಂತ್ರಿ ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟಿಸಿದ್ದು ಇದಕ್ಕೆ ದೊಡ್ಡ ಉದಾಹರಣೆಯಾಗಿದೆ.

ಪ್ರಭುತ್ವವು ಬಹುಸಂಖ್ಯಾತರ ಧರ್ಮವನ್ನು ಪೋಷಿಸುವುದು ಹಾಗೂ ಸರ್ಕಾರಿ ಸಂಸ್ಥೆಗಳು ಮತ್ತು ವ್ಯವಸ್ಥೆಗಳಲ್ಲಿ ಅದಕ್ಕೆ ಅನುಕೂಲ ಕಲ್ಪಿಸುವುದರಿಂದ ಜಾತ್ಯತೀತತೆಯ ಈಗ ಅಳಿದುಳಿದಿರುವ ಅಲ್ಪಸ್ವಲ್ಪ ಅಂಶವೂ ನಾಶವಾಗಲಿದೆ.

ಬಿಜೆಪಿ ರಾಜ್ಯ ಸರ್ಕಾರಗಳು 'ಲವ್ ಜಿಹಾದ್', ಮತಾಂತರ ವಿರುದ್ಧ ರೂಪಿಸಿರುವ ಕಾನೂನುಗಳು ಹಾಗೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ತರಾತುರಿಯಲ್ಲಿ ಗೋಹತ್ಯೆ ನಿಷೇಧ ಮಾಡಿದ್ದು ಇವೆಲ್ಲವೂ ಈ ಹುನ್ನಾರದ ಹೊರಗೆ ಎದ್ದು ಕಾಣುವಂಥ ಭಾಗವಾಗಿದೆ. ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ಎಂಬ ಕೇಂದ್ರೀಯ ಕಾನೂನು ಪೌರತ್ವಕ್ಕೆ ಧಾರ್ಮಿಕ ಮಾನದಂಡವನ್ನು ಅನ್ವಯಿಸುವ ಉದ್ದೇಶ ಹೊಂದಿದೆ.

ಕಾಂಗ್ರೆಸ್, ಆಪ್ ಎಡಬಿಡಂಗಿತನ

ಗುಜರಾತ್‌ನಲ್ಲಿ ಶಾಲೆಗಳಲ್ಲಿ ಭಗವದ್ಗೀತೆ ಬೋಧಿಸುವುದನ್ನು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಸ್ವಾಗತಿಸಿದೆ. 'ಪಠ್ಯಕ್ರಮದಲ್ಲಿ ಭಗವದ್ಗೀತೆ ಅಳವಡಿಸುವ ನಿರ್ಧಾರವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಮೊದಲು ರಾಜ್ಯ ಸರ್ಕಾರ ಗೀತೆಯಿಂದ ಪಾಠ ಕಲಿಯುವುದು ಅಗತ್ಯ' ಎಂದು ಕಾಂಗ್ರೆಸ್ ವಕ್ತಾರರು ಹೇಳಿದ್ದಾರೆ. ಕಾಂಗ್ರೆಸ್ ಜೊತೆಗೆ ಸ್ಪರ್ಧೆಯೋ ಎನ್ನುವಂತೆ ಆಮ್ ಆದ್ಮಿ ಪಕ್ಷದ (ಆಪ್) ವಕ್ತಾರ ಕೂಡ ಗುಜರಾತ್ ನಿರ್ಧಾರವನ್ನು ಸ್ವಾಗತಿಸಿ, 'ಇದರಿಂದ ವಿದ್ಯಾರ್ಥಿಗಳಿಗೆ ಲಾಭವಾಗುತ್ತದೆ' ಎಂದಿದ್ದಾರೆ.

ಗುಜರಾತ್‌ನಲ್ಲಿ ಪ್ರತಿಪಕ್ಷಗಳ ಪ್ರತಿಕ್ರಿಯೆಯು ಹೊಸ ವಾಸ್ತವತೆಯನ್ನು ಎತ್ತಿ ತೋರಿಸುತ್ತದೆ. ಹಿಂದೂತ್ವವು ನಿಧಾನವಾಗಿ ಪ್ರಾಬಲ್ಯ ಗಳಿಸುತ್ತಿದೆ ಎನ್ನುವುದೇ ಆ ವಾಸ್ತವತೆ. ಎಡ ಮತ್ತು ಜಾತ್ಯತೀತ ಶಕ್ತಿಗಳು; ಹಾಗೂ ಭಾರತ ಒಂದು ಜಾತ್ಯತೀತ ರಾಷ್ಟ್ರವಾಗಿ ಇರುವುದನ್ನು ನೋಡಬಯಸುವ ಎಲ್ಲರೂ ಹಿಂದೂತ್ವದ ದೃಷ್ಟಿಕೋನಕ್ಕೆ ಪರ್ಯಾಯ ರೂಪಿಸುವ ಹೋರಾಟದ ವೇಳೆ ಈ ವಾಸ್ತವ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಅನು: ವಿಶ್ವ

ಅಖಿಲ ಭಾರತ ಮುಷ್ಕರದತ್ತ

ಸಾರ್ವಜನಿಕ ಉದ್ಯಮಗಳ ಖಾಸಗಿರಣ ನಿಲ್ಲಿಸಿ.. ಭಾರತದ ಪ್ರಜೆಗಳಾದ ನಾವು ಅದಕ್ಕೆ ಅವಕಾಶ ನೀಡಲಾರೆವು...

ಬಿಜೆಪಿ ಜಾರಿ ಮಾಡಲು ಹೊರಟಿರುವ ಈ ಅಮಲಿನ ಖಾಸಗಿಕರಣ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ಇದು ನಿಲ್ಲಬೇಕಾದರೆ ಕಾರ್ಮಿಕ ವರ್ಗ ಮತ್ತು ಶೋಷಿತರ ಐಕ್ಯ ಚಳವಳಿಯಿಂದ ಮಾತ್ರ ಸಾಧ್ಯ.

ಕೆ. ಮಹಾಂತೇಶ್

ಸ್ವಾತಂತ್ರ್ಯೋತ್ತರ ಭಾರತದ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಉದ್ಯಮಗಳು ಮಹತ್ತರ ಪಾತ್ರ ವಹಿಸುತ್ತಿವೆ. ದೇಶವು ಆರ್ಥಿಕತೆ ಹಾಗೂ ಕೈಗಾರಿಕರಣಗೊಳ್ಳುವಲ್ಲಿ ಮತ್ತು ದೇಶದಲ್ಲಿ ವಿದೇಶಿ ಆಮದು ತಗ್ಗಿಸಲು ಹಾಗೂ ಲಕ್ಷಾಂತರ ಯುವಜನರಿಗೆ ಉದ್ಯೋಗ ಒದಗಿಸಲು ಈ ಉದ್ಯಮಗಳು ಅಪಾರ ಸಹಾಯ ಮಾಡಿವೆ.

1991 ರ ಬಳಿಕ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸರಕಾರವು ನವ ಉದಾರಿಕರಣ ನೀತಿಗಳ ಭಾಗವಾಗಿ ಅಧಿಕೃತವಾಗಿ ಈ ಖಾಸಗೀಕರಣ ನೀತಿಯನ್ನು ದೇಶದಲ್ಲಿ ಅಧಿಕೃತವಾಗಿ ಜಾರಿಮಾಡಿತು. ಆ ಪ್ರಕ್ರಿಯೆ ಈಗ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತದಲ್ಲಿ ನವಉದಾರವಾದಿ ಅಜೆಂಡಾವಾಗಿ ಮತ್ತಷ್ಟು ತೀವ್ರಗೊಂಡಿದೆ. ತನ್ನನ್ನು 'ರಾಷ್ಟ್ರೀಯವಾದಿ' ಸರ್ಕಾರ ಎಂದು ಹೇಳಿಕೊಳ್ಳುವ ಮೋದಿ ಸರ್ಕಾರ ದೇಶದ ಎಲ್ಲ ರಾಷ್ಟ್ರೀಯ ಸ್ವತ್ತುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿದೆ. ಕೇಂದ್ರ ಸರ್ಕಾರದ ಅಂಕಿ ಅಂಶದ ಪ್ರಕಾರವೇ ಕಳೆದ ಏಳು ವರ್ಷಗಳ ಬಿಜೆಪಿ ನೇತೃತ್ವದ ಸರ್ಕಾರವು 5,30,554 ಕೋಟಿ ರೂಪಾಯಿಗಳ ಮೌಲ್ಯದ ಸಾರ್ವಜನಿಕ ಸ್ವತ್ತುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದೆ.

ಖಾಸಗಿಕರಣಕ್ಕಾಗಿಯೇ ಶಾಸನಗಳು:

ಸರ್ಕಾರದ ಈ ನೀತಿಗಳಿಗೆ ಕಾರ್ಮಿಕ ಸಂಘಗಳಿಂದ ಹಾಗೂ ಎಡಪಕ್ಷಗಳಿಂದ ಸಂಸತ್ತಿನ ಹೊರಗೆ ಮತ್ತು ಒಳಗೂ ತೀವ್ರ ವಿರೋಧವಿದ್ದಾಗ್ಯೂ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಈ ಖಾಸಗಿಕರಣ ಪ್ರಕ್ರಿಯೆಗಳನ್ನು ತೀವ್ರಗೊಳಿಸಲಿಕ್ಕಾಗಿಯೇ ಹಲವಾರು ಶಾಸನಾತ್ಮಕ ಕ್ರಮಗಳನ್ನು ಕೈಗೊಂಡಿದೆ ಉದಾಹರಣೆಗಾಗಿ

- ಈಗಲೂ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ದೇಶದ ಪ್ರಮುಖ ಬಂದರುಗಳನ್ನು ಖಾಸಗಿಕರಿಸುವ ಯೋಜನೆಯ ಭಾಗವಾಗಿ ಬಂದರು ಪ್ರಾಧಿಕಾರ ಕಾನೂನನ್ನು ರೂಪಿಸಿ ಅಂಗೀಕರಿಸಿತು.
- ದೇಶದ ರಕ್ಷಣಾ ಉತ್ಪಾದನಾ ವಲಯದ ಉದ್ಯಮಗಳಲ್ಲಿ ಹಿಂದಿನಿಂದಲೂ 'ತಂತ್ರಜ್ಞಾನ ಹಸ್ತಾಂತರ'ವನ್ನು ಮಾತ್ರ ವಿದೇಶಿಗಳಿಂದ ಆಮದು ಮಾಡಿಕೊಳ್ಳಲು ಇದ್ದ ನೀತಿಯನ್ನು ಸಂಪೂರ್ಣ ಕೈ ಬಿಟ್ಟು 'ನೇರ ವಿದೇಶಿ ಹೂಡಿಕೆ'ಗೆ ಅವಕಾಶ ನೀಡಲಾಗಿದೆ.
- ದೇಶದ ಶಸ್ತ್ರಾಸ್ತ್ರ ಕಾರ್ಖಾನೆ ಮಂಡಳಿ **(Ordnance Factory Board)** ಅಡಿಯಲ್ಲಿ ಇದ್ದ 41 ಶಸ್ತ್ರಾಸ್ತ್ರ ಕಾರ್ಖಾನೆಗಳನ್ನು ಖಾಸಗಿಕರಣಗೊಳಿಸುವ ಗುರಿಯ ಭಾಗವಾಗಿ 7 ಪ್ರತ್ಯೇಕ ಕಾರ್ಪೊರೇಟ್ ವಿಭಾಗಗಳಾಗಿ ಪರಿವರ್ತಿಸಿದೆ.
- ಸಾರ್ವಜನಿಕ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಬಲಹೀನಗೊಳಿಸಿ ದುಗ್ಗಾಣಿ ಬೆಲೆಗೆ ಖಾಸಗಿಯವರಿಗೆ ಮಾರಲು ಹಾಗೂ ಅವುಗಳಲ್ಲಿ ಸಂಗ್ರಹವಾಗಿರುವ ಸಾರ್ವಜನಿಕ ಹಣವನ್ನು ಖಾಸಗಿ ಬಂಡವಾಳಿಗರು ಲೂಟಿ ಹೊಡೆಯಲು ಅವಕಾಶ ಕಲ್ಪಿಸುವ ಉದ್ದೇಶದಿಂದ ದಿವಾಳಿತನ ಕಾಯ್ದೆಗೆ ಮತ್ತಷ್ಟು ತಿದ್ದುಪಡಿ ತರಲಾಗಿದೆ.
- ಗಣಿ ಮತ್ತು ಕಲ್ಲಿದ್ದಲು(ರಾಷ್ಟ್ರೀಕರಣ) ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ವಾಣಿಜ್ಯ ಗಣಿಗಳು ಕಲ್ಲಿದ್ದಲು ಮತ್ತು ಖನಿಜಾಂಶಗಳ ಮೇಲಿದ್ದ ರಫ್ತು ನಿಷೇಧವನ್ನು ನಿರಶನಗೊಳಿಸಲಾಗಿದೆ ಆ ಮೂಲಕ ಖಾಸಗಿ ಕಂಪನಿಗಳು ಬೇಕಾಬಿಟ್ಟಿಯಾಗಿ ಗಣಿ, ಕಲ್ಲಿದ್ದಲು ಹಾಗೂ ಅರಣ್ಯ ಪ್ರದೇಶದ ಸಂಪತ್ತು ಕೊಳ್ಳೆ ಹೊಡೆಯಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಇದರ ಜತೆಗೆ ಕೋಲ್ ಇಂಡಿಯಾ ಮೊದಲಾದ ಸಾರ್ವಜನಿಕ ಉದ್ಯಮಗಳಿಗೆ ಸಾಕಷ್ಟು ಮಿತಿಗಳನ್ನು ವಿಧಿಸಿ ಅಂಚಿಗೆ ತಳ್ಳಲಾಗಿದೆ.
- ಸಾಮಾನ್ಯ ವಿಮಾ ಕಾನೂನಿಗೂ(General Insurance Amendment Act) ತಿದ್ದುಪಡಿ ತಂದು ಇಲ್ಲೂ ಖಾಸಗಿಕರಣಕ್ಕೆ ಅವಕಾಶ ನೀಡಲಾಗಿದೆ. ಇದಲ್ಲದೆ 2021ರ ಹಣಕಾಸು ಮಸೂದೆಯ ಭಾಗವಾಗಿ ಜೀವ ವಿಮಾ ನಿಗಮ ಕಾನೂನಿಗೂ ಗುಟ್ಟಾಗಿ ಬದಲಾವಣೆ ತಂದು ಅದನ್ನು ಶೇರು ಮಾರುಕಟ್ಟೆಗೆ ಮುಕ್ತಗೊಳಿಸಲಾಗಿದೆ.
- **ಸಾರ್ವಜನಿಕ ಉದ್ಯಮಗಳ ವಿರುದ್ಧ ತಾರತಮ್ಯ**

ಕೇಂದ್ರ ಸರ್ಕಾರ ಪ್ರಜ್ಞಾಪೂರ್ವಕವಾಗಿಯೇ ಸಾರ್ವಜನಿಕ ಉದ್ಯಮಗಳು ದುರ್ಬಲಗೊಳ್ಳುವಂತೆ ಕ್ರಮವಹಿಸುತ್ತಿದೆ. ಬಳಿಕ ಸಾರ್ವಜನಿಕ ಹಣ ಬಳಸಿಕೊಂಡು ಇವು 'ಬಿಳಿಯಾನೆ' ಯಂತೆ ಬೆಳೆದಿವೆ ಎನ್ನುವ ಕೂಗು ಎಬ್ಬಿಸುತ್ತಿದೆ. ಮಾತ್ರವಲ್ಲ, ಅವುಗಳನ್ನು ಸಾಯಿಸುವ ಮೊದಲೇ 'ಹುಚ್ಚು ನಾಯಿ' ಪಟ್ಟವನ್ನು ಸರ್ಕಾರವೇ ಕಟ್ಟುತ್ತದೆ. ಇದಕ್ಕೆ ಜ್ವಲಂತ ಕೆಲವು ಉದಾಹರಣೆ ಎಂದರೆ ಓಎನ್‌ಜಿಸಿ ಕಂಪನಿಯು ತನ್ನ ಹೂಡಿಕೆಯಿಂದಲೇ ತೈಲಭೂಮಿಗಳನ್ನು ಅವಿಷ್ಕಾರಗೊಳಿಸಿದ್ದರೂ ಕೇಂದ್ರ ಸರ್ಕಾರ ತೈಲ ಉತ್ಪಾದನೆ ಮಾಡುವ ಕೆಲಸವನ್ನು ಖಾಸಗಿ ಮತ್ತು ವಿದೇಶಿ ಸಂಸ್ಥೆಗಳಿಗೆ ನೀಡಲು ನಿರ್ಧರಿಸಿದೆ. ಇದರಿಂದಾಗಿ ನಮ್ಮ ದೇಶದ ರಿಲೆಯನ್ಸ್ ಸೇರಿ ಇತರೆ ಬಲಾಢ್ಯ ವಿದೇಶಿ ತೈಲ ಕಂಪೆನಿಗಳು ಜಂಟಿ ಸಹಭಾಗಿತ್ವದಲ್ಲಿ ಲಾಭಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ.

ಸಾರ್ವಜನಿಕ ವಲಯದ ಸ್ಟೀಲ್ ಅಥಾರಿಟಿ ನಿಗಮವು ಸರ್ಕಾರಕ್ಕೆ ಭಾರೀ ಪ್ರಮಾಣದ ತೆರಿಗೆ ಕಟ್ಟಿ ತನಗೆ ಅಗತ್ಯವಿರುವ ಕಬ್ಬಿಣ ಅದಿರಿನ ಗಣಿಗಳನ್ನು ಪಡೆದುಕೊಂಡಿದೆ ಆದರೆ ಕೇಂದ್ರ ಸರ್ಕಾರವು ಅಲ್ಲಿ ಖಾಸಗಿ ಕಂಪನಿಗಳು ಉಚಿತವಾಗಿ ಗಣಿ ಅದಿರು ಬಳಲು ಅವಕಾಶ ನೀಡಿದೆ. ಇದು ರಾಷ್ಟ್ರೀಯ ಹಿತಾಸಕ್ತಿ ನೆಪದಲ್ಲಿ ಟಾಟಾ,ಎಸ್ಸಾರ್,ಮಿತ್ತಲ್ ಹಾಗೂ ಜಿಂದಾಲ್ ನಂತಹ ದೊಡ್ಡ ಖಾಸಗಿ ಕಂಪನಿಗಳು ಲಾಭ ಮಾಡಿಕೊಡುವ ಉದ್ದೇಶವಲ್ಲದೆ ಮತ್ತೇನಲ್ಲ.

ಕಳೆದ ಏಳು ವರ್ಷಗಳಿಂದಲೂ ಬಿಎಸ್‌ಎನ್‌ಎಲ್ ಸಂಸ್ಥೆಗೆ 4ಜಿ ಸೇವೆಗಳನ್ನು ನೀಡಲು ಕೇಂದ್ರ ಸರ್ಕಾರ ನೀಡದ ಕಾರಣ ಖಾಸಗಿ ಟೆಲಿಕಾಂ ಕಂಪನಿಗಳು ಮಾರುಕಟ್ಟೆಯಲ್ಲಿ ಲಾಭ ಮಾಡಿಕೊಳ್ಳುತ್ತಿವೆ. ಈ ಸಂಸ್ಥೆಗೆ ಅಗತ್ಯವಿರುವ ಸಾಮಾಗ್ರಿಗಳನ್ನು ಖರೀದಿಸಲು ಸಹಾ ಕೇಂದ್ರ ಸರ್ಕಾರ ಒಂದಲ್ಲ ಒಂದು ನೆಪದಿಂದ ಅವಕಾಶವನ್ನೇ ನೀಡುತ್ತಿಲ್ಲ.

ಖಾಸಗೀಕರಣವೆಂದರೆ: ಇದು ಸಾರ್ವಜನಿಕ ಸಂಪತ್ತನ್ನು ಖಾಸಗಿ ಒಡೆಯರಿಗೆ ವರ್ಗಾಹಿಸುವ ತಂತ್ರ

ಸಾರ್ವಜನಿಕ ಉದ್ಯಮಗಳ ಕೊಡುಗೆಗಳು:

ದೇಶವನ್ನು ಸ್ವತಂತ್ರ ಸ್ವಾವಲಂಬಿ ಆರ್ಥಿಕವಾಗಿ ಅಭಿವೃದ್ಧಿಗೊಳಿಸಿದ್ದು

ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದು

ಸಾರ್ವಜನಿಕ ಉದ್ಯಮಗಳ ಸ್ಥಾಪನೆಯಿಂದಾಗಿ ದೇಶದ ಗ್ರಾಮೀಣ ಹಾಗೂ ಅಂಚಿನಲ್ಲಿರುವ ಆದಿವಾಸಿ ಪ್ರದೇಶಗಳು ಅಭಿವೃದ್ಧಿಗೊಂಡಿದ್ದು

ಘನತೆಯ ಉದ್ಯೋಗವಕಾಶಗಳನ್ನು ಸೃಷ್ಟಿಯಾಗಿದ್ದು

ಮೀಸಲಾತಿ ಮೂಲಕ ಸಾಮಾಜಿಕವಾಗಿ ಮತ್ತು ದಮನಿತ ಎಸ್‌ಸಿ–ಎಸ್‌ಟಿ ಜನರಿಗೆ ಉದ್ಯೋಗವಕಾಶನ್ನು ಕಲ್ಪಿಸಿದ್ದು

ಅಪ್ರತ್ಯಕ್ಷವಾಗಿ ಲಕ್ಷಾಂತರ ಉದ್ಯೋಗವಕಾಶಗಳ ಸೃಷ್ಟಿಯ ಜತೆಗೆ ಖಾಸಗಿ ಪುಟ 15 ಕ್ಕೆ



ಜನತೆ ರೂಪಿಸಿದ ಪರ್ಯಾಯ ಬಜೆಟ್

ಕೇಂದ್ರ ತನ್ನ ಕೃಷಿ ಕಾಯ್ದೆಗಳನ್ನು ರದ್ದುಪಡಿಸಿದ್ದರೂ ರಾಜ್ಯದಲ್ಲಿ ಇಂತಹ ಕೃಷಿ ಕಾಯ್ದೆಗಳನ್ನು ಮೊಂಡುತನದಿಂದ ಉಳಿಸಿಕೊಳ್ಳಲಾಗಿದೆ. ಕಾರ್ಪೊರೇಟ್ ಹಿಂದುತ್ವದ ಪ್ರಯೋಗ ಶಾಲೆಯಾಗಿ ಕರ್ನಾಟಕವನ್ನು ರೂಪಿಸಲಾಗುತ್ತಿದೆ. ಕೃಷಿ ಕಾಯ್ದೆಗಳ ವಿಷಯದಲ್ಲಾಗಲಿ, ನೂತನ ಶಿಕ್ಷಣ ನೀತಿ ವಿಷಯದಲ್ಲಾಗಲಿ, ಕಾರ್ಮಿಕ ಸಂಹಿತೆಗಳ ವಿಷಯದಲ್ಲಾಗಲಿ ಕರ್ನಾಟಕವನ್ನೇ ಪ್ರಯೋಗ ಶಾಲೆಯಾಗಿ ಪರಿಗಣಿಸಲಾಗಿದೆ. ಜನತೆಯ ಅಭಿವೃದ್ಧಿಯನ್ನು ನಿರ್ಲಕ್ಷಿಸಿ ಕಾರ್ಪೊರೇಟ್ ಕಂಪನಿಗಳನ್ನೇ ಲಕ್ಷ್ಯದಲ್ಲಿರಿಸಿ ಅಪಾರ ಸಾಲದ ಹೊರೆಯನ್ನು ಜನರ ಹೆಗಲ ಮೇಲೆ ಹೊರಿಸಿದೆ. ದೇಶದ ಯಾವುದೇ ಜನ ವಿರೋಧಿ ಧೋರಣೆಗಳ ಅನುಷ್ಠಾನವು ಇಲ್ಲಿ ಜಾರಿಗೊಳ್ಳುತ್ತಿದೆ. ಈ ಸವಾಲನ್ನು ಎದುರಿಸುವ ಅಗತ್ಯವನ್ನು ಜನ ಪರ್ಯಾಯ ಬಜೆಟ್ ಅಧಿವೇಶನ ವಿಶೇಷವಾಗಿ ಚರ್ಚಿಸಿತು ಮತ್ತು ಜನಪರವಾದ ಪರ್ಯಾಯ ಪ್ರಸ್ತಾವಗಳನ್ನು ನಿರ್ದಿಷ್ಟವಾಗಿ ರೂಪಿಸಿತು. ಜನಾಂದೋಲನದ ಹಾದಿಯಲ್ಲಿ ಮಹತ್ವವಾದ ಈ ಅಧಿವೇಶನದ ಕುರಿತ ವರದಿ ಯುವ ರೈತ ನಾಯಕ ಟಿ.ಯಶವಂತ್‌ರವರಿಂದ.



ಆಪರೇಷನ್ ಕಮಲದ ಮೂಲಕ ಅನೈತಿಕ ಹಾಗೂ ಅಕ್ರಮವಾಗಿ ಬಿಜೆಪಿಯು ಕರ್ನಾಟಕ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದಿದೆ. ರಾಜ್ಯದ ಜನಾದೇಶಕ್ಕೆ ವಿರುದ್ಧವಾಗಿ ಅಧಿಕಾರಕ್ಕೆ ಬಂದ ದಿನದಿಂದಲೂ ಭ್ರಷ್ಟಾಚಾರ ಮತ್ತು ಒಳಜಗಳಗಳು ಈ ಸರ್ಕಾರದ ಹೆಗ್ಗುರುತಾಗಿವೆ. ಭ್ರಷ್ಟಾಚಾರದ ಮೂಲಕ ಶೇಖರಣೆಗೊಂಡ ಹಣದ ಬಲದ ಮೇಲೆ, ರಾಜ್ಯದ ಬಿಜೆಪಿ ಪಕ್ಷ ಹಾಗೂ ಸರ್ಕಾರದ ಮೇಲೆ ಯಡಿಯೂರಪ್ಪ ಸ್ಥಾಪಿಸಿದ್ದ ಭದ್ರವಾದ ಹಿಡಿತವನ್ನು ಸಡಿಲಿಸಿ ಆರ್.ಎಸ್.ಎಸ್.ನ ಹಿಡಿತ ಬಲಗೊಳಿಸುವ ಉದ್ದೇಶದಿಂದ ಜನತಾ ಪರಿವಾರ ಮೂಲದಿಂದ ಬಿಜೆಪಿಗೆ ಬಂದವರಾದ ಬಸವರಾಜ ಬೊಮ್ಮಾಯಿ ರವರನ್ನು ಕಳೆದ ಎಂಟು ತಿಂಗಳ ಹಿಂದೆ ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿಸಲಾಯಿತು.

ಇದುವರೆಗಿನ ಎಲ್ಲಾ ಬಿಜೆಪಿ ಸರ್ಕಾರಗಳಿಗಿಂತ ಈ ಸರ್ಕಾರವು ಆರ್.ಎಸ್.ಎಸ್.ನ ಬಿಗಿಮುಷ್ಟಿ ಅತ್ಯಂತ ಗರಿಷ್ಟ ಪ್ರಮಾಣದಲ್ಲಿ ಬಲವಾಗಿರುವ ಸರ್ಕಾರವಾಗಿದೆ. ಸರ್ಕಾರದ ಪ್ರತಿ ತೀರ್ಮಾನಗಳು ಹಾಗೂ ಪ್ರಕಟಣೆಗಳು ಸಮಾಜವನ್ನು ಕೋಮು ಆಧಾರದಲ್ಲಿ ಒಡೆಯುವ ಉದ್ದೇಶಗಳನ್ನು ಹೊಂದಿರುವಂತಹವೇ ಆಗಿದೆ. ರಾಜ್ಯದೆಲ್ಲೆಡೆ ಕೋಮು ಸಾಮರಸ್ಯಕ್ಕೆ ದಕ್ಕೆ ತರುವಂತಹ ಘಟನೆಗಳು ಪ್ರತಿ ದಿನ ವರದಿಯಾಗುತ್ತಿವೆ. ಅದೇ ಸಂದರ್ಭದಲ್ಲಿ ರಾಜ್ಯದ ಪ್ರತಿಯೊಂದು ವಿಭಾಗದ ಸಮಸ್ಯೆಗಳಿಗೆ ಅತ್ಯಂತ ಕುರುಡಾಗಿ ವರ್ತಿಸುತ್ತಿದೆ.

ಅತಿವೃಷ್ಠಿ ಹಾಗೂ ಅನಾವೃಷ್ಠಿ ಈ ಎರಡೂ ಸಂದರ್ಭಗಳಲ್ಲೂ ಆಸ್ತಿ–ಮನೆ–ಪ್ರಾಣ–ಬೆಳೆ–ಜಾನುವಾರುಗಳನ್ನೂ ಕಳೆದುಕೊಂಡ ರೈತರಿಗೆ ಪರಿಹಾರವನ್ನು ನೀಡಲಿಲ್ಲ. ಕೋವಿಡ್ ಸಾಂಕ್ರಾಮಿಕ ಕ್ಕೆ ರಾಜ್ಯದ ಲಕ್ಷಾಂತರ ಜನ ಪ್ರಾಣ ಕಳೆದುಕೊಂಡು ಅಪಾರವಾದ ಆನಾರೋಗ್ಯ ಹಾಗೂ ಹಣಕಾಸು ಸಂಕಷ್ಟಕ್ಕೆ ಸಿಲುಕಿ ನಲುಗಿದರು. ಬೆಲೆ ಏರಿಕೆ, ನಿರುದ್ಯೋಗ, ವಲಸೆ–ಮರುವಲಸೆ, ಆತ್ಮಹತ್ಯೆ, ಸಾಲ ಬಾಧೆ, ಬಡತನ, ಅನಾರೋಗ್ಯ, ಸಾಮಾಜಿಕ ಅಭದ್ರತೆ ಮುಂತಾದ ಸಮಸ್ಯೆಗಳಿಗೆ ಸಿಲುಕಿ ಜನರು ಒದ್ದಾಡುತ್ತಿದ್ದರೂ ಈ ಬಗ್ಗೆ ಅಗತ್ಯ ಕ್ರಮಗಳಿಗಾಗಿ ಆಗ್ರಹಿಸಿ ರಾಜ್ಯಾದ್ಯಂತ ಕೂಗು ಹಾಕುತ್ತಿದ್ದರೂ ಈ ಯಾವ ಕೂಗಿಗೂ ತಲೆ ಕೆಡಿಸಿಕೊಳ್ಳದೇ ಶೇ 40 ಕಮಿಷನ್ ಹಣ ಬಾಚುವಲ್ಲಿ ಮುಳುಗಿ ಹೋಗಿದೆ.

ಆಡಳಿತ ನಡೆಸುತ್ತಿರುವ ಬಿಜೆಪಿ ಪಕ್ಷ ಈ ಪ್ರಮಾಣದಲ್ಲಿ ಜನ ವಿರೋಧಿಯೂ, ಕೋಮುವಾದಿಯೂ ಆಗಿರುವ ಸಂದರ್ಭದಲ್ಲಿ ರಾಜ್ಯದ ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಈ ಜನ ವಿರೋಧಿ ಧೋರಣೆಗಳ ವಿರುದ್ಧ, ಭ್ರಷ್ಟಾಚಾರದ ವಿರುದ್ಧ, ಕೋಮುವಾದದ ವಿರುದ್ಧ ಬೀದಿಗಳಿದು ಹೋರಾಟ ಮಾಡುವುದಿರಲಿ ವಿಧಾನ ಸಭೆಯಲ್ಲೂ ಕೂಡ ಪರಿಣಾಮಕಾರಿಯಾಗಿ ಧ್ವನಿ ಎತ್ತುತ್ತಿಲ್ಲ. ಬದಲಾಗಿ ತಮ್ಮ ತಮ್ಮಲ್ಲೇ ಕಚ್ಚಾಡುತ್ತಿವೆ.

ಕೇಂದ್ರ ತನ್ನ ಕೃಷಿ ಕಾಯ್ದೆಗಳನ್ನು ರದ್ದುಪಡಿಸಿದ್ದರೂ ರಾಜ್ಯದಲ್ಲಿ ಇಂತಹ ಕೃಷಿ ಕಾಯ್ದೆಗಳನ್ನು ಮೊಂಡುತನದಿಂದ ಉಳಿಸಿಕೊಳ್ಳಲಾಗಿದೆ. ಕಾರ್ಪೊರೇಟ್ ಹಿಂದುತ್ವದ ಪ್ರಯೋಗ ಶಾಲೆಯಾಗಿ ಕರ್ನಾಟಕವನ್ನು ರೂಪಿಸಲಾಗುತ್ತಿದೆ. ಕೃಷಿ ಕಾಯ್ದೆಗಳ ವಿಷಯದಲ್ಲಾಗಲಿ, ನೂತನ ಶಿಕ್ಷಣ ನೀತಿ ವಿಷಯದಲ್ಲಾಗಲಿ, ಕಾರ್ಮಿಕ ಸಂಹಿತೆಗಳ ವಿಷಯದಲ್ಲಾಗಲಿ ಕರ್ನಾಟಕವನ್ನೇ ಪ್ರಯೋಗ ಶಾಲೆಯಾಗಿ ಪರಿಗಣಿಸಲಾಗಿದೆ. ದೇಶದ ಯಾವುದೇ ಜನ ವಿರೋಧಿ ಧೋರಣೆಗಳ ಅನುಷ್ಠಾನವು ಇಲ್ಲಿ ಜಾರಿಗೊಳ್ಳುತ್ತಿದೆ. ಈ ಸವಾಲನ್ನು ಎದುರಿಸುವ ಅಗತ್ಯವನ್ನು ಜನ ಪರ್ಯಾಯ ಬಜೆಟ್ ಅಧಿವೇಶನ ವಿಶೇಷವಾಗಿ ಚರ್ಚಿಸಿದೆ.

ವಿಧಾನ ಸಭೆ ಕಲಾಪಗಳು ರಾಜ್ಯದ ಶಾಸಕರುಗಳಿಗೆ ವೇಳೆ ಕಳೆಯುವ ತಾಣವಾಗಿ, ಅರ್ಥಪೂರ್ಣ ಚರ್ಚೆಗಳೇ ಇಲ್ಲದ ರಿಯಾಲಿಟಿ ಶೋಗಳ ಮಟ್ಟಕ್ಕೆ ಇಳಿದಿವೆ. ಇಂತಹ ಗಂಭೀರ ಸನ್ನಿವೇಶಕ್ಕೆ ರಾಜ್ಯ ತುತ್ತಾಗಿರುವ ಕಳವಳಕಾರಿ ವಿದ್ಯಮಾನವನ್ನು ಚರ್ಚಿಸಿದ ಸಂಯುಕ್ತ ಹೋರಾಟ–ಕರ್ನಾಟಕವು ಜನ ಪರ್ಯಾಯ ಅಧಿವೇಶನಗಳನ್ನು ಸಂಘಟಿಸುವ ಮೂಲಕ ಕರ್ನಾಟಕದ ಜನ ಚಳುವಳಿಗೆ ಅರ್ಥಪೂರ್ಣ ಕೊಡುಗೆ ನೀಡಿ ರಾಜ್ಯದ ಗಮನ ಸೆಳೆದಿದೆ.

ಬೆಳಗಾವಿ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿಯೂ ಸಹ ವಿಧಾನ ಸಭೆ ಕಲಾಪ ಪ್ರಾರಂಭಕ್ಕೆ ಒಂದು ದಿನ ಮೊದಲು ಹಿರಿಯ ಬಂಡಾಯ ಸಾಹಿತಿ ಶ್ರೀ ಅಲ್ಲಮ ಪ್ರಭು ಬೆಟ್ಟದೂರು ರವರನ್ನು ಸ್ಪೀಕರ್ ಆಗಿಸಿ ಇಡೀ ದಿನ ಕಲಾಪ ನಡೆಸಿ ಮಾದರಿ ಹಾಕಿ ಕೊಟ್ಟಿತ್ತು.

ಈಗ ಒಂದು ಹೆಜ್ಜೆ ಮುಂದೆ ಹೋಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಮಂಡಿಸಿರುವ ಜನದ್ರೋಹಿ ಬಜೆಟ್‌ಗಳನ್ನು ವಿರೋಧಿಸಿ ಜನ ಪರ್ಯಾಯ ಬಜೆಟ್ ಅಧಿವೇಶನವನ್ನು 2022 ಮಾರ್ಚ್ 21 ರಿಂದ 23 ರವರೆಗೆ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಸಂಘಟಿಸಿದೆ.

ಬೃಹತ್ ಬಹಿರಂಗ ಸಭೆ ಮೂಲಕ ಉದ್ಘಾಟನೆ

ಜನ ಪರ್ಯಾಯ ಬಜೆಟ್ ಅಧಿವೇಶನದ ಸಂಯುಕ್ತ ಹೋರಾಟ ಕರ್ನಾಟಕದ ಕರೆಗೆ ಓಗೊಟ್ಟು ಬಂದಿದ್ದ ಸಾವಿರಾರು ರೈತರ, ಕೃಷಿ ಕೂಲಿಕಾರರ, ಮಹಿಳೆಯರ, ದಲಿತರ, ಕಾರ್ಮಿಕರ, ವಿದ್ಯಾರ್ಥಿ–ಯುವಜನರ ಬೃಹತ್ ಬಹಿರಂಗ ಸಭೆ ಯ ಮೂಲಕ ಮಾರ್ಚ್ 21 ರಂದು ಫ್ರೀಡಂ ಪಾರ್ಕ್ ನಲ್ಲಿ ಜನ ಪರ್ಯಾಯ ಬಜೆಟ್ ಅಧಿವೇಶನ ಉದ್ಘಾಟನೆಗೊಂಡಿತು.

ಉದ್ಘಾಟನೆ ಭಾಷಣ ಮಾಡಿದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ರಾಷ್ಟ್ರೀಯ ನಾಯಕ ಶ್ರೀ ಯೋಗೇಂದ್ರ ಯಾದವ್ ರವರು ದೆಹಲಿ ಗಡಿಗಳಲ್ಲಿ ನಡೆದ ಐತಿಹಾಸಿಕ ರೈತ ಹೋರಾಟದ ಸಾಧನೆಗಳನ್ನು ಹಾಗೂ ಸವಾಲುಗಳನ್ನು ವಿವರಿಸಿದರು. 'ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ರದ್ದುಪಡಿಸಿರುವುದು ರೈತ ಹೋರಾಟದ ಸಾಧನೆಯಾಗಿದ್ದರೆ ಹಿಂಬಾಗಿಲಿನ ಮೂಲಕ ರಾಜ್ಯಗಳಲ್ಲಿ ಇದೇ ರೀತಿ ಕಾಯ್ದೆಗಳನ್ನು ಜಾರಿ ಮಾಡುತ್ತಿರುವುದು ಸವಾಲಾಗಿದೆ. ಒಂದೂವರೆ ವರ್ಷಗಳ ಕಾಲ ದೇಶದಾದ್ಯಂತ ಎಲ್ಲಾ ರೈತ ಸಂಘಟನೆಗಳು ಅಭೂತಪೂರ್ವ ಒಗ್ಗಟ್ಟಿನಿಂದ ಹೋರಾಟ ನಡೆಸಿರುವುದು ಸಾಧನೆಯಾಗಿದ್ದರೆ ಈ ಒಗ್ಗಟ್ಟನ್ನು ಕಾಪಾಡಿಕೊಳ್ಳುವುದು



ಸವಾಲಾಗಿದೆ. ಕನಿಷ್ಠ ಬೆಂಬಲ ಬೆಲೆ ಕಾನೂನು ರಚನೆ ಸಂಬಂಧ ಲಿಖಿತ ಭರವಸೆ ಪಡೆದಿರುವುದು ಸಾಧನೆಯಾಗಿದ್ದರೆ ಈ ಭರವಸೆಯನ್ನು ಈಡೇರಿಸಿಕೊಂಡು ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಪಡೆದುಕೊಳ್ಳುವುದು ಸವಾಲಾಗಿದೆ. ಅದೇ ರೀತಿ ಆಸ್ಟ್ರೇಲಿಯಾ ಮತ್ತು ಆಮೇರಿಕಾ ಸೇರಿದಂತೆ ಯೂರೋಪಿಯನ್ ಒಕ್ಕೂಟಗಳ ಜೊತೆ ಮುಕ್ತ ವ್ಯಾಪಾರ ಮಾಡಿಕೊಳ್ಳದಂತೆ ನರೇಂದ್ರ ಮೋದಿ ಸರ್ಕಾರವನ್ನು ತಡೆಯುವ ಸವಾಲು ಕೂಡ ರೈತ ಚಳವಳಿ ಮುಂದೆ ಇದೆ. ಈ ಮುಕ್ತ ವ್ಯಾಪಾರ ಒಪ್ಪಂದವು ದೇಶದಾದ್ಯಂತ ಹೈನುಗಾರಿಕೆ ಕ್ಷೇತ್ರವನ್ನು ಹಾಗೂ ಹೈನುಗಾರ ರೈತರನ್ನು ಸಂಪೂರ್ಣ ನಾಶ ಮಾಡಲಿದೆ' ಎಂದು ವಿವರಿಸಿದರು.

ಮುಂದುವರೆದು ಅವರು ದೇಶದ ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ, ಸಾಮಾಜಿಕ ನ್ಯಾಯ ಮುಂತಾದ ಸಂವಿಧಾನದ ಆಶಯಗಳಿಗೆ ಬಿಜೆಪಿ-ಆರ್.ಎಸ್.ಎಸ್. ನಿಂದ ಗಂಭೀರ ಅಪಾಯ ಉಂಟಾಗಿದ್ದು ದೇಶವನ್ನು ಈ ಅಪಾಯದಿಂದ ರಕ್ಷಿಸುವ ಹೊಣೆಗಾರಿಕೆ ರೈತ-ಕಾರ್ಮಿಕರ ಮೇಲಿದೆ. ರೈತ ಹೋರಾಟದಿಂದ ಗಳಿಸಿರುವ ರಾಜಕೀಯ ಎಚ್ಚರದಿಂದ ಬಿಜೆಪಿ-ಆರ್.ಎಸ್.ಎಸ್. ಅನ್ನು ಅಧಿಕಾರ ಸ್ಥಾನದಿಂದ ಪಲ್ಲಟಗೊಳಿಸುವ ಸವಾಲು ಕೂಡ ನಮ್ಮ ಮುಂದಿದೆ ಎಂದು ತಿಳಿಸಿದರು.

ನಂತರದ ಎರಡು ದಿನಗಳ ಕಾಲ ಜನ ಪರ್ಯಾಯ ಬಜೆಟ್ ಅಧಿವೇಶನವು ರೈತರ, ಕಾರ್ಮಿಕರ, ಮಹಿಳೆಯರ, ದಲಿತರ-ಆದಿವಾಸಿಗಳ, ವಿದ್ಯಾರ್ಥಿ ಯುವಜನರ ಬದುಕಿನ ವಿವಿಧ ಆಯಾಮಗಳನ್ನು ವಿವರವಾಗಿ ಚರ್ಚಿಸಿತು. ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ 2020 ಕುರಿತು ಪ್ರಖ್ಯಾತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ, ಹಂಪಿ ವಿ.ವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಟಿ.ಆರ್. ಚಂದ್ರಶೇಖರ್ ರವರು, ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ (ನಿಯಂತ್ರಣ & ಅಭಿವೃದ್ಧಿ) ತಿದ್ದುಪಡಿ ಕಾಯ್ದೆ 2020 ಕುರಿತು ಪ್ರಖ್ಯಾತ ಕೃಷಿ ಅರ್ಥಶಾಸ್ತ್ರಜ್ಞ, ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ ರವರು, ಜಾನುವಾರು ಸಂರಕ್ಷಣೆ ಮತ್ತು ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ 2020 ರ ಕುರಿತು ಸುಪ್ರಸಿದ್ಧ ಆಹಾರ ತಜ್ಞ, ಚಿಂತಕ ಡಾ. ಕೆ.ಸಿ.ರಘು ರವರು, ಕಾರ್ಮಿಕ ಸಂಹಿತೆ ಕುರಿತು ಬೆಂಗಳೂರು ಕಾನೂನು ಶಾಲೆ ಪ್ರೊಫೆಸರ್ ಬಾಬು ಮ್ಯಾಥ್ಯೂ, ಸಾಮಾಜಿಕ ಭದ್ರತೆ ಕುರಿತು ನಿವೃತ್ತ ಉಪ ಕಾರ್ಮಿಕ ಆಯುಕ್ತರಾದ ವಸಂತಕುಮಾರ್ ಹಿಟ್ಟಣಗಿ, ಜೀವನ ಯೋಗ್ಯ ಕನಿಷ್ಠ ವೇತನ ಕುರಿತು ಕಾರ್ಮಿಕ ಮುಖಂಡರಾದ ಮೈತ್ರಿ ಕೃಷ್ಣನ್, ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಯೋಜನೆಗಳ ಅನುದಾನ ಮತ್ತು ಜಾರಿ ಕುರಿತು ಹಂಪಿ ವಿ.ವಿ ನಿವೃತ್ತ ಪ್ರಾಧ್ಯಾಪಕ ಡಾ. ಚಂದ್ರ ಪೂಜಾರಿ, ಮಹಿಳಾ ಸಮೂಹದ ಸಂಕಷ್ಟಗಳ ಕುರಿತು ಮಹಿಳಾ ಮುಖಂಡರು, ಲೇಖಕರು ಆದ ಕೆ.ಎಸ್.ವಿಮಲಾ ರವರು ತಮ್ಮ ತಜ್ಞ ಅಭಿಪ್ರಾಯಗಳನ್ನು ಮಂಡಿಸಿದರು. ಪ್ರತಿಯೊಂದು ವಿಷಯ ಮಂಡನೆ ನಂತರ ಸಂಬಂಧಿಸಿದ ಪರಿಣಿತರು ಅರ್ಥಪೂರ್ಣ ಚರ್ಚೆಯಲ್ಲಿ ಪಾಲ್ಗೊಂಡು ತಜ್ಞರ ವಿಷಯಗಳನ್ನು ವಿಸ್ತರಿಸಿದರು.

ಸಮಾರೋಪ:

ಬೇಡಿಕೆಗಳ ಮಂಡನೆ-ಬಾರದ ಮುಖ್ಯಮಂತ್ರಿ-ಹೋರಾಟಕ್ಕೆ ಕರೆ

ಜನ ಪರ್ಯಾಯ ಬಜೆಟ್ ಅಧಿವೇಶನದ ಚರ್ಚೆಯಲ್ಲಿ ಮೂಡಿಬಂದ ವಿವಿಧ ಜನ ವಿಭಾಗಗಳ ಪ್ರಶ್ನೆಗಳನ್ನು ನಿರ್ಣಯಗಳಾಗಿ ಅಂಗೀಕರಿಸಿ ಸರ್ಕಾರಕ್ಕೆ ಸಲ್ಲಿಸಲು ಮುಖ್ಯಮಂತ್ರಿಗಳನ್ನು ಹಾಗೂ ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗುವಂತೆ ವಿರೋಧ ಪಕ್ಷಗಳನ್ನು ಸಮಾರೋಪ ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು.

ಇಲ್ಲಿ ಚರ್ಚೆಯಾಗಿರುವ ವಿಷಯಗಳಿಗೆ ಉತ್ತರಿಸುವ ಧೈರ್ಯವಿಲ್ಲದೇ ಮುಖ್ಯಮಂತ್ರಿಯಾಗಲೀ, ಸರ್ಕಾರದಿಂದ ಯಾರೂ ಬರಲಿಲ್ಲ. ಪ್ರತಿಪಕ್ಷದಿಂದ ಪ್ರತಿಪಕ್ಷ ನಾಯಕ ಶ್ರೀ ಸಿದ್ದರಾಮಯ್ಯ ರವರು ಬಂದು ನಿರ್ಣಯಗಳ ಪ್ರತಿ ಪಡೆದು ವಿಧಾನ ಸಭೆಯಲ್ಲಿ ಧ್ವನಿ ಎತ್ತುವುದಾಗಿಯೂ ಮತ್ತು ಈ ನಿರ್ಣಯದ ಈಡೇರಿಕೆಗಾಗಿ ನಡೆಯುವ ಹೋರಾಟದಲ್ಲಿ ಜೊತೆಯಾಗಿರುವುದಾಗಿಯೂ ಭರವಸೆ ನೀಡಿದರು.

ಈ ಜನ ಪರ್ಯಾಯ ಬಜೆಟ್ ಅಧಿವೇಶನದ ನೇತೃತ್ವವನ್ನು ಸಂಯುಕ್ತ ಹೋರಾಟ-ಕರ್ನಾಟಕದ ಸಂಯೋಜಕರುಗಳಾದ ಬಡಗಲಪುರ ನಾಗೇಂದ್ರ, ಜಿ.ಸಿ.ಬಯ್ಯಾರೆಡ್ಡಿ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡ್, ಕೆ.ವಿ.ಭಟ್, ದೇವಿ, ನೂರ್ ಶ್ರೀಧರ್, ಪಿ.ಆರ್.ಎಸ್.ಮಣಿ, ಹೆಚ್.ವಿ.ದಿವಾಕರ್, ವಾಸುದೇವರೆಡ್ಡಿ ಕೆ., ಜಯಣ್ಣ ಸೇರಿದಂತೆ ವಿವಿಧ ರೈತ, ಕಾರ್ಮಿಕ, ದಲಿತ, ಮಹಿಳಾ, ವಿದ್ಯಾರ್ಥಿ ಯುವಜನ ಸಂಘಟನೆಗಳ ರಾಜ್ಯ ಮುಖಂಡರುಗಳಾದ ಎಸ್.ವರಲಕ್ಷ್ಮಿ, ವಿ.ನಾಗರಾಜ್, ಲಕ್ಷ್ಮಿನಾರಾಯಣ ನಾಗವಾರ, ಮೋಹನ್ ರಾಜ್, ಗೋಪಾಲಕೃಷ್ಣ ಹರಳಹಳ್ಳಿ, ಸಿದ್ಧನಗೌಡ ಮೋದಗಿ, ಡಿ.ಹೆಚ್.ಪೂಜಾರ್, ಎಸ್.ಆರ್. ಹಿರೇಮಠ್, ಚಂದ್ರಪ್ಪ ಹೊಸ್ಕೇರಾ ಎಸ್.ಕೆ.ಎಂ. ನ ರಾಷ್ಟ್ರೀಯ ನಾಯಕಿ ಕವಿತಾ ಕುರುಗಂಟಿ ಮುಂತಾದವರು ವಹಿಸಿದ್ದರು.

"ಜನ ಪರ್ಯಾಯ ಬಜೆಟ್ ಅಧಿವೇಶನ"ದಲ್ಲಿ ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯಗಳು

ಮಾರ್ಚ್ 21 ರಿಂದ ಮಾರ್ಚ್ 23 ರವರೆಗೆ ನಡೆದ "ಜನ ಪರ್ಯಾಯ ಬಜೆಟ್ ಅಧಿವೇಶನ"ವು ರಾಜ್ಯದ ಎಲ್ಲಾ ಪ್ರಮುಖ ವಿಷಯಗಳನ್ನು ಅಮೂಲಾಗ್ರವಾಗಿ ಚರ್ಚಿಸಿ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿದ್ದು ಈ ನಿರ್ಣಯಗಳನ್ನು ಅನುಷ್ಠಾನಕ್ಕೆ ಬರಲು ಬಲಿಷ್ಠವಾದ ಜನ ಚಳುವಳಿಗೆ ಸಿದ್ಧರಾಗಲು ರಾಜ್ಯದ ರೈತರು, ಕಾರ್ಮಿಕರು, ದಲಿತರು, ಮಹಿಳೆಯರು, ವಿದ್ಯಾರ್ಥಿ-ಯುವಜನ ಸಮೂಹಕ್ಕೆ ಈ ಮೂಲಕ ಕರೆ ನೀಡಿದೆ. ಹಾಗೂ ಈ ಹಕ್ಕೋತ್ತಾಯಗಳನ್ನು ಆದಷ್ಟು ಬೇಗ ಈಡೇರಿಸಿ ತನ್ನ ಸಂವಿಧಾನಾತ್ಮಕ ಕರ್ತವ್ಯಗಳನ್ನು ಪಾಲಿಸಬೇಕೆಂದು ಸರ್ಕಾರಗಳನ್ನು ಮತ್ತು ಪ್ರತಿಪಕ್ಷಗಳು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಆಗ್ರಹಿಸಿದೆ.

- ❐ ದೆಹಲಿ ಗಡಿಗಳಲ್ಲಿ ನಡೆದ ಐತಿಹಾಸಿಕ ರೈತ ಹೋರಾಟಕ್ಕೆ ಮಣಿದು ಲಿಖಿತ ಭರವಸೆ ನೀಡಿದ್ದ ಕೇಂದ್ರ ಸರ್ಕಾರ ತನ್ನ ಭರವಸೆಯಂತೆ ನಡೆದುಕೊಳ್ಳದೇ ದೇಶದ ರೈತರಿಗೆ "ವಿಶ್ವಾಸದ್ರೋಹ" ಎಸಗಿರುವ ಹಿನ್ನೆಲೆಯಲ್ಲಿ ಏಪ್ರಿಲ್ 11 ರಿಂದ 17 ರ ವರೆಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕಾನೂನು ಖಾತರಿ ವಾರಾಚರಣೆ ಪ್ರತಿಭಟನಾ ಪ್ರಚಾರಾಂದೋಲನದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ದ ಕರೆಯನ್ನು ಸಂಪೂರ್ಣವಾಗಿ ಬೆಂಬಲಿಸಿದೆ. ಹಾಗೂ ರಾಜ್ಯದಲ್ಲಿ ಈ ಕರೆಯನ್ನು ಜಾರಿಗೊಳಿಸಲು ಅಭೂತಪೂರ್ವವಾಗಿ ಜಾರಿಗೊಳಿಸಲು "ಜನ ಪರ್‍ಯಾಯ ಬಜೆಟ್ ಅಧಿವೇಶ"ನ ಮನವಿ ಮಾಡಿದೆ.
- ❐ ಬೆಲೆ ಏರಿಕೆ, ನಿರುದ್ಯೋಗ, ಖಾಸಗೀಕರಣ ವಿರೋಧಿಸಿ ಹಾಗೂ ರೈತ ವಿರೋಧಿ, ಕಾರ್ಮಿಕ ವಿರೋಧಿ ಧೋರಣೆಗಳನ್ನು ಖಂಡಿಸಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚ್ ಜಂಟಿಯಾಗಿ ಕರೆ ನೀಡಿರುವ ಮಾರ್ಚ್ 28, 29 ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು "ಜನ ಪರ್‍ಯಾಯ ಬಜೆಟ್ ಅಧಿವೇಶನ" ಸಂಪೂರ್ಣವಾಗಿ ಬೆಂಬಲಿಸುತ್ತದೆ. ಕರ್ನಾಟಕದಲ್ಲೂ ಸಾರ್ವತ್ರಿಕ ಮುಷ್ಕರ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ಹರತಾಳವಾಗಿ ಯಶಸ್ವಿಗೊಳಿಸಲು ಕರೆ ನೀಡಿದೆ.
- ❐ ರೈತರ ಮಹಾನ್ ಹೋರಾಟಕ್ಕೆ ಮಣಿದು ಕ್ಷಮೆಯಾಚಿಸಿ ರದ್ದುಗೊಳಿಸಿದ ಕೇಂದ್ರ ಸರ್ಕಾರದ ಕಾನೂನಿನ ತದ್ರೂಪವಾಗಿರುವ ರಾಜ್ಯ ಕೃಷಿ ಕಾಯ್ದೆಗಳಾದ ಕರ್ನಾಟಕ ರಾಜ್ಯ ಭೂ ಸುಧಾರಣಾ ಕಾನೂನು-2020, ಕರ್ನಾಟಕ ಎಪಿಎಂಸಿ ಕಾನೂನು-2020, ಹೈನುಗಾರಿಕೆ ಹಾಗೂ ಕೃಷಿಗೆ ಮಾರಕವಾಗಿರುವ ಕರ್ನಾಟಕ ಜಾನುವಾರು ಹತ್ಯೆ ನಿಷೇದ ಕಾಯ್ದೆ-2020 ಅನ್ನು ಈ ಕೂಡಲೇ ರದ್ದು ಪಡಿಸುವುದು ಸೇರಿದಂತೆ ಈ ಕೆಳಗೆ ಪಟ್ಟಿ ಮಾಡಿರುವ ಹಕ್ಕೋತ್ತಾಯಗಳನ್ನು ಏಪ್ರಿಲ್ 23 ರ ಒಳಗೆ ಈಡೇರಿಸಲು 'ಜನ ಪರ್ಯಾಯ ಬಜೆಟ್ ಅಧಿವೇಶನ' ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

"ಜನ ಪರ್‍ಯಾಯ ಬಜೆಟ್ ಅಧಿವೇಶನ"ದ ನಿರ್ಣಯಗಳು

1. ರೈತ ವಿರೋಧಿ ರಾಜ್ಯ ಸರ್ಕಾರದ ಭೂ ಸುಧಾರಣೆ ಕಾಯ್ದೆ ತಿದ್ದುಪಡಿಗಳು ರದ್ದಾಗಬೇಕು. ದಲಿತರು, ರೈತರಿಗೆ ಭೂಮಿ, ನಿವೇಶನ ಹಂಚಿಕೆಯಾಗಬೇಕು.
2. ರಾಜ್ಯದ ಜಾನುವಾರು ಹತ್ಯೆ ನಿಷೇದ ಕಾಯ್ದೆ ತಿದ್ದುಪಡಿಗಳು ರದ್ದಾಗಬೇಕು ಹಾಗೂ ಕೋಳಿ, ಕುರಿ ಸಾಕಾಣಿಕೆ, ಹೈನುಗಾರಿಕೆಯ ರೈತರ ಬೇಡಿಕೆಗಳನ್ನು ಈಡೇರಿಸಬೇಕು.






3. ರೈತರ ಆತ್ಮಹತ್ಯೆಗಳನ್ನು ನಿಲ್ಲಿಸಲು, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿ ಮಾಡುವ "ಕಾನೂನು"ನನ್ನು ಜಾರಿ ಮಾಡಬೇಕು:
4. ವಿದ್ಯುತ್ ಮಸೂದೆ-2022 ವಾಪಸ್ಸು ಪಡೆಯಬೇಕು; ವಿದ್ಯುತ್ ಖಾಸಗೀಕರಣ ನಿಲ್ಲಬೇಕು.
5. ಅಗತ್ಯಕ್ಕೆ ತಕ್ಕಂತೆ ರೈತರು, ಕೃಷಿ ಕೂಲಿಕಾರರಿಗೆ ಬ್ಯಾಂಕ್ ಸಾಲ ನೀಡಿಕೆ, ವಿಶೇಷ ಸಂದರ್ಭಗಳಲ್ಲಿ ಸಾಲ ಮನ್ನಾ ಮಾಡುವಂತಹ "ಋಣ ಮುಕ್ತ ಕಾಯ್ದೆ" ಯನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕು:
6. ಆಹಾರ ಧಾನ್ಯ ಬೆಳೆಗಳು ಎಕರೆಗೆ ಕನಿಷ್ಠ 25,000 ರೂ, ತರಕಾರಿ, ತೋಟಗಾರಿಕೆ ಬೆಳೆಗಳ ಎಕರೆಗೆ ಕನಿಷ್ಠ ಒಂದು ಲಕ್ಷ ರೂ. ಬೆಳೆ ನಷ್ಟ ಪರಿಹಾರ ನೀಡಲು ಆಗ್ರಹ, ಓಬಿರಾಯನ ಕಾಲದ "ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್.ಡಿ.ಆರ್.ಎಫ್) ಯ ಅವೈಜ್ಞಾನಿಕ ಮಾನದಂಡಗಳನ್ನು ಪರಿಷ್ಕರಿಸಲು ಒತ್ತಾಯ:
7. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ:
8. ರಾಜ್ಯದಲ್ಲಿ ನೀರಾವರಿ ಯೋಜನೆಗಳ ಜಾರಿಗೆ ಕೂಡಲೇ ಆದ್ಯತೆ ಸಿಗಬೇಕು.
9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗೆ ಆದ್ಯತೆ ಸಿಗಬೇಕು.
10. ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳು ರದ್ದಾಗಬೇಕು, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ನಿಲ್ಲಬೇಕು, ಕನಿಷ್ಠ ವೇತನ ಜಾರಿಯಾಗಬೇಕು:
11. ದಲಿತ-ಹಿಂದುಳಿದ, ಗ್ರಾಮೀಣ ಪ್ರದೇಶದ ಹಾಗೂ ಬಡ ವರ್ಗಗಳ ವಿದ್ಯಾರ್ಥಿಗಳಿಗೆ ಮಾರಕವಾಗಿರುವ ಹೊಸ ಶಿಕ್ಷಣ ನೀತಿ (ಎನ್‌ಇಪಿ) ವಾಪಸ್ಸು ಪಡೆಯಬೇಕು, ಸರ್ಕಾರಿ, ಅರೇ ಸರ್ಕಾರಿ ಇಲಾಖೆ/ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ನಾನಾ ನೆಪಗಳನ್ನೊಡ್ಡಿ ದಲಿತ-ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನಗಳಿಗೆ ಮತ್ತು ಹಾಸ್ಟೆಲ್ ಸೌಲಭ್ಯಗಳಿಗೆ ಪದೆ ಪದೆ ಅಡಚಣೆ ಒಡ್ಡುವುದನ್ನು ನಿಲ್ಲಿಸಬೇಕು. ಪ್ರಗತಿಪರ ವೈಜ್ಞಾನಿಕ ಶಿಕ್ಷಣ ಕ್ರಮಕ್ಕೆ ಒತ್ತು ನೀಡಬೇಕು. ಉದ್ಯೋಗ ಸೃಷ್ಠಿಗಾಗಿ ಸಮಗ್ರ ಯೋಜನೆಯೊಂದನ್ನು ರೂಪಿಸಬೇಕು.
12. ಅಡುಗೆ ಎಣ್ಣೆ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಬೇಕು, ರೇಷನ್ ಪದ್ಧತಿಯನ್ನು ಬಲಪಡಿಸಬೇಕು, ಮತ್ತಷ್ಟು ಗ್ರಾಹಕ ಸ್ನೇಹಿಯಾಗಿ ಅಗತ್ಯ ವಸ್ತುಗಳ ಕಾಯ್ದೆಯನ್ನು ಮತ್ತೇ ಜಾರಿಮಾಡಬೇಕು.

ಅಲ್ಲದೇ ಒಟ್ಟು 21 ಪ್ರಮುಖ ಬೇಡಿಕೆಗಳನ್ನಾಗಿ ಮಂಡಿಸಲಾಗಿದೆ.

-ಸಂಕಲ್ಪ ನಿರ್ಣಯ-

ಕರ್ನಾಟಕದ ಸಮಸ್ತ ರೈತಾಪಿ ದುಡಿವ ಜನರ ಈ ಮೇಲ್ಕಂಡ ಹಕ್ಕೊತ್ತಾಯಗಳನ್ನು ರಾಜ್ಯ-ಕೇಂದ್ರ ಸರ್ಕಾರಗಳು ಈಗಲೂ ಕಡೆಗಣಿಸಿದ್ದೇ ಆದಲ್ಲಿ, ದೆಹಲಿ ಹೋರಾಟದಿಂದ ಸ್ಫೂರ್ತಿ, ಮಾರ್ಗದರ್ಶನ ಪಡೆದಿರುವ ಕರ್ನಾಟಕದ ರೈತ-ದಲಿತ-ಕಾರ್ಮಿಕ-ಮಹಿಳಾ-ವಿದ್ಯಾರ್ಥಿ-ಯುವಜನರ ಸಂಘಟನೆಗಳೆಲ್ಲವೂ ಒಗ್ಗೂಡಿ, ಈ ಎಲ್ಲ ಸಮಸ್ಯೆಗಳೂ ಪರಿಹಾರವಾಗಿ ನಮ್ಮ ಹಕ್ಕೊತ್ತಾಯಗಳು ಈಡೇರುವವರೆಗೂ ದೆಹಲಿಯಂತೆಯೇ ರಾಜ್ಯದಲ್ಲೂ ಅನಿರ್ದಿಷ್ಟಾವಧಿ ಹೋರಾಟವನ್ನು ಆರಂಭಿಸುವುದಾಗಿ ನಾವು ಸಂಕಲ್ಪ ತೊಡುತ್ತಿದ್ದೇವೆ.



ಕ್ರಿಪ್ಟೊ ಕರೆನ್ಸಿ ಕಾನೂನು ಬದ್ಧವೋ ಕಾನೂನು ಬಾಹಿರವೋ?

ಈ ವರ್ಷದ ಬಜೆಟ್ ಭಾಷಣದ ಸಮಯದಲ್ಲಿ, ಕೇಂದ್ರ ಹಣಕಾಸು ಸಚಿವರು ಕ್ರಿಪ್ಟೋ ಕರೆನ್ಸಿಗೆ ಸಂಬಂಧಿಸಿದಂತೆ ಎರಡು ಪ್ರಸ್ತಾಪಗಳನ್ನು ಮಾಡಿದ್ದಾರೆ: ಇದರಿಂದ, ಕ್ರಿಪ್ಟೋ ಕರೆನ್ಸಿಯು ಕಾನೂನು ಬದ್ಧವೇ ಅಥವಾ ಕಾನೂನು ಬಾಹಿರವೇ ಎನ್ನುವ ವಿಷಯವು ಇನ್ನಷ್ಟು ಗೊಂದಲಕ್ಕೆ ಈಡಾಗಿದೆ. ಕ್ರಿಪ್ಟೋ ಕರೆನ್ಸಿ ವಿನಿಮಯ ಮತ್ತು ಭಾರತದಲ್ಲಿ ಹೂಡಿಕೆದಾರರ ಸಂಖ್ಯೆಯ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲದಿದ್ದಾಗ, ಅಂತಹ ವ್ಯವಹಾರಗಳ ಲಾಭಗಳ ಮೇಲೆ 30% ತೆರಿಗೆ ವಿಧಿಸುವ ಪ್ರಸ್ತಾಪವು ಕೇವಲ ಕಾಗದದ ಮೇಲೆ ಉಳಿದಂತಾಗುವುದಿಲ್ಲವೇ? ಕಳೆದ ಚಳಿಗಾಲದ ಅಧಿವೇಶನದವರೆಗೂ ನಿಷೇಧಿಸಲು ಉದ್ದೇಶಿಸಿದ್ದ ವರ್ಚುವಲ್ ಕರೆನ್ಸಿಯನ್ನು ಈ ತೆರಿಗೆ ಪ್ರಸ್ತಾಪದಿಂದ ಕಾನೂನುಬದ್ಧ ಗೊಳಿಸಿದಂತಾಗುವುದಿಲ್ಲವೇ ಎಂಬ ಗಂಭೀರ ಪ್ರಶ್ನೆಗಳು ಎದ್ದಿವೆ. ಆದರೆ ಚುನಾವಣಾ ಬಾಂಡ್‌ನಂತಹ ಅತ್ಯಂತ ಅಪಾರದರ್ಶಕ ವ್ಯವಹಾರದ ಫಲಾನುಭವಿಯಾದ ಪಕ್ಷದ ಸರಕಾರದಿಂದ ಇಂತಹ ಗಂಭೀರ ಪ್ರಶ್ನೆಗಳಿಗೆ ಉತ್ತರ ಸಿಗಬಲ್ಲುದೇ?

ಮೂಲ: **ಸಿ.ಪಿ.ಕೃಷ್ಣನ್** ಭಾವಾನುವಾದ: **ಕೋಟ ನಾಗರಾಜ** -

ಇತ್ತೀಚಿನ ವರ್ಷಗಳಲ್ಲಿ ಕ್ರಿಪ್ಟೋ ಕರೆನ್ಸಿಯ ಬಗ್ಗೆ ಬಹಳಷ್ಟು ಚರ್ಚೆಗಳು ನಡೆದಿವೆ. 2022ರ ಕೇಂದ್ರ ಬಜೆಟ್ ಮಂಡನೆಯಾದ ನಂತರ ಕ್ರಿಪ್ಟೋ ಕರೆನ್ಸಿಯು ಕಾನೂನುಬದ್ಧವೋ, ಅಥವಾ ಕಾನೂನು ಬಾಹಿರವೋ ಎನ್ನುವ ಚರ್ಚೆ ಮುನ್ನೆಲೆಗೆ ಬಂದಿದೆ. ಕ್ರಿಪ್ಟೋ ಕರೆನ್ಸಿ ಎಂದರೇನು? ಪ್ರಪಂಚದಲ್ಲಿ ಪ್ರತೀ ದೇಶವೂ ತನ್ನದೇ ಆದ ಕರೆನ್ಸಿಯನ್ನು ಹೊಂದಿರುತ್ತದೆ. ಉದಾ: ಭಾರತದಲ್ಲಿ ರೂಪಾಯಿ. ಅಮೇರಿಕಾದಲ್ಲಿ ಡಾಲರ್. ನಮ್ಮ ದೇಶದ ಕರೆನ್ಸಿ ಆದ ರೂಪಾಯಿಯ ಬಿಡುಗಡೆ, ಚಲಾವಣೆ, ನಿಯಂತ್ರಣ, ಲೆಕ್ಕಾಚಾರ ಇತ್ಯಾದಿಗಳು ರಿಸರ್ವ್ ಬ್ಯಾಂಕ್‌ನ ಜವಾಬ್ದಾರಿ. ಇತರ ದೇಶಗಳಲ್ಲಿ ಆಯಾಯ ದೇಶದ ಕೇಂದ್ರೀಯ ಬ್ಯಾಂಕ್‌ಗಳು ತಮ್ಮ ಕರೆನ್ಸಿಯ ನಿರ್ವಹಣೆ ಮಾಡುತ್ತವೆ.

ಕ್ರಿಪ್ಟೋ ಕರೆನ್ಸಿ ಹಾಗಲ್ಲ. ಇದು ಯಾವ ದೇಶವಾಗಲಿ, ಬ್ಯಾಂಕ್ ಆಗಲಿ, ಇನ್ಯಾವುದೇ ಹಣಕಾಸು ಸಂಸ್ಥೆ ಬಿಡುಗಡೆ ಮಾಡಿದ ಕರೆನ್ಸಿಯೇ ಅಲ್ಲ. ಈ ಕರೆನ್ಸಿಯು ಯಾವ ನಿಯಂತ್ರಣ/ನಿಬಂಧನೆಗಳಿಗೂ ಒಳಪಟ್ಟಿಲ್ಲ. ಇದರ ನಿರ್ವಹಣೆಗೆ ಯಾವುದೇ ಕೇಂದ್ರೀಕೃತ ವ್ಯವಸ್ಥೆ ಇಲ್ಲ. ಇದರ ವ್ಯವಹಾರಗಳು ಯಾವ ಲೆಕ್ಕಪರಿಶೋಧನೆಗೂ ಒಳಪಡುವುದಿಲ್ಲ. ಇದು ಅಂತರ್ಜಾಲದ (internet) ಮೂಲಕ ಚಲಾವಣೆಯಲ್ಲಿರುವ ಡಿಜಿಟಲ್ ಕರೆನ್ಸಿ. ಇದಕ್ಕೆ ಯಾವುದೇ ಭೌತಿಕ ರೂಪವಿಲ್ಲ. ಸರಕು ಮತ್ತು ಸೇವೆಗಳನ್ನು ಈ ಕರೆನ್ಸಿ ಬಳಸಿ ಖರೀದಿಸಲು ಸಾಧ್ಯವಿಲ್ಲ. ಇದಕ್ಕೆ ಯಾವ ಗ್ಯಾರಂಟಿಯನ್ನು ಯಾರೂ ನೀಡುವುದಿಲ್ಲ. ಎಲ್ಲ ತರದ ಕ್ರಿಪ್ಟೋ ಕರೆನ್ಸಿಗಳೂ ಸೀಮಿತ ಸಂಖ್ಯೆಯಲ್ಲಿ ಮಾತ್ರ ಬಿಡುಗಡೆ ಮಾಡಲ್ಪಡುತ್ತವೆ. ಇದನ್ನು ಬಿಡುಗಡೆ ಮಾಡುವವರು ಯಾರು ಎನ್ನುವುದೂ ಸಹ ಯಾರಿಗೂ ತಿಳಿದಿರುವುದಿಲ್ಲ. ಆದ್ದರಿಂದಲೇ ಇದಕ್ಕೆ ಕ್ರಿಪ್ಟೊ ಅಂದರೆ ಗೂಢ ಎಂಬ ವಿಶೇಷಣ ಸೇರಿಸಿರುವುದು. ಇದನ್ನು ಯಾರು ಬೇಕಾದರೂ ಖರೀದಿಸಬಹುದು. ಇದರಲ್ಲಿ ಯಾರು ಬೇಕಾದರೂ ಹೂಡಿಕೆ ಮಾಡಬಹುದು. ಮಾರಬಹುದು. ಇದರ ಮುಖಾಂತರ ಹಣವನ್ನೂ ವರ್ಗಾಯಿಸಬಹುದು.

ವಹಿವಾಟು ನಡೆಯುವುದು ಹೇಗೆ?

ಇದರ ವಹಿವಾಟು ಬ್ಲಾಕ್ ಚೈನ್ ಅಥವ ಖಂಡ ಸರಪಣಿ ತಂತ್ರಜ್ಞಾನ (Block Chain Technology) ಎಂಬುದರ ಮೂಲಕ ನಡೆಯುತ್ತದೆ. ಈ ತಂತ್ರಜ್ಞಾನವನ್ನು 2009 ರಲ್ಲಿ ಸತೋಷಿ ನಕಮೊಟೊ ಎಂಬ ಗುಪ್ತ ಹೆಸರಿನವರು ಕಂಡುಹಿಡಿದರು. ಕ್ರಿಪ್ಟೋ ಕರೆನ್ಸಿಗಳ ಪೈಕಿ ಬಿಟ್‌ಕಾಯಿನ್ ತುಂಬಾ ಜನಪ್ರಿಯ. ಬಿಟ್‌ಕಾಯಿನ್ ರೀತಿಯ ಅನೇಕ ಡಿಜಿಟಲ್ ಕರೆನ್ಸಿಗಳು ಇಂದು ಮಾರುಕಟ್ಟೆಯಲ್ಲಿವೆ. ಕ್ರಿಪ್ಟೋ ಕರೆನ್ಸಿಗಳ ವ್ಯವಹಾರಗಳ ಮಾಹಿತಿಗಳನ್ನು ಈ ತಂತ್ರಜ್ಞಾನದ ಮೂಲಕ ಸಂಗ್ರಹಿಸಿ ಇಡಲಾಗುತ್ತದೆ. ಇದೊಂದು ವಿಕೇಂದ್ರೀಕೃತ ದತ್ತಾಂಶ(ಡೇಟಾ) ಸಂಗ್ರಹ ವ್ಯವಸ್ಥೆ. ಪ್ರತಿ ವ್ಯವಹಾರವೂ ದತ್ತಾಂಶ ಸರಪಳಿಯಲ್ಲಿರುವ ಬ್ಲಾಕ್ ಅಂದರೆ ಖಂಡದಲ್ಲಿ ಸಂಗ್ರಹ ಆಗಿರುತ್ತದೆ. ಒಂದು ಖಂಡ ಭರ್ತಿಯಾದನಂತರ ಇನ್ನೊಂದು ಖಂಡದಲ್ಲಿ ವ್ಯವಹಾರ ದಾಖಲಿಸುವ ಕ್ರಮ ಮಂದುವರಿಯುತ್ತದೆ. ಎಲ್ಲ ಬ್ಲಾಕ್‌ಗಳೂ ಒಂದಕ್ಕೊಂದು ಬೆಸೆದುಕೊಂಡಿರುತ್ತವೆ. ವ್ಯವಹಾರದ ಸರಪಳಿಯಲ್ಲಿರುವ ಎಲ್ಲರ ಕಂಪ್ಯೂಟರ್‌ಗಳಲ್ಲೂ ಈ ಖಂಡ ಸರಪಳಿಯನ್ನು ನೋಡಬಹುದಾಗಿದೆ. ಅಂದರೆ, ಇದು ಕಂಪ್ಯೂಟರ್ ಜಾಲದ ಮೂಲಕ ಬೆಸೆಯಲ್ಪಟ್ಟಿದೆ.

ಉದಾಹರಣೆಗೆ 'ಎ' ವ್ಯಕ್ತಿಯು 'ಬಿ' ವ್ಯಕ್ತಿಗೆ ಕೆಲವು ಬಿಟ್‌ಕಾಯಿನ್ ಮಾರುತ್ತಾನೆ ಎಂದಿಟ್ಟುಕೊಳ್ಳಿ. ಈ ವ್ಯವಹಾರವು ಸರಪಳಿಯಲ್ಲಿರುವ ಬ್ಲಾಕ್‌ನಲ್ಲಿ ದಾಖಲಾಗುತ್ತದೆ. 'ಎ' ವ್ಯಕ್ತಿಯ ಬಳಿ 'ಬಿ' ವ್ಯಕ್ತಿಗೆ ಮಾರುವಷ್ಟು ಬಿಟ್‌ಕಾಯಿನ್ ಇದೆಯೇ?, ವ್ಯವಹಾರ ಸರಿಯಾಗಿ ದಾಖಲಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡುವವರನ್ನು 'ಮೈನರ್ಸ್' ಎಂದು ಕರೆಯಲಾಗುತ್ತದೆ. ಈ ಚಟುವಟಿಕೆಯು 'ಮೈನಿಂಗ್' ಎಂದು ಕರೆಯಲ್ಪಡುತ್ತದೆ. ಎಲ್ಲವೂ ಕೋಡ್ ಮೂಲಕವೇ ನಡೆಯುವುದರಿಂದ, ಯಾರ ಬಳಿ ಎಷ್ಟು ಬಿಟ್‌ಕಾಯಿನ್ ಗಳಿವೆ, ಅದರ ಮೌಲ್ಯ ಎಷ್ಟು ಎನ್ನುವುದು ಗೌಪ್ಯವಾಗಿರುತ್ತದೆ. ಮೈನರ್ಸ್‌ಗಳಿಗೆ ಬಿಟ್‌ಕಾಯಿನ್‌ನಲ್ಲಿ ಒಂದು ಅಂಶವು ದಲ್ಲಾಳಿ ರೂಪದಲ್ಲಿ ಸೇವಾ ಶುಲ್ಕವಾಗಿ ಸಿಗುತ್ತದೆ. ನಮ್ಮ ದೇಶದಲ್ಲಿ ಈ ಕರೆನ್ಸಿಯಲ್ಲಿ ಹೂಡಿಕೆ ಮಾಡಿದವರು ಸುಮಾರು 1.5 ಕೋಟಿಯಿಂದ 2 ಕೋಟಿಯಷ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಮಾರುಕಟ್ಟೆಯ ಅಂದಾಜಿನ ಪ್ರಕಾರ ಸುಮಾರು ರೂ. 40,000 ಕೋಟಿಯಷ್ಟು ಹಣ ಇದರಲ್ಲಿ ಹೂಡಿಕೆಯಾಗಿರುತ್ತದೆ.

ಇಂದು ಕ್ರಿಪ್ಟೋ ಕರೆನ್ಸಿ ವಹಿವಾಟು ನಡೆಸುವ ಹಲವಾರು ಖಾಸಗಿ ವಿನಿಮಯ ಕೇಂದ್ರಗಳಿವೆ. ಇವುಗಳ ಮೂಲಕ ಇದರ ಮಾರಾಟ, ಖರೀದಿ, ಸಟ್ಟಾ-ವ್ಯಾಪಾರ ನಡೆಯುತ್ತದೆ. ಷೇರುಗಳ ಮಾರಾಟ, ವಿನಿಮಯ ಸ್ಟಾಕ್ ಎಕ್ಸ್‌ಚೇಂಜ್‌ಗಳ ಮೂಲಕ ನಡೆಯುವ ರೀತಿಯಲ್ಲಿ ಇಲ್ಲಿಯೂ ಸಹ ದಲ್ಲಾಳಿಗಳು ಇರುತ್ತಾರೆ. ಆದರೆ, ಯಾವುದೇ ಕಾನೂನಿಗೆ/ನಿಯಮ ನಿಯಂತ್ರಣಗಳಿಗೆ ಒಳಪಡುವುದಿಲ್ಲ. ಎಲ್ಲವೂ ಅಂತರ್ಜಾಲದ (internet) ಮೂಲಕ ನಡೆಯುತ್ತದೆ. ಯಾರು ಯಾರಿಂದ ಎಷ್ಟು ಖರೀದಿಸಿದ್ದಾರೆ, ಯಾರ ಬಳಿ ಎಷ್ಟು ಕರೆನ್ಸಿ ಇದೆ, ಅದರ ಮೌಲ್ಯ ಎಷ್ಟು ಎಂಬುದನ್ನು ಮತ್ತು ಈ ಕರೆನ್ಸಿಯ ರೂಪದಲ್ಲಿ ಯಾರಿಂದ ಯಾರಿಗೆ ಎಷ್ಟು ಹಣ ವರ್ಗಾವಣೆ ಆಗಿದೆ ಎಂಬುದನ್ನು ತಿಳಿದುಕೊಳ್ಳುವುದು ಸುಲಭವಲ್ಲ. ಈ ವಿನಿಮಯ ಕೇಂದ್ರಗಳು ಬೇರೆ ಬೇರೆ ಕರೆನ್ಸಿಗಳನ್ನು (ರೂಪಾಯಿ, ಡಾಲರ್, ಇತ್ಯಾದಿ) ಕ್ರಿಪ್ಟೋ ಕರೆನ್ಸಿ (ಬಿಟ್ಕಾಯಿನ್) ಆಗಿಯೂ, ಬಿಟ್ಕಾಯಿನ್ನನ್ನು ಹಣವನ್ನಾಗಿಯೂ (ರೂ, ಡಾಲರ್, ಇತ್ಯಾದಿ.) ಪರಿವರ್ತಿಸುವ ಕೇಂದ್ರವಾಗಿವೆ.

ಎಷ್ಟು ಸುರಕ್ಷಿತ?

ಕ್ರಿಪ್ಟೋ ಕರೆನ್ಸಿಯ ಸಮರ್ಥಕರ ಪ್ರಕಾರ, ಈ ವಿಧಾನದ ವಹಿವಾಟು, ಹೂಡಿಕೆಗಳು ಬ್ಲಾಕ್ ಚೈನ್ ತಂತ್ರಜ್ಞಾನ ಬಳಕೆಯಿಂದಾಗಿ ಅತ್ಯಂತ ಸುರಕ್ಷಿತ ಹಾಗೂ ಸುಲಭವಾಗಿವೆ. ಬ್ಲಾಕ್ ಚೈನ್ ತಂತ್ರಜ್ಞಾನವು ಒಂದು ವಿಕೇಂದ್ರೀಕ್ರತ ದತ್ತಾಂಶ ಸಂಗ್ರಹಣಾ ವ್ಯವಸ್ಥೆ. ಆದ್ದರಿಂದ, ಯಾರೊಬ್ಬರೂ ಸರಪಳಿಯಲ್ಲಿರುವ ಬಹು ಜನರ ಅನುಮತಿ ಇಲ್ಲದೆ ಯಾವುದೇ ಖಂಡದ ದತ್ತಾಂಶವನ್ನು ಬದಲಾಯಿಸುವಂತಿಲ್ಲ.ಈ ತಂತ್ರಜ್ಞಾನವನ್ನು ಶಿಕ್ಷಣ, ವೈದ್ಯಕೀಯ ಹಾಗೂ ಇತರ ಕ್ಷೇತ್ರಗಳಿಗೂ ಮುಂದಿನ ದಿನಗಳಲ್ಲಿ ಬಳಸಬಹುದಾಗಿದೆ ಎಂಬುದು ಇವರ ವಾದ. ಆದರೆ, ಪ್ರಪಂಚದ ಅನೇಕ ಹೆಸರಾಂತ ಅರ್ಥಶಾಸ್ತ್ರಜ್ಞರು ಈ ಕರೆನ್ಸಿಯ ಬಗ್ಗೆ ವಿರುದ್ಧ-ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ ಮತ್ತು ಇದರ ಭೀಕರ ಪರಿಣಾಮಗಳ ಬಗ್ಗೆ ಸರ್ಕಾರಗಳಿಗೆ ಎಚ್ಚರಿಕೆಯನ್ನೂ ನೀಡಿದ್ದಾರೆ. ಇದು ಹವಾಲಾ ವಹಿವಾಟು, ಕಪ್ಪು-ಹಣದ ಸಂಗ್ರಹಣೆಗೆ ಅನುಕೂಲ ಮಾಡಿಕೊಡುತ್ತದೆ ಮತ್ತುಅಕ್ರಮ ವಹಿವಾಟುಗಳು, ಮಾದಕವಸ್ತು ಜಾಲಕ್ಕೆ ಹಣಪೂರೈಕೆ, ಮಾನವ ಕಳ್ಳಸಾಗಣೆ, ಭಯೋತ್ಪಾದಕ ಚಟುವಟಿಕೆಗಳು, ಅಕ್ರಮ ಶಸ್ತ್ರಾಸ್ತ್ರ ಮಾರಾಟ ಇತ್ಯಾದಿಗಳನ್ನು ಸಕ್ರಿಯಗೊಳಿಸುತ್ತದೆ ಎಂಬುದಾಗಿ ತಮ್ಮ ಆತಂಕವನ್ನೂ ವ್ಯಕ್ತಪಡಿಸಿರುತ್ತಾರೆ..



ಕ್ರಿಪ್ಟೊ ಮೇಲೆ ತೆರಿಗೆ-ಆದರೆ ಕಾನೂನು ಬದ್ಧಗೊಳಿಸಿಲ್ಲ
ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಕ್ರಿಪ್ಟೋ ಕರೆನ್ಸಿಗೆ ಸಂಬಂಧಿಸಿದಂತೆ ವಂಚನೆ ಮತ್ತು ಹ್ಯಾಕಿಂಗ್ ನಿದರ್ಶನಗಳು ಸಹ ಸಾಮಾನ್ಯವಾಗಿವೆ. ಉದಾಹರಣೆಗೆ, ಅರ್ನ್ಸ್ಟ್&ಯಂಗ್ ಅಧ್ಯಯನವು ಕ್ರಿಪ್ಟೋ ಕರೆನ್ಸಿ ಕೊಡುಗೆಗಳ ಮೂಲಕ ಸಂಗ್ರಹಿಸಲಾದ ಒಟ್ಟು3.7 ಬಿಲಿಯನ್ ಡಾಲರ್ ಹಣದಲ್ಲಿ ಸುಮಾರು 400 ಮಿಲಿಯನ್ ಡಾಲರ್ ಅನ್ನು ಕದಿಯಲಾಗಿದೆ ಎಂಬುದನ್ನು ಪತ್ತೆ ಮಾಡಿದೆ. ಇತ್ತೀಚೆಗೆ ಕರ್ನಾಟಕದಲ್ಲಿ ಬಯಲಾಗಿರುವ ಬಿಟ್ಕಾಯಿನ್ ಹ್ಯಾಕಿಂಗ್ ಹಗರಣವು ಕ್ರಿಪ್ಟೋ ಕರೆನ್ಸಿಯ ಸುರಕ್ಷತೆಯ ಬಗ್ಗೆಇರುವ ಮಿಥ್ಯೆಯನ್ನು ಅನಾವರಣಗೊಳಿಸಿದೆ.

ಕ್ರಿಪ್ಟೋ ಕರೆನ್ಸಿಗಳ ವ್ಯವಹಾರಗಳ ಬಗ್ಗೆ ಆರ್‌ಬಿಐ ನಿಷೇಧ:

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಏಪ್ರಿಲ್ 6, 2018 ರಂದು, ವರ್ಚುವಲ್ ಕರೆನ್ಸಿ(ವಿಸಿ) ಎಂದು ಕರೆಯಲ್ಪಡುವ ಕ್ರಿಪ್ಟೋ ಕರೆನ್ಸಿಯಲ್ಲಿ ವ್ಯವಹರಿಸುವುದನ್ನು ನಿಷೇಧಿಸಿದೆ, " ರಿಸರ್ವ್ ಬ್ಯಾಂಕ್ ಡಿಸೆಂಬರ್ 24, 2013, ಫೆಬ್ರವರಿ 01, 2017 ಮತ್ತು ಡಿಸೆಂಬರ್ 05, 2017 ರಂದು ತನ್ನ ಸಾರ್ವಜನಿಕ ನೋಟಿಸ್‌ಗಳ ಮೂಲಕ ಈ ಬಗ್ಗೆ ಪದೇ ಪದೇ ಎಚ್ಚರಿಕೆ ನೀಡಿದೆ. ಬಿಟ್ಕಾಯಿನ್‌ಗಳು ಸೇರಿದಂತೆ ವರ್ಚುವಲ್ ಕರೆನ್ಸಿಗಳ (ವಿಸಿಗಳು) ಬಳಕೆದಾರರು, ಹೊಂದಿರುವವರು ಮತ್ತು ವ್ಯಾಪಾರಿಗಳಿಂದ ಅಂತಹ ವರ್ಚುವಲ್ ಕರೆನ್ಸಿಗಳ ವ್ಯವಹಾರಕ್ಕೆ ಸಂಬಂಧಿಸಿದ ವಿವಿಧ ಅಪಾಯಗಳ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ, ತಕ್ಷಣದಿಂದ ಜಾರಿಗೆ ಬರುವಂತೆ, ಆರ್‌ಬಿಐ ನಿಯಂತ್ರಿಸುವ ಘಟಕಗಳು ಅಥವಾ ಈ ಕರೆನ್ಸಿಯಲ್ಲಿ ವ್ಯವಹರಿಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಅನುಕೂಲಮಾಡಿಕೊಡುವ ಸೇವೆಗಳನ್ನು ಒದಗಿಸಬಾರದು ಎಂದು ನಿರ್ಧರಿಸಲಾಗಿದೆ. ಅಂತಹ ಸೇವೆಗಳಲ್ಲಿ ಖಾತೆಗಳನ್ನು ನಿರ್ವಹಿಸುವುದು, ನೋಂದಾಯಿಸುವುದು, ವ್ಯಾಪಾರ ಮಾಡುವುದು, ಇತ್ಯರ್ಥಪಡಿಸುವುದು, ತೆರವುಗೊಳಿಸುವುದು, ವರ್ಚುವಲ್ ಕರೆನ್ಸಿಗಳ ವಿರುದ್ಧ ಸಾಲಗಳನ್ನು ನೀಡುವುದು, ಅವುಗಳನ್ನು ಮೇಲಾಧಾರವಾಗಿ ಸ್ವೀಕರಿಸುವುದು, ಅವುಗಳೊಂದಿಗೆ ವ್ಯವಹರಿಸುವ ವಿನಿಮಯಗಳ ಖಾತೆಗಳನ್ನು ತೆರೆಯುವುದು ಮತ್ತು ವಿಸಿಗಳ ಖರೀದಿ/ಮಾರಾಟಕ್ಕೆ ಸಂಬಂಧಿಸಿದ ಖಾತೆಗಳಲ್ಲಿ ಹಣವನ್ನು ವರ್ಗಾಯಿಸುವುದು / ಸ್ವೀಕರಿಸುವುದು ಸೇರಿವೆ." ಎಂದು ಹೇಳುವ ಮೂಲಕ ಈ ಸುತ್ತೋಲೆಯು ಭಾರತದಲ್ಲಿ ಕ್ರಿಪ್ಟೋ ಕರೆನ್ಸಿಯ ಬಳಕೆಯನ್ನು ನಿಷೇಧಿಸಿತು.

2018 ರಲ್ಲಿ, ವರ್ಚುವಲ್ ಕರೆನ್ಸಿಗಳನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ಒಂದು ಕರಡು ಮಸೂದೆಯನ್ನು ರಚಿಸಿತ್ತು. 2019ರಲ್ಲಿ ವಿಸಿಗಳನ್ನು ನಿಷೇಧಿಸಲು ಭಾರತ ಸರ್ಕಾರವು ಮತ್ತೊಂದು ಮಸೂದೆಯನ್ನು ರಚಿಸಿತು. ಆದರೆ, ಇವು ಪಾರ್ಲಿಮೆಂಟಿನಲ್ಲಿ ಮಂಡನೆಯಾಗಿಲ್ಲ.

ಮಾರ್ಚ್ 4, 2020 ರಂದು, ಭಾರತದ ಸರ್ವೋಚ್ಚ ನ್ಯಾಯಾಲಯವು (ಸುಪ್ರೀಂ ಕೋರ್ಟ್) ಅನುಪಾತದ ಆಧಾರದ ಮೇಲೆ ಏಪ್ರಿಲ್ 6, 2018 ರಂದು ಆರ್‌ಬಿಐ ಸುತ್ತೋಲೆಯನ್ನು ರದ್ದುಗೊಳಿಸಿತು. ಆರ್‌ಬಿಐ ಮತ್ತು ಕೇಂದ್ರ ಸರ್ಕಾರದ ಅಸಂಗತ ನಿಲುವನ್ನು ಸುಪ್ರೀಂಕೋರ್ಟ್ ತನ್ನ ಆದೇಶದಲ್ಲಿ ತೀವ್ರವಾಗಿ ಟೀಕಿಸಿದೆ. "ಕಳೆದ ಐದು ವರ್ಷಗಳಲ್ಲಿ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಲ್ಲಿ ವಿಸಿ ವಿನಿಮಯ ಚಟುವಟಿಕೆಗಳು ವಾಸ್ತವವಾಗಿ ಪ್ರತಿಕೂಲ ಪರಿಣಾಮ ಬೀರಿವೆಯೇ ಎಂಬುದನ್ನು ಆರ್‌ಬಿಐ ಇಲ್ಲಿಯವರೆಗೂ ಪತ್ತೆ ಮಾಡಿಲ್ಲ..... ಇಲ್ಲಿಯವರೆಗೆ, ಆರ್‌ಬಿಐ ಯಾವುದೇ ಘಟಕಗಳು ಅಂದರೆ, ರಾಷ್ಟ್ರೀಕೃತ ಬ್ಯಾಂಕುಗಳು/ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು/ ಸಹಕಾರಿಬ್ಯಾಂಕುಗಳು/ ಎನ್‌ಬಿಎಫ್‌ಸಿಗಳು ವಿಸಿ ವಿನಿಮಯ ಕೇಂದ್ರಗಳು ತಮ್ಮೊಂದಿಗೆ ಹೊಂದಿದ್ದ ಇಂಟರ್ಫೇಸ್ ಕಾರಣದಿಂದಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ನಷ್ಟ ಅಥವಾ ಪ್ರತಿಕೂಲ ಪರಿಣಾಮವನ್ನುಅನುಭವಿಸಿವೆಯೇ ಎಂಬುದರ ಬಗ್ಗೆ ಇದುವರೆಗೂ ಸ್ಪಷ್ಟತೆ ಹೊಂದಿಲ್ಲ".

ನವೆಂಬರ್ 2021 ರಲ್ಲಿ, ಕೇಂದ್ರ ಸರ್ಕಾರವು ಮತ್ತೊಂದು ಮಸೂದೆಯನ್ನು ರಚಿಸಿತು- "ಕ್ರಿಪ್ಟೋ ಕರೆನ್ಸಿ ಮತ್ತು ಅಧಿಕೃತ ಡಿಜಿಟಲ್ ಕರೆನ್ಸಿ ನಿಯಂತ್ರಣ, ಮಸೂದೆ, 2021." ಆರ್‌ಬಿಐ ಬಿಡುಗಡೆ ಮಾಡಬೇಕಾದ ಅಧಿಕೃತ ಡಿಜಿಟಲ್ ಕರೆನ್ಸಿಯ ರಚನೆಗೆ ಅನುಕೂಲಕರ ಚೌಕಟ್ಟನ್ನು ರಚಿಸುವ ಉದ್ದೇಶವನ್ನು ಈ ಮಸೂದೆ ಹೊಂದಿದೆ. ಭಾರತದ ಎಲ್ಲಾ ಖಾಸಗಿ ಕ್ರಿಪ್ಟೋ ಕರೆನ್ಸಿಗಳನ್ನು

ಪುಟ 14 ಕ್ಕೆ

ಕೆಳ ಮಟ್ಟದ ಉತ್ಪಾದಕತೆ ಮತ್ತು ಕೆಳ ಮಟ್ಟದ ಕೂಲಿ ಇರುವ ಕೃಷಿಯೇತರ ಉತ್ಪಾದನಾ ವಿಭಾಗದಲ್ಲಿ ಸಂಬಳ ಪಡೆಯುವ ಅಥವ ಪಡೆಯದ ಅಥವ ಸ್ವ–ಉದ್ಯೋಗದ ಹೇಗೋ ಬದುಕುಳಿಯುವ ಮಟ್ಟದ ಉದ್ಯೋಗ ಪರಿಸ್ಥಿತಿ ಮುಂದುವರಿಯುತ್ತಿರುವುದು ಇತ್ತೀಚಿನ ಬಂಡವಾಳಶಾಹಿಯ ಸಾಮಾನ್ಯ ಲಕ್ಷಣವಾಗಿದೆ. ಏಕೆಂದರೆ ಅದೀಗ ವಿಪರೀತ ತಾರತಮ್ಯ ಇರುವ ಆದಾಯ ಹಂಚಿಕೆಯನ್ನೇ ಹೆಚ್ಚಾಗಿ ಅವಲಂಬಿಸಿದೆ. ಇದನ್ನು ಗುರುತಿಸಿರುವ ಐಎಲ್‌ಒ, ಅಂತರ್ರಾಷ್ಟ್ರೀಯವಾಗಿ, ಇದರಲ್ಲಿ ಕೆಡುಕೇನೂ ಇಲ್ಲ ಎಂದು ಕಾಣುವಂತೆ ಮಾಡಲು ಈ "ಔಪಚಾರಿಕ" ಮತ್ತು "ಅನೌಪಚಾರಿಕ" ದ್ವಂದ್ವವನ್ನು ಪ್ರೋತ್ಸಾಹಿಸಿದೆ, ಆದರೆ ಈ ಔಪಚಾರಿಕ ಎಂಬ ಕಲ್ಪನೆಯು ಉದ್ಯೋಗದ ಸಂಖ್ಯೆಗಷ್ಟೇ ಸೀಮಿತವಾಗಿಲ್ಲ; ಅದನ್ನೂ ಮೀರಿ ಅದು ವಿಸ್ತರಿಸಿದೆ. ವಾಸ್ತವವಾಗಿ ಪ್ರಸಕ್ತ ಬಂಡವಾಳಶಾಹೀ ಅಭಿವೃದ್ಧಿಯ ಘಟ್ಟವು ಸಾರಭೂತವಾಗಿ ಅನೌಪಚಾರಿಕತೆಯ ಮೇಲೆಯೇ ಅವಲಂಬಿತವಾಗಿರುತ್ತದೆ; ಆದರೆ ಔಪಚಾರಿಕ ಉದ್ಯೋಗದ ಕಲ್ಪನೆಯನ್ನು ಮತ್ತು ಸಂಬಂಧಿತ ಹಕ್ಕುಗಳನ್ನು ದುರ್ಬಲಗೊಳಿಸುವ ಮೂಲಕ ಅದನ್ನು ಮರೆಮಾಚುತ್ತದೆ.

–ಸಂಜಯ್ ರಾಯ್ ಅನುವಾದ: ಟಿ. ಸುರೇಂದ್ರ ರಾವ್

ಅನೌಪಚಾರಿಕ ವಲಯ ಕಿರಿದಾಗುತ್ತಿದೆ ಎಂಬುದು ಕ್ರೂರ ಕುಚೋದ್ಯ



ಭಾರತದಲ್ಲಿ ಅನೌಪಚಾರಿಕ ವಲಯ ಎಂಬುದು ಇಳಿದಿದೆ ಎಂಬ ವಿಲಕ್ಷಣ ವಾದವನ್ನು ಇತ್ತೀಚೆಗೆ ನೀತಿನಿರೂಪಕರ ವಲಯದ ಕೆಲವು ಗುಂಪುಗಳು ಮಾಡುತ್ತಿವೆ; ಉತ್ಪಾದನೆ ಹಾಗೂ ಉದ್ಯೋಗದಲ್ಲಿ ಅನೌಪಚಾರಿಕ ವಲಯದ ಪಾಲು ಕಡಿಮೆಯಾಗುತ್ತಿರುವುದು ಸಂಭ್ರಮಿಸಬೇಕಾದ ಸಾಧನೆ ಎಂಬುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳುತ್ತಿವೆ. ಕೋವಿಡ್–19ರ ಅವಧಿಯಲ್ಲಿ ಆರ್ಥಿಕತೆಯು ಸೊರಗಿತು, ಆ ಅವಧಿಯಲ್ಲಿ ಅಪಾರ ಪ್ರಮಾಣದ ಅನೌಪಚಾರಿಕ ವಲಯದ ಕೆಲಸಗಳು ಹೊರಟುಹೋದವು, ತದನಂತರ ಔಪಚಾರಿಕ ವಲಯ ತ್ವರಿತ ಗತಿಯಲ್ಲಿ ಪುನಶ್ಚೇತನಗೊಂಡಿದೆಯಾದರೂ, ಅನೌಪಚಾರಿಕ ವಲಯದ ಚೇತರಿಕೆಯ ಪ್ರಕ್ರಿಯೆ ಬಹಳ ನಿಧಾನವಾದ್ದರಿಂದ ಅದರ ಉತ್ಪಾದನೆಯ ಪಾಲಿನಲ್ಲಿ ಕುಸಿತವಾಗಿದೆ ಎಂಬ ಅಂದಾಜಿನ ಮೇಲೆ ಹೀಗೆ ವಾದ ಮಾಡಲಾಗುತ್ತಿದೆ.

ಇ–ಶ್ರಮ್ ವ್ಯವಸ್ಥೆ ಮತ್ತು ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ)ಯಲ್ಲಿ ಹೆಸರು ನೋಂದಾಯಿಸಿಕೊಳ್ಳುವುದು ಹೆಚ್ಚಾಗುತ್ತಿರುವುದರಿಂದ ಕೂಡ ಹೆಚ್ಚು ಕಾರ್ಮಿಕರು ಔಪಚಾರಿಕ ವಲಯದೊಳಕ್ಕೆ ಬರುತ್ತಿದ್ದಾರೆ ಮತ್ತು ಕಿಸಾನ್ ಕ್ರೆಡಿಟ್ ಕಾರ್ಡನ್ನು ಪಡೆದುಕೊಳ್ಳುತ್ತಿರುವುದರಿಂದಾಗಿ ಸರ್ಕಾರಿ ದಾಖಲೆಗಳಲ್ಲಿ ರೈತರ ಹೆಸರು ನೋಂದಾವಣೆಯಾಗುತ್ತಿದೆ ಎಂಬುದನ್ನೂ ಇದನ್ನು ಸಾಬೀತು ಮಾಡಲು ತೋರಿಸಲಾಗುತ್ತಿದೆ.

ನಿವೃತ್ತಿ ವೇತನ ಅಥವಾ ಸಾಲದ ಸೌಲಭ್ಯಗಳಂತಹ ಸಾಮಾಜಿಕ ಭದ್ರತೆಯ ಯಾವುದಾದರೂ ಸವಲತ್ತುಗಳು ದೊರೆಯುವುದು, ಅದು ಎಷ್ಟೇ ಅಲ್ಪವಾಗಿದ್ದರೂ ಕೂಡ, ಮತ್ತು 60 ವರ್ಷಗಳ ನಂತರವೇ ಸಿಗುವಂತದ್ದಾದರೂ ಕೂಡ ನಿಸ್ಸಂದೇಹವಾಗಿಯೂ ಸ್ವಾಗತಾರ್ಹವೇ.; ಏಕೆಂದರೆ ಯಾವುದೋ ಒಂದು ರೀತಿಯಲ್ಲಿ ಹಣ ಪಾವತಿಯಾಗುತ್ತದೆ ಎಂಬ ಭರವಸೆಯೂ ಕೂಡ, ಇನ್ನೂ ಹೆಚ್ಚಿನ ದೃಢವಾದ ಗಳಿಕೆಗಾಗಿ ಹೋರಾಟ ಮಾಡಲು ಒಂದು ಅವಕಾಶವನ್ನು ಕಲ್ಪಿಸುತ್ತದೆ.

ಆದರೆ, ಇಪಿಎಫ್‌ಒ ನೋಂದಾವಣೆ ಸಂಖ್ಯೆಯು ಹಾಗಲ್ಲ. ಅದು ಪ್ರವೇಶವನ್ನು ಮಾತ್ರ ದಾಖಲಿಸುತ್ತದೆ ಮತ್ತು ಹೊರಹೋಗುವುದನ್ನು (ನಿರ್ಗಮನವನ್ನು) ದಾಖಲಿಸುವುದಿಲ್ಲ; ಬಹಳ ಸಂದರ್ಭದಲ್ಲಿ ನಿಜವಾಗಿಯೂ ಕೆಲಸ ಬಿಟ್ಟ ಬಹಳ ದಿನಗಳ ನಂತರ ದಾವೆಗಳ ಇತ್ಯರ್ಥವಾಗುತ್ತದೆ, ಆದಕಾರಣ ಕೇವಲ ಹೊಸ ಪ್ರವೇಶಗಳ ಅಂಕಿ–ಅಂಶಗಳಿಂದ ಮಾತ್ರವೇ ಉದ್ಯೋಗಾವಕಾಶಗಳ ನಿರ್ಮಾಣವನ್ನು ಅಂದಾಜು ಮಾಡಲು ಸಾಧ್ಯವಿಲ್ಲ.

ಕಳೆದ ನಾಲ್ಕು ದಶಕಗಳಲ್ಲಿ ಕೃಷಿಯಿಂದ ಕೃಷಿಯೇತರ ಉದ್ಯೋಗಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಪಲ್ಲಟವಾಗಿರುವುದು ನಿಜ ಮತ್ತು ಕೃಷಿ ಕ್ಷೇತ್ರವು ಅನೌಪಚಾರಿಕ ಉದ್ಯೋಗಗಳ ಅತಿ ದೊಡ್ಡ ಭಂಡಾರವಾಗಿರುವ ಕಾರಣ, ಅನೌಪಚಾರಿಕ ವರ್ತುಲದೊಳಗಡೆಯ ಅನೌಪಚಾರಿಕ ಶ್ರಮಿಕರ ಪಾಲಿನಲ್ಲಿ ತುಸು ಇಳಿಕೆಯಾಗಿದೆ. ಆದರೆ ಮತ್ತೊಂದೆಡೆ, ಔಪಚಾರಿಕ ವಲಯದೊಳಗಡೆ ಅನೌಪಚಾರಿಕ ಶ್ರಮಿಕರ ಪಾಲು ಏರಿದೆ. ಆದ್ದರಿಂದ ಈಗಲೂ ಎರಡನ್ನೂ ಸೇರಿಸಿದರೆ, ಒಟ್ಟು ಅರ್ಥವ್ಯವಸ್ಥೆಯಲ್ಲಿ ಅನೌಪಚಾರಿಕ ಶ್ರಮದ ಪ್ರಮಾಣ 90%ಕ್ಕಿಂತಲೂ ಹೆಚ್ಚಿದೆ.

ಅನೌಪಚಾರಿಕ ವಲಯ ಅಂದರೇನು?

ಅನೌಪಚಾರಿಕ ವಲಯ ಕುರಿತು ಒಂದು ಸ್ಪಷ್ಟ ನಿರೂಪಣೆ ಇಲ್ಲ ಮತ್ತು ಬಹುಮಟ್ಟಿಗೆ ಅದನ್ನು ಉಳಿದುಹೋಗಿರುವ ವಲಯ ಎಂದು ಪರಿಗಣಿಸಲಾಗುತ್ತದೆ. 'ಔಪಚಾರಿಕ" ಎಂದರೇನು ಎಂಬ ಕಲ್ಪನೆಯ ಆಧಾರದಲ್ಲಷ್ಟೇ ಅದನ್ನು ನಿರೂಪಿಸಲಾಗುತ್ತದೆ. ಇದನ್ನು ಬಹುಮಟ್ಟಿಗೆ ಅಭಿವೃದ್ಧಿಶೀಲ ದೇಶಗಳ ಸಂದರ್ಭದಲ್ಲಿ ಚರ್ಚಿಸಲಾಗುತ್ತದೆ; ಅಭಿವೃದ್ಧಿಶೀಲ ದೇಶಗಳಲ್ಲಿ ಹೇಗೋ ಬದುಕುಳಿಯಲು ಮಾಡಬೇಕಾದ ಕೃಷಿ ಮತ್ತು ಕೃಷಿಯೇತರ ವಲಯಗಳಲ್ಲಿ ಅಲ್ಪ ಉತ್ಪಾದನೆಯಲ್ಲಿ ಸಿಲುಕಿಕೊಂಡಿರುವವರ ಪ್ರಮಾಣ ಅಪಾರವಾಗಿರುತ್ತದೆ. ಕೆಳಮಟ್ಟದ ಉತ್ಪಾದಕತೆ, ಕೆಳಮಟ್ಟದ ತಂತ್ರಜ್ಞಾನ, ಬಹುಪಾಲು ಸ್ವಂತ ಶ್ರಮವನ್ನೇ ಅವಲಂಬಿಸಿರುವುದು ಮತ್ತು ಔಪಚಾರಿಕ ಸಾಲ ಸೌಲಭ್ಯಗಳ ಅವಕಾಶವಿಲ್ಲದಿರುವುದು– ಇವು ಅನೌಪಚಾರಿಕ ವಲಯದ ಲಕ್ಷಣಗಳು. ಅನೌಪಚಾರಿಕತೆಯ ಕಲ್ಪನೆಯು ವಿಕಾಸವಾದ ರೀತಿಯಲ್ಲಿ ಅದನ್ನು ಶ್ರಮದ ಮತ್ತು ಬಂಡವಾಳದ ಕೆಲವು ಗುಣಲಕ್ಷಣಗಳನ್ನು ಹೊಂದಿರುವ ಉತ್ಪಾದನಾ ವ್ಯವಸ್ಥೆ ಎನ್ನಬಹುದು. ಆದರೆ ಅಧಿಕೃತವಾಗಿ ಅನೌಪಚಾರಿಕ ವಲಯ ಎನ್ನುವಾಗ ಅನೌಪಚಾರಿಕ ಉದ್ದಿಮೆ ಬೇರೆ ಮತ್ತು ಅನೌಪಚಾರಿಕ ಶ್ರಮ ಬೇರೆ ಎಂದು ಬಗೆಯಲಾಗುತ್ತಿದೆ..

ವಿದ್ಯುತ್ತನ್ನು ಬಳಸುವ ಮತ್ತು ಹತ್ತಕ್ಕಿಂತಲೂ ಕಡಿಮೆ ದುಡಿಮೆಗಾರರನ್ನು ದುಡಿಸಿಕೊಳ್ಳುವ ಅಥವಾ ವಿದ್ಯುತ್ತನ್ನು ಬಳಸದೆ ಇಪ್ಪತ್ತಕ್ಕಿಂತಲೂ ಕಡಿಮೆ ದುಡಿಮೆಗಾರರನ್ನು ದುಡಿಸಿಕೊಳ್ಳುವ ಒಂದು ಉದ್ದಿಮೆಯನ್ನು ಅನೌಪಚಾರಿಕ ಉದ್ದಿಮೆ ಎಂದು ಪರಿಗಣಿಸಲಾಗುತ್ತದೆ. ಇನ್ನೊಂದೆಡೆಯಲ್ಲಿ, ಐಎಲ್‌ಒ(ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ)ದ ನಿರೂಪಣೆಯ ಪ್ರಕಾರ, ಯಾವುದಾದರೂ ಒಂದು ಸಾಮಾಜಿಕ ಭದ್ರತೆಯ ಸೌಲಭ್ಯವನ್ನು ಹೊಂದಿರುವ ದುಡಿಮೆಗಾರನನ್ನು ಔಪಚಾರಿಕ ಕಾರ್ಮಿಕ ಎಂದು ಪರಿಗಣಿಸಬೇಕು. ಆದ್ದರಿಂದ ಈ ನಿರೂಪಣೆಗಳಿಂದ ಅಂತಿಮವಾಗಿ ಸಿಗುವುದು ಔಪಚಾರಿಕ ಹಾಗೂ ಅನೌಪಚಾರಿಕ ಉದ್ದಿಮೆಗಳು ಮತ್ತು ಔಪಚಾರಿಕ ಹಾಗೂ ಅನೌಪಚಾರಿಕ ದುಡಿಮೆಗಾರರು ಎಂಬುದು ಪರಸ್ಪರ ಆವರಿಸಿಕೊಂಡ ಒಂದು ಕೋಶವಷ್ಟೇ. ಅಂದರೆ ಅನೌಪಚಾರಿಕ ಉದ್ದಿಮೆಯಲ್ಲಿ ಔಪಚಾರಿಕ ದುಡಿಮೆಗಾರರು ಇರಬಹುದು, ಔಪಚಾರಿಕ ಉದ್ದಿಮೆಯಲ್ಲಿ ಅನೌಪಚಾರಿಕ ದುಡಿಮೆಗಾರರೂ ಇರಬಹುದು.

ಸರ್ಕಾರದ ಇತ್ತೀಚಿನ 'ನಿಯತಕಾಲಿಕ ಶ್ರಮಶಕ್ತಿಯ ಸಮೀಕ್ಷೆ' (ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ–ಪಿಎಲ್‌ಎಫ್‌ಎಸ್) ಯ ಪ್ರಕಾರ, ಕನಿಷ್ಟ ಒಂದು ಸಾಮಾಜಿಕ ಭದ್ರತಾ ಸೌಲಭ್ಯ ಪಡೆಯುವ ದುಡಿಮೆಗಾರರು ಒಟ್ಟು ಶ್ರಮಶಕ್ತಿಯ ಶೇಕಡಾ 9.6 ರಷ್ಟು ಇದ್ದಾರೆ ಮತ್ತು ಒಂದಕ್ಕಿಂತ ಹೆಚ್ಚು ಸಾಮಾಜಿಕ ಭದ್ರತಾ ಸೌಲಭ್ಯ ಪಡೆಯುವ ದುಡಿಮೆಗಾರರು ಒಟ್ಟು ಶ್ರಮಶಕ್ತಿಯ ಕೇವಲ ಶೇಕಡಾ 4.6 ರಷ್ಟು ಮಾತ್ರವೇ ಇದ್ದಾರೆ. ಈ ನಿರೂಪಣೆಗಳ ಇಂತಹ ಸಂಕೀರ್ಣತೆಯಿಂದಾಗಿ, ಅವು ಅಂತಿಮವಾಗಿ, ಅಭಿವೃದ್ಧಿಶೀಲ ದೇಶಗಳ ಅರ್ಥವ್ಯವಸ್ಥೆಯ ಸಂರಚನೆಯಲ್ಲಿ ಇನ್ನೂ ಮುಂದುವರೆಯುತ್ತಿರುವ ದ್ವಂದ್ವತೆಯನ್ನು ಗ್ರಹಿಸಲಾರದ ಹಾಸ್ಯಾಸ್ಪದ ಆಡಳಿತಾತ್ಮಕ ಮಾನದಂಡಗಳಿಗೆ ಎಡೆಮಾಡಿಕೊಡುತ್ತವೆ. ಮಾನದಂಡಗಳು ಕನಿಷ್ಟಗೊಂಡಷ್ಟೂ ಹೆಚ್ಚೆಚ್ಚು ದುಡಿಮೆಗಾರರು, ಅವರ ಬದುಕು ಹಾಗೂ ಕೆಲಸದಲ್ಲಿ ಯಾವುದೇ ರೀತಿಯ ಅರ್ಥಪೂರ್ಣ ಬದಲಾವಣೆ ಉಂಟಾಗಿರದಿದ್ದರೂ, ಔಪಚಾರಿಕ ವಲಯದ ವ್ಯಾಪ್ತಿಗೆ ಬರುವಂತಾಗುತ್ತದೆ.

ನಿಜ ಹೇಳಬೇಕೆಂದರೆ, ಈ ಔಪಚಾರಿಕ–ಅನೌಪಚಾರಿಕ ದ್ವಂದ್ವವು ಬಂಡವಾಳದ ಕ್ರೋಢೀಕರಣ ಹಾಗೂ ಕೇಂದ್ರೀಕರಣದ ಸಂಕೀರ್ಣ ಪ್ರಕ್ರಿಯೆಗಳನ್ನು ಬಿಂಬಿಸಲಾರದು. ಈ ಪ್ರಕ್ರಿಯೆಗಳಲ್ಲಿ ಅದೇ ಸಮಯದಲ್ಲಿ ಕೆಳತುದಿಯಲ್ಲಿ ಬಂಡವಾಳ ಹರಿದು ಹಂಚಿಹೋಗುವ ಪ್ರಕ್ರಿಯೆಯೂ ನಡೆಯುತ್ತಿರುತ್ತದೆ. ಆದರೆ, ಇದು ಒಂದೇ ಗೆರೆಯಲ್ಲಿ ಸಾಗುವ ಪ್ರಕ್ರಿಯೆಯಲ್ಲ. ಪೈಪೋಟಿಯು ಕಟ್ಟಕಡೆಯಲ್ಲಿ ಎಲ್ಲಾ ಸಣ್ಣ ಹಾಗೂ ಚಿಲ್ಲರೆ ಉತ್ಪಾದಕರನ್ನು ನಾಶಮಾಡುತ್ತದೆ, ದೊಡ್ಡ ಪ್ರಮಾಣದ ಉತ್ಪಾದಕರಷ್ಟೇ ಉಳಿಯುತ್ತಾರೆ ಎಂದು ಭಾವಿಸಲಾಗಿತ್ತು. ಆದರೆ ಅಭಿವೃದ್ಧಿಶೀಲ ದೇಶಗಳಲ್ಲಿ, ಗಣನೀಯ ಪ್ರಮಾಣದಲ್ಲಿ ಬಂಡವಾಳಶಾಹೀ ಅಭಿವೃದ್ಧಿಯಾದಾಗಲೂ ಕೂಡ ಅನೌಪಚಾರಿಕ ಎಂದು ಕರೆಯಲ್ಪಡುವ ವಲಯದಲ್ಲಿ ದುಡಿಯುತ್ತಿರುವವರ ಸಂಖ್ಯೆಯೇ ಎಲ್ಲಕ್ಕಿಂತ ಹೆಚ್ಚಿದೆ. ಅದಕ್ಕೆ ಬಂಡವಾಳಶಾಹೀ ಅಭಿವೃದ್ಧಿಯ ಸ್ವಭಾವವೇ ಕಾರಣವಾಗಿದೆ; ಈ ಅಭಿವೃದ್ಧಿಯಲ್ಲಿ ಒಂದು ಪ್ರಮಾಣಿತ ಮಟ್ಟದ ಬೇಡಿಕೆಯಿರುವ ದೊಡ್ಡ ಮಾರುಕಟ್ಟೆ ಬೆಳೆದು ಬರಲಿಲ್ಲ, ಬದಲಾಗಿ ಹರಿದು ಹಂಚಿ ಹೋದ ಮಾರುಕಟ್ಟೆಯಷ್ಟೇ ಬೆಳೆದುಬಂತು, ಅದರಿಂದಾಗಿ ದೊಡ್ಡ ಪ್ರಮಾಣದ ಉದ್ದಿಮೆಗಳ ಬೆಳವಣಿಗೆಗೆ ಇರುವ ಅವಕಾಶ ಬಹಳಷ್ಟು ಸೀಮಿತಗೊಂಡಿತು. ಕೆಳಮಟ್ಟದ ಉತ್ಪಾದಕತೆ, ಕೆಳಮಟ್ಟದ ಕೂಲಿ ಇರುವ ಕೃಷಿಯೇತರ ಉತ್ಪಾದನಾ ವಿಭಾಗದಲ್ಲಿ ಸಂಬಳ ಪಡೆಯುವ ಅಥವ ಇಲ್ಲದ ಅಥವ ಸ್ವ–ಉದ್ಯೋಗದ ಹೇಗೋ ಬದುಕುಳಿಯುವ ಮಟ್ಟದ ಉದ್ಯೋಗ ಪರಿಸ್ಥಿತಿ ಮುಂದುವರಿಯುತ್ತಿರುವುದು ಇತ್ತೀಚಿನ ಬಂಡವಾಳಶಾಹಿಯ ಸಾಮಾನ್ಯ ಲಕ್ಷಣವಾಗಿದೆ. ಏಕೆಂದರೆ ಇದೀಗ ವಿಪರೀತ ಓರೆ–ಕೋರೆಗಳಿರುವ ಆದಾಯ ಹಂಚಿಕೆಯನ್ನೇ ಹೆಚ್ಚಾಗಿ ಅವಲಂಬಿಸಿದೆ. ಆದರೆ ಅಂತರ್ರಾಷ್ಟ್ರೀಯವಾಗಿ, ಇದರಲ್ಲಿ ಕೆಡುಕೇನೂ ಇಲ್ಲ ಎಂದು ಕಾಣುವಂತೆ ಮಾಡಲು ಇಂತಹ ಚಟುವಟಿಕೆಗಳು ನಡೆಯುತ್ತಿವೆ, ಮತ್ತು ಇನ್ನೂ ಮುಂದುವರೆಯುತ್ತವೆ ಎಂಬುದನ್ನು ಗುರುತಿಸಿರುವ ಐಎಲ್‌ಒ ಈ ಔಪಚಾರಿಕ ಮತ್ತು ಅನೌಪಚಾರಿಕ ದ್ವಂದ್ವಕ್ಕೆ, 'ಔಪಚಾರಿಕ' ವಲಯವು ಬಹುಸಂಖ್ಯಾತ ಶ್ರಮಶಕ್ತಿಯ ಹೆಚ್ಚಿನ ಪಾಲನ್ನು ಬಳಸಿಕೊಳ್ಳುವಲ್ಲಿ ಅಸಮರ್ಥವಾಗಿರುವಾಗ ಉದ್ಯೋಗದ ಅವಕಾಶಗಳನ್ನು ಒದಗಿಸುತ್ತದೆ ಎಂದು ಉತ್ತೇಜನೆ ನೀಡಿದೆ.



ವಾಸ್ತವ ಸಂಗತಿಯೆಂದರೆ, ತಯಾರಿಕಾ ವಲಯದ ಕಾರ್ಖಾನೆಗಳನ್ನು ಮತ್ತು ಅದೇ ರೀತಿಯಲ್ಲಿ ಸೇವೆಗಳಲ್ಲಿ ಇಂತಹ ಉತ್ಪಾದನಾ ವ್ಯವಸ್ಥೆಗಳನ್ನು ಉಲ್ಲೇಖಿಸುವ ಈ ಔಪಚಾರಿಕ ಎಂಬ ಕಲ್ಪನೆಯು ಉದ್ಯೋಗದ ಸಂಖ್ಯೆಗಷ್ಟೇ ಸೀಮಿತವಾಗಿಲ್ಲ; ಅದನ್ನೂ ಮೀರಿ ಅದು ವಿಸ್ತರಿಸಿದೆ. ಅದು ಕಾರ್ಮಿಕರ ಹಕ್ಕುಗಳು, ಕನಿಷ್ಠ ಕೂಲಿಗಳು, ನಿಗದಿತ ಕೆಲಸದ ನಿಯಮಗಳು, ವಜಾ ಮಾಡುವಾಗಿನ ಪಾವತಿಗಳು; ಮತ್ತು ಸಾಮೂಹಿಕ ಚೌಕಾಶಿ ಹಕ್ಕುಗಳು ಮುಂತಾದವುಗಳನ್ನು ಒಳಗೊಳ್ಳುತ್ತದೆ. 'ಅನೌಪಚಾರಿಕ'ದ ಕಾರ್ಯಕಾರೀ ನಿರೂಪಣೆಯನ್ನು, ಉದ್ಯೋಗದ ಹಾಗೂ ಉತ್ಪಾದನಾ ಸಂಘಟನೆಯ ಸ್ವರೂಪವನ್ನು ಹೊರತುಪಡಿಸಿ, ಕೇವಲ ಉದ್ಯೋಗದ ಸಂಖ್ಯೆಗೆ ಅಥವಾ ಕೆಲವು ಸಾಮಾಜಿಕ ಸೌಲಭ್ಯಗಳ ಲಭ್ಯತೆಗಳಿಗೆ ಸೀಮಿತಗೊಳಿಸುವುದು, ನಿಜವಾಗಿಯೂ ಬಂಡವಾಳ–ಶ್ರಮದ ಸಂಬಂಧವನ್ನು ಮತ್ತು ಅದರ ಒಡಗೂಡಿ ಬಂದಿರುವ ಚಾರಿತ್ರಿಕವಾಗಿ, ದೀರ್ಘಕಾಲದ ಕಾರ್ಮಿಕ ವರ್ಗದ ಹೋರಾಟಗಳ ಮೂಲಕ ವಿಕಸಿತವಾದ ಹಕ್ಕುಗಳನ್ನು ದುರ್ಬಲಗೊಳಿಸುತ್ತದೆ.

ಜಾಗತೀಕರಣ ಮತ್ತು ಅನೌಪಚಾರಿಕತೆ

ಬಂಡವಾಳಶಾಹೀ ಶೇಖರಣೆಯ ನವ–ಉದಾರವಾದಿ ಸ್ವರೂಪವು ಅಭಿವೃದ್ಧಿಶೀಲ ದೇಶಗಳಲ್ಲಿ ಸಿಗುವ ಅಗ್ಗದ ಶ್ರಮ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಜಾಗತಿಕ ಬಂಡವಾಳಕ್ಕೆ ಲಭ್ಯಗೊಳಿಸುವ ಒಂದು ಉತ್ಪಾದನಾ ಸಂರಚನೆಯನ್ನು ಒಳಗೊಂಡಿದೆ. ಜಾಗತಿಕ ಶೇಖರಣೆ ಮತ್ತು ದೇಶೀಯ ಬಂಡವಾಳವು ಜಾಗತಿಕ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಕೈಜೋಡಿಸುವ ರಾಜಕೀಯವನ್ನು ಪೈಪೋಟಿಯ ತರ್ಕದ ಮೂಲಕ ಸಹಜ ಎನ್ನುವಂತೆ ಕಾಣಲಾಗುತ್ತದೆ. ನಿಜ ಹೇಳಬೇಕೆಂದರೆ, ದೇಶಗಳು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದರಲ್ಲಿ ಪರಸ್ಪರ ಪೈಪೋಟಿಗಿಳಿದು, ಅಂತಿಮವಾಗಿ ದೊಡ್ಡ ಬಹುರಾಷ್ಟ್ರೀಯ ಗಿರಾಕಿಗಳಿಗೆ ಲಾಭಗಳನ್ನು ಹೆಚಿಸುತ್ತವೆ. ದೇಶೀ ಬಂಡವಾಳವು ಜನರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವ ಬದಲು ಮತ್ತು ಸ್ವಾಯತ್ತವಾಗಿ ಆದ್ಯತೆಗಳನ್ನು ನಿರ್ಧರಿಸಿ ಅದರ ಮೂಲಕ ಔದ್ಯಮಿಕ ಸಾಮರ್ಥ್ಯವನ್ನು ಕಟ್ಟಿ ಬೆಳೆಸುವ ಬದಲು, ದೊಡ್ಡ ಬಂಡವಾಳದೊಂದಿಗೆ ಕಿರಿಯ ಪಾಲುದಾರನಾಗಿ ಶಾಮೀಲಾಗಿ, ಶೇಖರಣೆಯ ಈ ಜಾಗತಿಕ ಸಂಚಿನಿಂದ ಹೊಮ್ಮುವ ಲಾಭದ ಒಂದು ಪಾಲನ್ನು ಪಡೆಯುವುದೇ ಒಳ್ಳೆಯದು ಎಂದು ಭಾವಿಸುತ್ತದೆ.

ಪುಟ 14 ಕ್ಕೆ

ಎನ್‌ಎಲ್‌ಎಂಸಿ-ರಾಷ್ಟ್ರೀಯ ಸೊತ್ತುಗಳ ಲೂಟಿಗೆ ಸರಕಾರೀ ರಿಯಲ್ ಎಸ್ಟೇಟ್ ಕಂಪನಿ?

ನ್ಯಾಷನಲ್ ಮೊನೆಟೈಸೇಷನ್ ಪೈಪ್‌ಲೈನ್(ಎನ್‌ಎಂಪಿ–ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್) ಎಂಬುದನ್ನು ಪ್ರಕಟಿಸಿರುವ ಸರಕಾರ ಈಗ (ನ್ಯಾಷನಲ್ ಲ್ಯಾಂಡ್ ಮೊನೆಟೈಸೇಷನ್ ಕಾರ್ಪೊರೇಷನ್(ಎನ್‌ಎಲ್‌ಎಂಸಿ–ರಾಷ್ಟ್ರೀಯ ಭೂಮಿ ನಗದೀಕರಣ ನಿಗಮ) ರಚಿಸಿರುವುದಾಗಿ ಪ್ರಕಟಿಸಿದೆ. ಇದನ್ನು ವಿವಿಧ ಸಾರ್ವಜನಿಕ ವಲಯದ ಉದ್ದಿಮೆಗಳ ಮತ್ತು ರೈಲ್ವೆ, ರಕ್ಷಣೆ, ಟೆಲಿಕಾಂ ಮೊದಲಾದ ಸರಕಾರೀ ಇಲಾಖೆಗಳ ಸುಪರ್ದಿಯಲ್ಲಿರುವ ಅಪಾರ ಪ್ರಮಾಣದ ಭೂಮಿ, ಕಟ್ಟಡ ಮುಂತಾದ ಆಸ್ತಿಗಳನ್ನು ಮಾರಾಟ ಮಾಡುವುದಕ್ಕಾಗಿ ರಚಿಸಿರುವ ಒಂದು ರೀತಿಯ ರಿಯಲ್ ಎಸ್ಟೇಟ್ ಏಜೆನ್ಸಿ ಎಂದು ಈ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ವರ್ಣಿಸಿವೆ.

ಇದು ಸಂಪೂರ್ಣ ಸರಕಾರೀ ಒಡೆತನದ ಕಂಪನಿಯಾಗಿದ್ದು, ಮೂಲರಚನೆಯ ವಲಯದಲ್ಲಿ ಕಳೆದ ಏಳು ದಶಕಗಳಲ್ಲಿ ಕಟ್ಟಿ ಬೆಳೆಸಿದ ರಾಷ್ಟ್ರೀಯ ಆಸ್ತಿಗಳನ್ನೆಲ್ಲ ಒಂದೊಂದಾಗಿ ದೇಶಿ–ವಿದೇಶಿ ಖಾಸಗಿ ಕಾರ್ಪೊರೇಟ್‌ಗಳಿಗೆ ಮಾರುವುದಕ್ಕೆ ಅನುಕೂಲ ಕಲ್ಪಿಸಿಕೊಡುವ ಇನ್ನೊಂದು ಕ್ರಮ ಎಂದು ಇದಕ್ಕೆ ಬಲವಾದ ಟೀಕೆಗಳು ವ್ಯಕ್ತವಾಗಿವೆ.

ಲಾಭ ಗಳಿಸುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಮತ್ತು ಇಲಾಖೀಯ ಸಂಸ್ಥೆಗಳ ಅಪಾರ ಪ್ರಮಾಣದ ಬೆಲೆಬಾಳುವ ಆಸ್ತಿಗಳನ್ನು ದೇಶದ ಅರ್ಥವ್ಯವಸ್ಥೆಯ ಈ ಪ್ರಧಾನ ವಲಯದ ಉದ್ದಿಮೆಗಳ ಆಧುನೀಕರಣಕ್ಕೆ ಮತ್ತು ವಿಸ್ತರಣೆಗೆ ಬಳಸಬಹುದಾಗಿತ್ತು. ಆದರೆ ತಮ್ಮ ಕಾರ್ಪೊರೇಟ್ ಮಾಲಕರಿಗೆ ಸರಕಾರೀ ಆಸ್ತಿಗಳನ್ನೆಲ್ಲ ವಹಿಸಿಕೊಡುವ ಕುಖ್ಯಾತ ಖಾಸಗೀಕರಣದ ತತ್ವಕ್ಕೆ ಬದ್ಧವಾಗಿರುವ ಸರಕಾರ ಇಂತಹ ಮೂಲಭೂತ ಆರ್ಥಿಕ ವಿವೇಚನೆಗೆ ಬದ್ಧವಾಗಿರುತ್ತದೆ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಇದಕ್ಕೆ ಪ್ರತಿಕ್ರಿಯಿಸುತ್ತ ಹೇಳಿದ್ದಾರೆ.

ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಹೇಗಾದರೂ ಮಾಡಿ ಖಾಸಗೀಕರಿಸಲೇ ಬೇಕು ಎಂಬ ಖಯಾಲಿಯನ್ನು ಹಚ್ಚಿಸಿಕೊಂಡಿರುವ ಸರಕಾರದ ಉಸ್ತುವಾರಿಯಲ್ಲಿ ಈ ರೀತಿಯಲ್ಲಿ ಈ ರಾಷ್ಟ್ರೀಯ ಸೊತ್ತುಗಳ ಮಾರಾಟ ಎಂದೂ ರಾಷ್ಟ್ರೀಯ ಹಿತದಲ್ಲಿ ಇರಲಾರದು ಎಂದು ಮುಂದುವರೆದು ಹೇಳಿರುವ ಅವರು, ಇದುವರೆಗಿನ ಎಲ್ಲ ಖಾಸಗೀಕರಣ ವ್ಯವಹಾರಗಳೇ ಇದಕ್ಕೆ ಸಾಕ್ಷಿ ಎಂದಿದ್ದಾರೆ. ವಿಎಸ್‌ಎನ್‌ಎಲ್‌ನಿಂದ ಹಿಡಿದು ಬಾಲ್ಕೊ, ಐಪಿಸಿಎಲ್, ವಿಮಾನ ನಿಲ್ದಾಣಗಳು, ಏರ್ ಇಂಡಿಯ ಇತ್ಯಾದಿ ಯಾವ ಖಾಸಗೀಕರಣವೂ ನ್ಯಾಯಯುತವಾಗಿರಲಿಲ್ಲ, ಪಾರದರ್ಶಕವಾಗಿರಲಿಲ್ಲ ಎಂಬುದನ್ನು ನೆನಪಿಸಿದ್ದಾರೆ. ಸಿಎಜಿ ಗೆ ಕೂಡ ಇವುಗಳಲ್ಲಿ ಹಲವು ವ್ಯವಹಾರಗಳ ಬಗ್ಗೆ ಟಿಪ್ಪಣಿ ಮಾಡದೇ ಇರಲು ಸಾಧ್ಯವಾಗಿಲ್ಲ. ಪ್ರಸಕ್ತ ರಾಜಕೀಯ ಮಂದಿಗಳ ಅಡಿಯಲ್ಲಿ ಭೂಸೊತ್ತುಗಳ ನಗದೀಕರಣ ಎಂಬುದು ಖಂಡಿತವಾಗಿಯೂ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅಗಣಿತ ನಷ್ಟವನ್ನು ಉಂಟುಮಾಡುತ್ತದೆ. ಅಲ್ಲದೆ ಅಧಿಕಾರದಲ್ಲಿರುವ ಸರಕಾರದ ಉಸ್ತುವಾರಿಯಲ್ಲಿ ಯಾವುದೇ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಆಸ್ತಿಗಳನ್ನು ಅಗ್ಗದಲ್ಲಿ ಮಾರುವುದು ಒಂದು ಸಾಮಾನ್ಯ ವಿದ್ಯಮಾನ. ಅಲ್ಲದೆ ಕಾರ್ಪೊರೇಟ್ ವರ್ಗಕ್ಕೆ ಅಪಾರ ರಿಯಾಯ್ತಿಗಳನ್ನು ಕೊಟ್ಟಿರುವುದರಿಂದ ಉಂಟಾಗಿರುವ ಹಣಕಾಸು ಕೊರತೆಯನ್ನು ತುಂಬಿಸಲಿಕ್ಕಾಗಿ ಈ ಮಾರಾಟ ನಡೆಯುತ್ತಿರುವದರಿಂದಂತೂ ಇದಕ್ಕಿಂತ ಭಿನ್ನವಾದುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಕೋಮುವಾದಿ–ಕಾರ್ಪೊರೇಟ್ ನಂಟಿನ ಸರಕಾರ ಈ ಅಪಾರ ಭೂಮಿ ಮತ್ತು ಮೂಲರಚನಾ ಸೊತ್ತುಗಳನ್ನು ಮಾರಲೆಂದು ರಚಿಸಿರುವ ಈ ಎನ್‌ಎಲ್‌ಎಂಸಿ ಅಳ್ವಿಕೆ ನಡೆಸುತ್ತಿರುವವರ ವಿಪರೀತ ಮತ್ತು ಹತಾಶ ವಿಕಾರವನ್ನಲ್ಲದೆ ಬೇರೇನ್ನೂ ಬಿಂಬಿಸುತ್ತಿಲ್ಲ ಎಂದು ಸಿಐಟಿಯು ಈ ನಡೆಗೆ ಕಟುವಾಗಿ ಪ್ರತಿಕ್ರಿಯಿಸಿದೆ.

ಎನ್‌ಎಲ್‌ಎಂಸಿ ಪ್ರಕಟಣೆಯಾದ ಕೂಡಲೇ ಮುಖ್ಯಧಾರೆಯ ಮಾಧ್ಯಮಗಳು ವಿವಿಧ ಸರಕಾರೀ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಸುಪರ್ದಿಯಲ್ಲಿರುವ ಹೆಚ್ಚುವರಿ ಭೂಮಿಯ ವಿವರಗಳನ್ನು ಪ್ರಕಟಿಸಲು ಆರಂಬಿಸಿವೆ. ಸರಕಾರೀ ಅಂಕಿ–ಅಂಶಗಳ ಪ್ರಕಾರ ರೈಲ್ವೇಸ್ ಬಳಿ 11.8 ಲಕ್ಷ ಎಕರೆ ಭೂಮಿ ಇದೆ, ಇದರಲ್ಲಿ 1.25 ಲಕ್ಷ ಎಕರೆ ಖಾಲಿಯಿದೆ. ರಕ್ಷಣಾ ಮಂತ್ರಾಲಯದ ಬಳಿ 17.95 ಲಕ್ಷ ಎಕ್ರೆ ಇದ್ದು, ಅದರಲ್ಲಿ 1.6 ಲಕ್ಷ ಎಕ್ರೆ 62 ಕಂಟೋನ್ಮೆಂಟ್‌ಗಳಲ್ಲಿ ಮತ್ತು 16.35 ಲಕ್ಷ ಎಕ್ರೆ ಅವುಗಳ ಗಡಿಗಳ ಹೊರಗೆ ಇವೆಯಂತೆ. ಈ ಅಪಾರ ಪ್ರಮಾಣ ಭೂಸೊತ್ತುಗಳನ್ನು ದೊಡ್ಡ ದೇಶಿ–ವಿದೇಶಿ ಕಾರ್ಪೊರೇಟ್‌ಗಳಿಗೆ ಈ ಎನ್‌ಎಲ್‌ಎಂಸಿ ಮೂಲಕ ಅಗ್ಗ ದರಗಳಲ್ಲಿ ಕೊಡಲಾಗುವುದು. **ಕರ್ನಾಟಕದಲ್ಲಿ ಬಿಇಎಂಎಲ್ ಮತ್ತು ಹೆಚ್‌ಎಂಟಿಯ ವಿಶಾಲ ಹೆಚ್ಚುವರಿ ಜಮೀನುಗಳನ್ನೂ ಶೀಘ್ರದಲ್ಲೇ ಮಾರಾಟ ಮಾಡಲಾಗುವುದು ಎಂದೂ ಮಾಧ್ಯಮಗಳಲ್ಲಿ ವರದಿಯಾಗಿದೆ.**

ಈ ಎನ್‌ಎಲ್‌ಎಂಸಿ ಮತ್ತು ಎನ್‌ಎಂಪಿ ರಾಷ್ಟ್ರ–ವಿರೋಧಿಯಾದ ವಂಚಕ ಕಸರತ್ತುಗಳು ಎಂದು ವರ್ಣಿಸಿರುವ ಸಿಐಟಿಯು, ಈ ಕುಖ್ಯಾತ ಲೂಟಿಯ ಸಂಚನ್ನು ಪ್ರತಿರೋಧಿಸಬೇಕು ಮತ್ತು ವಿರೋಧಿಸಬೇಕು ಎಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ಮಾರ್ಚ್ 28–29ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ಸಿನ ಉನ್ನತ ಮಟ್ಟಕ್ಕೇರಿಸಿ ಒಂದು ದೃಢ ಪ್ರತಿಭಟನೆ ಮತ್ತು ಪ್ರತಿರೋಧಕ್ಕೆ ದಾರಿಯನ್ನು ಪ್ರಶಸ್ತಗೊಳಿಸಬೇಕು ಎಂದು ಅದು ಹೇಳಿದೆ.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಅಮರ್‌ಜಿತ್ ಕೌರ್ ಕೂಡ ಸರಕಾರದ ಈ ನಡೆಯನ್ನು "ರಾಷ್ಟ್ರೀಯ ಸೊತ್ತುಗಳ ಸಂಘಟಿತ ಲೂಟಿ" ಎಂದು ಬಲವಾಗಿ ಖಂಡಿಸುತ್ತ, ಮೊದಲು ಈ ಸರಕಾರ ಮೂರು ಕೃಷಿ ಕಾಯ್ದೆಗಳನ್ನು ತಂದು ರೈತರ ಭೂಮಿಯ ಹಿಂದ ಹೋಯಿತು, ಅದರಲಿ ವಿಫಲವಾದಾಗ ಸಾರ್ವಜನಿಕ ವಲಯದ ಬಳಿಯಿರುವ ಅಪಾರ ಭೂಸೊತ್ತುಗಳ ಮಾಲಕತ್ವದ ವರ್ಗಾವಣೆಯ ಬಗ್ಗೆ ಯೋಚಿಸುತ್ತಿದೆ ಎಂದು ಹೇಳಿದ್ದಾರೆ. ಕಾರ್ಮಿಕರ ಎರಡು ದಿನಗಳ ಸಾರ್ವತ್ರಿಕ ಮುಷ್ಕರದಲ್ಲಿ ಈ ವಿಷಯವನ್ನು ಎತಲಾಗುವುದು ಎಂದು ಅವರು ಹೇಳಿದ್ದಾರೆ.


ಕಳೆದ 44 ವರ್ಷಗಳಲ್ಲೇ ಅತ್ಯಂತ ಕಡಿಮೆ ಮಟ್ಟಕ್ಕೆ ನೌಕರರ ಪಿಎಫ್ ಬಡ್ಡಿದರ ಇಳಿಕೆ

ಐದು ರಾಜ್ಯಗಳಲ್ಲಿ ಚುನಾವಣಾ ಫಲಿತಾಂಶಗಳ ನಂತರ, ಚುನಾವಣಾ ಪ್ರಚಾರದ ಒಂದು ತಿಂಗಳಲ್ಲಿ ನಿಂತು ಹೋಗಿದ್ದ ಪಟ್ರೋಲ್–ಡೀಸೆಲ್ ದರಗಳ ದೈನಂದಿನ ಏರಿಕೆ ಮತ್ತೆ ಏರಲಾರಂಭಿಸುವ ಭಯದಲ್ಲಿ ಜನಗಳು ಇದ್ದಾಗ ಅದೇಕೋ ಅಚ್ಛೇದಿನ್‌ಗಳ ನಂತರ ಅಮೃತ ಕಾಲಕ್ಕೆ ಬಂದಿಳಿದ ಸರಕಾರ ಹಾಗೆ ಮಾಡಲಿಲ್ಲ. ಆದರೆ ಅದರ ಬದಲು 7 ಕೋಟಿ ಭವಿಷ್ಯನಿಧಿ ದೇಣಿಗೆದಾರರಿಗೆ 0.4%ದಷ್ಟು ತೀವ್ರ ಬಡ್ಡಿದರ ಕಡಿತದ ಕೋಟ್ಯಂತರ ಬಕ್ಷೀಸು ಪ್ರಕಟಿಸಲಾಗಿದೆ.

ನೌಕರರ ಭವಿಷ್ಯ ನಿಧಿ ಸಂಘಟನೆ(ಇ.ಪಿ.ಎಫ್.ಒ.) ಟ್ರಸ್ಟಿಗಳ ಕೇಂದ್ರ ಮಂಡಳಿಯಲ್ಲಿ ಸರ್ಕಾರದ ಪ್ರತಿನಿಧಿಗಳು ಮತ್ತು ಮಾಲಕರು ಇಪಿಎಫ್ ಬಡ್ಡಿದರವನ್ನು ಕಡಿತಗೊಳಿಸುವಂತೆ ಆಗ್ರಹಿಸಿದ್ದಾರೆ. ಹೀಗಾಗಿ ಈಗಿರುವ ಬಡ್ಡಿದರವನ್ನು ಈಗಿರುವ ಶೇ.8.5ರಿಂದ ಶೇ.8.1ಕ್ಕೆ ಇಳಿಸಬೇಕು ಎಂದು ಶಿಫಾರಸು ಮಾಡಲು ಮಂಡಳಿ ನಿರ್ಧರಿಸಿದೆ ಎಂದು ವರದಿಯಾಗಿದೆ. ಇದು 2021–22ರ ಆರ್ಥಿಕ ವರ್ಷಕ್ಕೆ ಇ.ಪಿ.ಎಫ್ ಬಡ್ಡಿದರಗಳನ್ನು ಕಡಿಮೆ ಮಾಡಲು ಶಿಫಾರಸು ಮಾಡುವ ಮಂಡಳಿಯ "ಬಹುಮತ"ದ ನಿರ್ಧಾರ ಎಂದು ಹೇಳಲಾಗಿದೆ. ವಾಸ್ತವವಾಗಿ ಇದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮತ್ತೊಂದು ಕಾರ್ಮಿಕ ವಿರೋಧಿ ನಡೆ ಎಂದು ಸಿ.ಐ.ಟಿ.ಯು. ಮತ್ತು ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಖಂಡಿಸಿವೆ.

2022 ರ ಮಾರ್ಚ್ 11 ಮತ್ತು 12 ರಂದು ಗುವಾಹಟಿಯಲ್ಲಿ ನಡೆದ ಕೇಂದ್ರ ಮಂಡಳಿಯ ಸಭೆಯಲ್ಲಿ ಕೇಂದ್ರೀಯ ಕಾರ್ಮಿಕ ಸಂಘಗಳನ್ನು ಪ್ರತಿನಿಧಿಸುವ ಎಲ್ಲಾ ನೌಕರರ ಪ್ರತಿನಿಧಿಗಳು ಒಗ್ಗಟ್ಟಿನಿಂದ ಇದನ್ನು ವಿರೋಧಿಸಿದ್ದಾರೆ, ಇದರ ಹೊರತಾಗಿಯೂ ಮಂಡಳಿಯು ಸರ್ಕಾರ ಮತ್ತು ಮಾಲಕರ ಪ್ರತಿನಿಧಿಗಳ ಪ್ರಸ್ತಾವನೆಯನ್ನು ಆಧರಿಸಿ ಬಡ್ಡಿದರವನ್ನು ಕಡಿಮೆ ಮಾಡುವಂತೆ ಶಿಫಾರಸು ಮಾಡಲು ನಿರ್ಧರಿಸಿದೆ. ಇದು ಕಳೆದ 44 ವರ್ಷಗಳಲ್ಲೇ ಅತ್ಯಂತ ಕಡಿಮೆ ಬಡ್ಡಿದರವಾಗಿದೆ.

ಬ್ಯಾಂಕಿಂಗ್ ವಲಯದಲ್ಲಿ ಎಲ್ಲ ಠೇವಣಿಗಳ ಬಡ್ಡಿದರಗಳು ಬಹಳಷ್ಟು ಇಳಿದಿವೆ ಎನ್ನುವ ಮೂಲಕ ಕೇಂದ್ರ ಸರಕಾರ ಈ ಇಳಿಕೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದೆ. ಆದರೆ ಭವಿಷ್ಯ ನಿಧಿ ಎಂಬುದು ಸಾಮಾಜಿಕ ಭದ್ರತೆಯ ಭಾಗವಾಗಿ ನೌಕರರ ಭವಿಷ್ಯಕ್ಕಾಗಿ ಒಂದು ಪುನರಾವರ್ತಿತ ಜೀವಿತಾವಧಿ ಉಳಿತಾಯವಾಗಿರುವುದರಿಂದ ಅದಕ್ಕೆ ದೇಣಿಗೆಗಳನ್ನು ಬ್ಯಾಂಕ್‌ಗಳಲ್ಲಿನ ಯಾವುದೇ ಇತರ ಠೇವಣಿಗಳ ಬಡ್ಡಿದರಗಳಿಗೆ ಸಮಾನವಾಗಿ ಪರಿಗಣಿಸುವ ಕೇಂದ್ರ ಸರ್ಕಾರದ ಈ ವಾದವನ್ನು ಕಾರ್ಮಿಕ ಸಂಘಟನೆಗಳು ಎಂದೂ ಸ್ವೀಕರಿಸುವುದಿಲ್ಲ. ಇದನ್ನು ಬ್ಯಾಂಕಿಂಗ್ ವಲಯದ ಯಾವುದೇ ಇತರ ಠೇವಣಿಗಳ ಬಡ್ಡಿದರಗಳಿಗಿಂತ ಭಿನ್ನವಾಗಿಯೇ ಪರಿಗಣಿಸಬೇಕು ಎಂದು ಸಿಐಟಿಯು ಹೇಳಿದೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಈ ಇಪಿಎಫ್ ಬಡ್ಡಿದರ ಕಡಿತ ಸೇರಿದಂತೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕಾರ್ಮಿಕ ವರ್ಗ ವಿರೋಧಿ ಮತ್ತು ನೀತಿಗಳಿಗೆ ತಕ್ಕ ಪ್ರತ್ಯುತ್ತರವಾಗಿ ಮಾರ್ಚ್ 28 ಮತ್ತು 29 ರಂದು ಮುಂಬರುವ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸುವಂತೆ ಸಿಐಟಿಯು ಮತ್ತಿತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕಾರ್ಮಿಕರಿಗೆ ಕರೆ ನೀಡಿದೆ.

ಈ ಹಿಂದೆ 1977–78ರಲ್ಲಿ ಪಿಎಫ್ ಬಡ್ಡಿದರ 8% ಇತ್ತು. ನಂತರ ಸತತವಾಗಿ ಏರುತ್ತ ಹೋಗಿ 1989–90ರಲ್ಲಿ ಇದು 12%ವನ್ನು ತಲುಪಿತು.2000ದ ವರೆಗೂ ಇದೇ ದರ ಮುಂದುವರೆಯಿತು. ಆದರೆ ಆಮೇಲೆ ನವ–ಉದಾರವಾದೀ ಧೋರಣೆಗಳ ಭಾಗವಾಗಿ ಇಳಿಕೆ ಆರಂಭವಾಯಿತು. 2013–14ರಲ್ಲಿ ಅದು 8.75%ಕ್ಕೆ ಇಳಿದಿತ್ತು. 'ಅಚ್ಛೇ ದಿನ್'ಗಳ ಮೊದಲ ವರ್ಷದಲ್ಲಿ ಅದೇ ಮಟ್ಟದಲ್ಲಿದ್ದು 2015–16ರಲ್ಲಿ ಅದು ಕಾರ್ಮಿಕ ಸಂಘಗಗಳ ಒತ್ತಡದಿಂದ 8.8%ಕ್ಕೆ ತುಸು ಹೆಚ್ಚಿತು. ಆದರೆ ನಂತರ ಮತ್ತೆ ಇಳಿಕೆ ಆರಂಭವಾಯಿತು

2016–17ರಲ್ಲಿ 8.65%ಕ 2017–18ರಲ್ಲಿ 8.55%, 2018–19ರಲ್ಲಿ ಮತ್ತೆ 8.65%ಕ್ಕೆ ಏರಿಸಿದ್ದನ್ನು 2019–20ರಲ್ಲಿ 8.5%ಕ್ಕೆ ಇಳಿಸಲಾಯಿತು. ಮರುವರ್ಷ ಮತ್ತೆ ಇಳಿಸಲಾಗಲಿಲ್ಲ. ಆದರೆ ಈ ವರ್ಷ ಅದನ್ನು ತೀವ್ರವಾಗಿ 8.1%ಕ್ಕೆ ಇಳಿಸಲಾಗಿದೆ.



ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

ನಿರಂಕುಶಾಧಿಕಾರದತ್ತ ಸಾಗುತ್ತಿರುವ 10 ಪ್ರಮುಖ ದೇಶಗಳಲ್ಲಿ ಭಾರತ!

ಉದಾರ ಪ್ರಜಾಪ್ರಭುತ್ವ ಸೂಚ್ಯಂಕದಲ್ಲಿ 93/179
ಚುನಾವಣಾ ಪ್ರಜಾಪ್ರಭುತ್ವ ಸೂಚ್ಯಂಕದಲ್ಲಿ 100/179

ಸ್ವೀಡನ್ನಿನಲ್ಲಿರುವ ವಿ–ಡೆಮ್ ಇನ್ಸಿಟ್ಯೂಟ್(ಪ್ರಜಾಪ್ರಭುತ್ವದ ವಿಧಗಳು) ಬಿಡುಗಡೆ ಮಾಡಿರುವ ಇತ್ತೀಚಿನ ವರದಿಯ ಪ್ರಕಾರ ಭಾರತ ಈಗ ನಿರಂಕುಶಾಧಿಕಾರದತ್ತ ಸಾಗುತ್ತಿರುವ ಮೊದಲ 10 ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ!

ಈ ಸಂಸ್ಥೆ ಲೆಕ್ಕ ಹಾಕುವ ಸೂಚ್ಯಂಕಗಳ ಪ್ರಕಾರ ಭಾರತ ಕೆಳಗಣ 40ರಿಂದ 50ಶೇ.ದೇಶಗಳ ವಿಧದಲ್ಲಿ ಬರುತ್ತದೆ.

ಲಿಬರಲ್ ಡೆಮಾಕ್ರಸಿ ಅಂದರೆ ಉದಾರ ಪ್ರಜಾಪ್ರಭುತ್ವ ಸೂಚ್ಯಂಕದಲ್ಲಿ ಭಾರತದ ಸ್ಥಾನ 179 ದೇಶಗಳಲ್ಲಿ 93ನೇ ಯದ್ದು, ಚುನಾವಣಾ ಪ್ರಜಾಪ್ರಭುತ್ವ ಸೂಚ್ಯಂಕದಲ್ಲಿ 100ನೇಯದ್ದು.

ನಿರಂಕುಶಧಿಕಾರದತ್ತ ಸಾಗುತ್ತಿರುವ ದೇಶಗಳಲ್ಲೂ ಬಹುತ್ವ–ವಿರೋಧಿ ಪಕ್ಷಗಳ ನೇತೃತ್ವದಲ್ಲಿ ನಿರಂಕುಶಾಧಿಕಾರದತ್ತ ಸಾಗುತ್ತಿರುವ ಆರು ದೇಶಗಳಲ್ಲೂ ಭಾರತ ಸ್ಥಾನ ಪಡೆದಿದೆ! ಅಂದರೆ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಬದ್ಧತೆ ಇಲ್ಲದ, ಅಲ್ಪಸಂಖ್ಯಾತರ ಹಕ್ಕುಗಳಿಗೆ ಮನ್ನಣೆ ನೀಡದ, ರಾಜಕೀಯ ವಿರೋಧಿಗಳನ್ನು ರಕ್ಕಸರೆಂಬಂತೆ ಚಿತ್ರಿಸುವ ಮತ್ತು ರಾಜಕೀಯ ಹಿಂಸಾಚಾರವನ್ನು ಸ್ವೀಕರಿಸುವ ಆಳುವ ಪಕ್ಷವಿರುವ ದೇಶಗಳ ಪೈಕಿ!

ಇತರ 5 ದೇಶಗಳೆಂದರೆ ಬ್ರೆಝಿಲ್, ಹಂಗೆರಿ, ಪೋಲಂಡ್, ಸರ್ಬಿಯ ಮತ್ತು ಟರ್ಕಿ. ಇಲ್ಲಿಯ ಆಳುವ ಪಕ್ಷಗಳು ರಾಷ್ಟ್ರವಾದಿ–ಪ್ರತಿಗಾಮಿ ಸ್ವಭಾವದವು

ಈ ಸೂಚ್ಯಂಕಗಳಲ್ಲಿ ಭಾರತ ಕೆಳಗೆ ಜಾರುತ್ತಿರುವ ಪ್ರಕ್ರಿಯೆ ಬಹುಪಾಲು 2014ರ ನಂತರ ನಡೆದಿದೆ ಎಂದು ಈ ವರದಿ ಹೇಳುತ್ತದೆ.

2020ರಲ್ಲಿ ಈ ಸೂಚ್ಯಂಕಗಳ ಆಧಾರದಲ್ಲಿ ಭರತವನ್ನು 'ಚುನಾವಣಾ ಪ್ರಜಾಪ್ರಭುತ್ವ'ದಿಂದ 'ಚುನಾವಣಾ ನಿರಂಕುಶಾಧಿಕಾರ'ದ ವಿಧಕ್ಕೆ ಇಳಿಸಲಾಯಿತು.

ನವ–ಉದಾರವಾದಕ್ಕೇ ಮುಳುವಾಗುತ್ತಿರುವ ಅದರ ಆಳ್ವಿಕೆಯೊಳಗಿನ ಆರ್ಥಿಕ ನಿರ್ಬಂಧಗಳು

ಬಲಾಢ್ಯ ಪಶ್ಚಿಮ ದೇಶಗಳು ತಮ್ಮ ಹುಕುಂಗಳನ್ನು ಧಿಕ್ಕರಿಸುವ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಿರುವುದರಿಂದಾಗಿ, ಈ ನಿರ್ಬಂಧಗಳಿಂದ ತಪ್ಪಿಸಿಕೊಳ್ಳುವ ಒಂದು ಉಪಾಯವಾಗಿ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು ಮತ್ತೊಮ್ಮೆ ರಂಗದ ಮೇಲೆ ಕಾಣಿಸಿಕೊಂಡಿವೆ. ಇಂತಹ ಪರ್ಯಾಯ ವ್ಯವಸ್ಥೆಗಳನ್ನು ಏರ್ಪಡಿಸಿಕೊಳ್ಳುವ ಮೂಲಕ ನಿರ್ಬಂಧಗಳಿಗೆ ಒಳಗಾದ ದೇಶಗಳು ಅವುಗಳ ಪರಿಣಾಮದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತವೆ, ಮತ್ತು ಹೆಚ್ಚು ಹೆಚ್ಚು ದೇಶಗಳು ನಿರ್ಬಂಧಗಳಿಗೆ ಈಡಾಗುತ್ತಿದ್ದಂತೆ, ಈ ಪರ್ಯಾಯ ವ್ಯವಸ್ಥೆಗಳೂ ಹೇರಳವಾಗಿ ಹುಟ್ಟಿಕೊಳ್ಳುತ್ತವೆ. ಆದ್ದರಿಂದ ನಿರ್ಬಂಧಗಳು ಪರಿಣಾಮಕಾರಿಯಾಗಿರಬೇಕು ಎಂದಾದರೆ, ಪ್ರಸ್ತುತ ನವ ಉದಾರ ವ್ಯವಸ್ಥೆಯ ಮುಂದುವರಿಕೆ ಅಗತ್ಯವಾಗುತ್ತದೆ. ಆದರೆ, ಈ ಪರ್ಯಾಯಗಳು ಇಂತಹ ಮುಂದುವರಿಕೆಯನ್ನೇ ಅಲ್ಲಗಳೆಯುತ್ತವೆ. ಆದ್ದರಿಂದ, ಇಂದು ನಾವು ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ವೈರುಧ್ಯಗಳು ಹೊರಬಿದ್ದಿರುವುದನ್ನು ಕಾಣುತಿದ್ದೇವೆ. ಒಂದು ಕಡೆಯಲ್ಲಿ ಈ ವಿದ್ಯಮಾನವು ವಿಶ್ವದ ಅರ್ಥವ್ಯವಸ್ಥೆಯ ದೀರ್ಘಕಾಲೀನ ಬಿಕ್ಕಟ್ಟಿನ ರೂಪದಲ್ಲಿ ಕಾಣಿಸಿಕೊಂಡರೆ, ಮತ್ತೊಂದೆಡೆಯಲ್ಲಿ ರಷ್ಯಾ–ಉಕ್ರೇನ್ ಸಂಘರ್ಷದಲ್ಲಿ ಒಂದು ವಕ್ರ ರೂಪದಲ್ಲಿ ಅಮೆರಿಕಾದ ಪ್ರಾಬಲ್ಯಕ್ಕೆ ಸವಾಲಾಗಿ ಕಾಣಿಸಿಕೊಂಡಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು : **ಕೆ.ಎಂ.ನಾಗರಾಜ್**

ನವ–ಉದಾರವಾದಿ ವ್ಯವಸ್ಥೆಯನ್ನು ಅಂಗೀಕರಿಸುವ ಮೊದಲು, ಭಾರತವು ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳೊಂದಿಗೆ "ರೂಪಾಯಿ ಪಾವತಿ ವ್ಯವಸ್ಥೆಯನ್ನು" ಹೊಂದಿತ್ತು. ಈ ವ್ಯವಸ್ಥೆಯಲ್ಲಿ, ವ್ಯಾಪಾರ–ವಹಿವಾಟುಗಳ ಇತ್ಯರ್ಥಕ್ಕಾಗಲಿ ಅಥವಾ ವಹಿವಾಟುಗಳನ್ನು ಲೆಕ್ಕಹಾಕುವ ಒಂದು ಆಧಾರವಾಗಿಯಾಗಲಿ ಪ್ರಮುಖ ಅಂತರರಾಷ್ಟ್ರೀಯ ಮೀಸಲು ಕರೆನ್ಸಿಯಾದ ಅಮೆರಿಕದ ಡಾಲರ್‌ಅನ್ನು ಬಳಸುತ್ತಿರಲಿಲ್ಲ. ಅಂದರೆ, ಚಲಾವಣೆಯ ಒಂದು ಸಾಧನವಾಗಿಯಾಗಲಿ ಅಥವಾ ವ್ಯಾಪಾರ–ವಹಿವಾಟುಗಳನ್ನು ಲೆಕ್ಕಹಾಕುವ ಒಂದು ಆಧಾರವಾಗಿಯಾಗಲಿ ಡಾಲರ್ ಕರೆನ್ಸಿಯನ್ನು ಬಳಸುತ್ತಿರಲಿಲ್ಲ. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳೊಂದಿಗಿನ ದ್ವಿಪಕ್ಷೀಯ ವ್ಯಾಪಾರವನ್ನು ಭಾರತದ ರೂಪಾಯಿಗಳ (ಅಥವಾ ರೂಪಾಯಿ–ರಷ್ಯನ್ ರೂಬಲ್ ವಿನಿಮಯ ದರ) ಆಧಾರದ ಮೇಲೆ ನಿಗದಿಪಡಿಸಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ, ದ್ವಿಪಕ್ಷೀಯ ವ್ಯಾಪಾರ–ವಹಿವಾಟುಗಳು ತಕ್ಷಣವೇ ಪೂರ್ಣವಾಗಿ ಇತ್ಯರ್ಥವಾಗುತ್ತಿರಲಿಲ್ಲ. ಎರಡು ದೇಶಗಳು ತಮ್ಮ ತಮ್ಮ ರಫ್ತು–ಆಮದುಗಳ ಸಂಬಂಧವಾಗಿ ಒಂದು ದೇಶವು ಮತ್ತೊಂದು ದೇಶಕ್ಕೆ ಪಾವತಿಸಬೇಕಾದ ಮೊತ್ತವನ್ನು ದೀರ್ಘಾವಧಿಯ ರಫ್ತು–ಆಮದುಗಳ ಮೂಲಕವೇ ಇತ್ಯರ್ಥ ಮಾಡಿಕೊಳ್ಳುತ್ತಿದ್ದವು. ಡಾಲರ್ ಕರೆನ್ಸಿಯ ಅಲಭ್ಯತೆ ಪರಸ್ಪರ ಆಮದು–ರಫ್ತುಗಳಿಗೆ ನಿರ್ಬಂಧವಾಗಬಾರದು ಎಂದು ಖಾತ್ರಿ ಪಡಿಸುವುದು ಇದರ ಹಿಂದಿದ್ದ ವಿಚಾರ. ಅಂದರೆ, ಈ ಏರ್ಪಾಟಿನ ಮೂಲಕ ಸಂಭವಿಸಿದ ವ್ಯಾಪಾರ ಬೇರೆ ರೀತಿಯಲ್ಲಿ ನಡೆಯುವುದು ಸಾಧ್ಯವಿರಲಿಲ್ಲ, ಹಾಗಾಗಿ, "ರೂಪಾಯಿ ಪಾವತಿ" ಏರ್ಪಾಟು "ವ್ಯಾಪಾರ ಸೃಷ್ಟಿ"ಯ ಮಾರ್ಗವಾಗಿತ್ತು.

ಈ ಏರ್ಪಾಟು ಒಂದು ಅತ್ಯಂತ ವಿವೇಕಯುತ ವ್ಯವಸ್ಥೆಯಾಗಿತ್ತು. ಹೇಗೆಂದರೆ, ದೇಶ 'ಎ' ಮತ್ತು ದೇಶ 'ಬಿ' ತಾವು ಹೊಂದಿದ್ದ ಸರಕುಗಳನ್ನು ಪರಸ್ಪರರಿಗೆ ಪ್ರಯೋಜನಕಾರಿಯಾಗುವ ರೀತಿಯಲ್ಲಿ ವಿನಿಮಯ ಮಾಡಿಕೊಳ್ಳುತ್ತಿದ್ದವು. ಆದರೆ, ಈ ವ್ಯವಸ್ಥೆಗೆ ಬದಲಾಗಿ ಜಾರಿಯಲ್ಲಿರುವ ಈಗಿನ ವ್ಯವಸ್ಥೆಯ ಪ್ರಕಾರ, ಈ ಎರಡೂ ದೇಶಗಳೂ ದೇಶ 'ಸಿ'ಗೆ ಮಾಡುವ ರಫ್ತುಗಳ ಮೂಲಕ ಡಾಲರ್‌ಅನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿಟ್ಟುಕೊಂಡಿಲ್ಲದ ಪರಿಸ್ಥಿತಿಯಲ್ಲಿ, ಪರಸ್ಪರರಿಗೆ ಪ್ರಯೋಜನಕಾರಿಯಾಗುವ ಈ ವಿನಿಮಯದಿಂದ ಅವು ವಂಚಿತಗೊಳ್ಳುತ್ತವೆ. ಆದ್ದರಿಂದ, ಡಾಲರ್ ಕರೆನ್ಸಿಯ ದೇಶಗಳಿಗೆ ರಫ್ತು ಮಾಡದ ಅಥವಾ ಮಾಡಲಾಗದೆ ಡಾಲರ್ ಸಂಗ್ರಹಣೆ ಮಾಡಿಕೊಳ್ಳದ ಪರಿಸ್ಥಿತಿಯಲ್ಲಿ, ಈಗ ಜಾರಿಯಲ್ಲಿರುವ ವ್ಯವಸ್ಥೆಯು ಅಸಂಬದ್ಧವಾಗಿ ಕಾಣುತ್ತದೆ.

ಇಂಥಹ ದ್ವಿಪಕ್ಷೀಯ ವ್ಯಾಪಾರ ಏರ್ಪಾಟುಗಳು ಡಾಲರ್ ಕರೆನ್ಸಿಯನ್ನು ಅಂತಾರಾಷ್ಟ್ರೀಯ ವ್ಯಾಪಾರ–ವಹಿವಾಟುಗಳ ವ್ಯಾಪ್ತಿಯಿಂದ ಹೊರಗಿಟ್ಟ ಕಾರಣದಿಂದಾಗಿ ಅವನ್ನು ನವ ಉದಾರವಾದಿ ಅರ್ಥಶಾಸ್ತ್ರಜ್ಞರು ವಿರೋಧಿಸಿದರು. ಇಂತಹ



ವ್ಯವಸ್ಥೆಗಳು "ವ್ಯಾಪಾರ ಸೃಷ್ಟಿ" ಮಾಡುವುದಿಲ್ಲ, ಬದಲಾಗಿ "ವ್ಯಾಪಾರದ ದಿಕ್ಕನ್ನು ಬದಲಿಸುತ್ತವೆ", ಇಂತಹ ಏರ್ಪಾಟುಗಳು ಇಲ್ಲದಿರುತ್ತಿದ್ದರೆ ವ್ಯಾಪಾರ ನಿರ್ಬಂಧಿತಗೊಳ್ಳುತ್ತದೆ ಎಂಬ ವಾದ ತಪ್ಪು ಎಂಬುದಾಗಿ ಅವರು ಜೋರಾಗಿ ವಾದಿಸಿದರು. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಇಂತಹ ದ್ವಿಪಕ್ಷೀಯ ವ್ಯಾಪಾರ ಏರ್ಪಾಟಿನಲ್ಲಿ ಭಾಗವಹಿಸುವ ದೇಶಗಳ ಡಾಲರ್ ಗಳಿಕೆಯು ಪೂರೈಕೆಯ ಕಡೆಯಿಂದ ನಿರ್ಬಂಧಿತವಾಗಿರುತ್ತಿತ್ತೇ ಹೊರತು ಬೇಡಿಕೆಯ ಕಡೆಯಿಂದ ಅಲ್ಲ ಎಂಬುದು ನವ–ಉದಾರವಾದಿ ಅರ್ಥಶಾಸ್ತ್ರಜ್ಞರ ವಾದವಾಗಿತ್ತು; ಅಂದರೆ ಈ ದೇಶಗಳ ಉತ್ಪನ್ನಗಳಿಗೆ ಡಾಲರ್–ಪ್ರಧಾನ ದೇಶಗಳಲ್ಲಿ ಬೇಡಿಕೆಯು ಕೊರೆಯಾಗಿತ್ತು ಎಂದಲ್ಲ. ಬದಲಿಗೆ, ಈ ದೇಶಗಳ ಬಳಿ ತಮ್ಮ ಅಗತ್ಯಗಳನ್ನು ಪೂರೈಸಿಕೊಂಡ ನಂತರ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಫ್ತಿಗಾಗಿ ಉಳಿದದ್ದು ಅಲ್ಪವೇ ಎಂಬುದು ನವ–ಉದಾರವಾದಿ ಅರ್ಥಶಾಸ್ತ್ರಜ್ಞರ ಭಾವನೆಯಾಗಿತ್ತು. ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವ ಯುರೋಪಿಯನ್ ದೇಶಗಳಲ್ಲಿ ಸಮಾಜವಾದದ ಪತನದ ನಂತರ ಮತ್ತು ತರುವಾಯದಲ್ಲಿ ಭಾರತವು ನವ–ಉದಾರವಾದವನ್ನು ಅಪ್ಪಿಕೊಂಡ ನಂತರ ಈ ಚರ್ಚೆ–ವಿವಾದವು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿತು.



ಬ್ರಿಟಿಷ್ ವ್ಯಂಗ್ಯಚಿತ್ರಕಾರ ಬಾಬ್ ಅವರ ವ್ಯಂಗ್ಯ

ನವ ಉದಾರವಾದವು ಇಂತಹ ಎಲ್ಲ ದ್ವಿಪಕ್ಷೀಯ ವ್ಯವಸ್ಥೆಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ವಿನಿಮಯ ದರವು "ಏಕೀಕೃತ"ವಾಗಿರಬೇಕು ಎಂಬುದು ಅದರ ಆಗ್ರಹ. ನವ–ಉದಾರವಾದವು ವಿದೇಶಿ ವಿನಿಮಯ ಮಾರುಕಟ್ಟೆಯನ್ನೂ ಒಳಗೊಂಡಂತೆ ಒಂದು ಮಾರುಕಟ್ಟೆಯಲ್ಲಿ ಒಂದೇ ಬೆಲೆ ಇರಬೇಕು ಎಂಬ ನೆಲೆಯಲ್ಲಿ ಈ ಎಲ್ಲ ದ್ವಿಪಕ್ಷೀಯ ವ್ಯವಸ್ಥೆಗಳನ್ನೂ ಕೊನೆಗೊಳಿಸಿತು.

ಆದರೆ ಇತ್ತೀಚೆಗೆ, ಬಲಾಢ್ಯ ಪಶ್ಚಿಮ ದೇಶಗಳ ಹುಕುಂಗಳನ್ನು ಧಿಕ್ಕರಿಸುವ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಿರುವುದರಿಂದಾಗಿ, ಈ ನಿರ್ಬಂಧಗಳಿಂದ ತಪ್ಪಿಸಿಕೊಳ್ಳುವ ಒಂದು ಉಪಾಯವಾಗಿ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು ಮತ್ತೊಮ್ಮೆ ರಂಗದ ಮೇಲೆ ಕಾಣಿಸಿಕೊಂಡಿವೆ. ಇರಾನ್ ವಿರುದ್ಧ ಹೇರಿದ ನಿರ್ಬಂಧಗಳು, ಇರಾನ್ ಕೆಲವು ದೇಶಗಳೊಂದಿಗೆ ಮಾಡಿಕೊಂಡಿದ್ದ ದ್ವಿಪಕ್ಷೀಯ ವ್ಯಾಪಾರ ವ್ಯವಸ್ಥೆಗಳ ಪುನರುಜ್ಜೀವನಕ್ಕೆ ಕಾರಣವಾದವು. ಈಗ, ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿದ ಹಿನ್ನೆಲೆಯಲ್ಲಿ ರಷ್ಯಾದ ಮೇಲೆ ಹೇರಿದ ಕಠಿಣ ನಿರ್ಬಂಧಗಳಿಂದಾಗಿ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು ಹಿಂದೆಂದೂ ಇಲ್ಲದಷ್ಟು ವ್ಯಾಪಕತೆ ಪಡೆಯುವ ಸಾಧ್ಯತೆಯಿದೆ. ಅಮೆರಿಕ ಮತ್ತು ಪಶ್ಚಿಮ ದೇಶಗಳು ಇಡೀ ಜಗತ್ತನ್ನೇನೂ ರೂಪಿಸಿಲ್ಲ, ಅವು ಜಗತ್ತಿನ ಒಂದು ಸಣ್ಣ ಭಾಗವಷ್ಟೇ ಎಂಬ ಪುಟಿನ್ ಅವರ ಎಚ್ಚರಿಕೆಯು, ಮೂಲೆಗೆ ತಳ್ಳಲ್ಪಟ್ಟಾಗ ರಷ್ಯಾವು ಪಶ್ಚಿಮ ದೇಶಗಳು ಹೇರಿದ ನಿರ್ಬಂಧಗಳನ್ನು ನಿಷ್ಫಲಗೊಳಿಸಲು ಹೆಚ್ಚಿನ ಸಂಖ್ಯೆಯ ದೇಶಗಳೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳಲಿದೆ ಎಂಬುದನ್ನು ಸೂಚಿಸುತ್ತದೆ.

ಇಲ್ಲಿಯವರೆಗೆ ಹೇರಿದ ಎಲ್ಲ ನಿರ್ಬಂಧಗಳ ಪೈಕಿ ಒಂದು ಅತ್ಯಂತ ಮಹತ್ವಪೂರ್ಣವಾದುದೆಂದರೆ, ಪಶ್ಚಿಮ ದೇಶಗಳ ಹಣಕಾಸು ಜಾಲದಿಂದ ಮತ್ತು ಸ್ವಿಫ್ಟ್ ಜಾಲದಿಂದ ರಷ್ಯಾದ ಬ್ಯಾಂಕುಗಳನ್ನು ಬೇರ್ಪಡಿಸುವುದಾಗಿದೆ. ಇದರ ಅರ್ಥವೇನೆಂದರೆ, ರಫ್ತಿನ ಮೂಲಕ ಸಂಪಾದಿಸುತ್ತಿದ್ದ ಮತ್ತು ಹಣಕಾಸು ರೂಪದಲ್ಲಿ ಒಳಹರಿಯುತ್ತಿದ್ದ ಡಾಲರ್‌ಗಳು ರಷ್ಯಾಗೆ ಸಿಗದಂತೆ ಮಾಡುವುದು. ಹಾಗಾಗಿ, ಅಮೆರಿಕದ ಡಾಲರ್‌ಗಳಿಂದ ವಂಚಿತವಾದ ರಷ್ಯಾ, ತನಗೆ ಅಗತ್ಯವಿರುವ ಆಮದುಗಳನ್ನು ಮಾಡಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ, ಗತ್ಯಂತರವಿಲ್ಲದೆ, ಡಾಲರ್ ಪಾವತಿಯನ್ನು ಒಳಗೊಂಡಿರದ ಕೆಲವು ಏರ್ಪಾಟುಗಳ ಮೂಲಕ ಡಾಲರ್‌ಗಳನ್ನು ರಷ್ಯಾ ಪಡೆಯಬೇಕಾಗುತ್ತದೆ. ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳ ಅಗತ್ಯ ಉದ್ಭವಿಸುವುದು ಇಲ್ಲಿಯೇ. ಭಾರತವೂ ಸಹ ರಷ್ಯಾದೊಂದಿಗೆ ಈ ರೀತಿಯ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆಯಿದೆ. ಈ ವಿದ್ಯಮಾನವು ಸೋವಿಯತ್ ಒಕ್ಕೂಟದೊಂದಿಗೆ ಭಾರತದ ಹಿಂದಿನ ಒಪ್ಪಂದಗಳನ್ನು ನೆನಪಿಸುತ್ತದೆ.

ಪಶ್ಚಿಮ ದೇಶಗಳು ಹೇರಿದ ನಿರ್ಬಂಧಗಳನ್ನು ರಷ್ಯಾ ಎದುರಿಸಿ ನಿಲ್ಲುವ ಸಾಮರ್ಥ್ಯವನ್ನು ಇಂತಹ ದ್ವಿಪಕ್ಷೀಯ ವ್ಯವಸ್ಥೆಗಳು ಎಷ್ಟರ ಮಟ್ಟಿಗೆ ಹೆಚ್ಚಿಸಬಹುದು ಎಂಬುದನ್ನು ನೋಡಬೇಕಾಗಿದೆ. ಈ ವಿಷಯದ ಸುತ್ತಮುತ್ತಲಿನ ಚರ್ಚೆಯಲ್ಲಿ ನಿರ್ಬಂಧಗಳಿಗೆ ಒಳಗಾದ ವೆನೆಜುವೆಲಾ ಮತ್ತು ಇರಾನ್ ದೇಶಗಳು ತಮಗೆ ಅತ್ಯವಶ್ಯವಿದ್ದ ಔಷಧಿಗಳನ್ನು ಆಮದು ಮಾಡಿಕೊಳ್ಳಲಾಗದ ಕಾರಣದಿಂದಾಗಿ ಆ ದೇಶಗಳಲ್ಲಿ ಸಂಭವಿಸಿದ



ಸಾವಿರಾರು ಜನರ ಸಾವು ನೋವುಗಳನ್ನು ಉಲ್ಲೇಖಿಸಲಾಗುತ್ತದೆ. ಮಾನವೀಯ ನೆಲೆಯಲ್ಲಿ ಈ ನಿರ್ಬಂಧಗಳನ್ನು ವಿರೋಧಿಸಬೇಕಾಗುತ್ತದೆ. ತಮ್ಮ ಮೇಲೆ ಆಳ್ವಿಕೆ ನಡೆಸುವ ಸರ್ಕಾರಗಳು ಕೈಗೊಂಡ ಕೆಲವು ಕ್ರಮಗಳ ಬಗ್ಗೆ ಎತ್ತುವ ಆಕ್ಷೇಪಣೆಗಳಿಂದಾಗಿ, ಮತ್ತು ಪ್ರಸ್ತುತ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯ ಕ್ರಮಗಳಿಂದಾಗಿ, ಅಂದರೆ, ವ್ಲಾಡಿಮಿರ್ ಪುಟಿನ್ ಅವರ ಕ್ರಮಗಳಿಂದಾಗಿ, ಜನ ಸಾಮಾನ್ಯರನ್ನು ನರಳುವಂತೆ ಮಾಡುವ ಅಗತ್ಯವಿಲ್ಲ. ಆದರೆ, ಒಂದು ಕಡೆ ರಷ್ಯಾ ಮತ್ತು ಮತ್ತೊಂದೆಡೆ ಇರಾನ್ ಅಥವಾ ವೆನೆಜುವೆಲಾ ದೇಶಗಳ ಪರಿಸ್ಥಿತಿಯ ನಡುವೆ ಸಾಮ್ಯತೆಯನ್ನು ಗುರುತಿಸುವ ಕ್ರಮವು ಸಪ್ರಮಾಣವಾದದ್ದಲ್ಲ. ಪುಟಿನ್ ಸ್ವತಃ ಒತ್ತಿ ಹೇಳಿರುವಂತೆ, ರಷ್ಯಾವು ತನಗೆ ಅಗತ್ಯವಿರುವ ಹೆಚ್ಚಿನ ಸರಕುಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದ ಒಂದು ದೊಡ್ಡ ದೇಶ. ಅದೂ ಅಲ್ಲದೆ, ಕೆಲವು ಪಶ್ಚಿಮ ದೇಶಗಳೊಂದಿಗೆ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ರಷ್ಯಾವು ತನಗೆ ಅಗತ್ಯವಿರುವ ಮತ್ತು ತಾನು ಉತ್ಪಾದಿಸಲು ಸಾಧ್ಯವಿಲ್ಲದ ವಸ್ತುಗಳನ್ನು ಆಮದು ಮಾಡಿಕೊಳ್ಳಬಹುದು. ಪಶ್ಚಿಮದ ಮೆಟ್ರೋಪಾಲಿಟನ್ ದೇಶಗಳನ್ನು ಹೊರತುಪಡಿಸಿದರೆ, ಉಳಿದ ದೇಶಗಳು ಅದರತ್ತ ಬೆನ್ನು ತಿರುಗಿಸಲಾರದಷ್ಟು ಮಹತ್ವದ ಸ್ಥಾನವನ್ನು ವಿಶ್ವ ವೇದಿಕೆಯಲ್ಲಿ ರಷ್ಯಾ ಹೊಂದಿದೆ. ಅಂದರೆ, ರಷ್ಯಾವು ಒಂದು ಶಕ್ತಿಶಾಲಿ ಅರ್ಥವ್ಯವಸ್ಥೆಯನ್ನೂ ಮತ್ತು ಪ್ರಪಂಚದಾದ್ಯಂತ ಅನೇಕ ಸ್ನೇಹಿತರನ್ನೂ ಹೊಂದಿದೆ.

ಸಾಮ್ರಾಜ್ಯಶಾಹಿಗೆ ಸಂಬಂಧಿಸಿ ವಿಷಯವನ್ನು ಹೇಳುವುದಾದರೆ, ಈ ನಿರ್ಬಂಧಗಳ ಹೇರುವಿಕೆಯಲ್ಲಿ ಒಂದು ವೈರುಧ್ಯವಿದೆ. ಇದನ್ನು ಗಮನಿಸಬೇಕಾಗಿದೆ. ಈ ನಿರ್ಬಂಧಗಳು ಪರಿಣಾಮಕಾರಿಯಾಗುವುದು ಸಾಮ್ರಾಜ್ಯಶಾಹಿಯ ಶಕ್ತಿಯಿಂದಾಗಿಯೇ. ಉದಾಹರಣೆಗೆ, ವಿಶ್ವದ ವ್ಯಾಪಾರ–ವಹಿವಾಟುಗಳು ಪ್ರಧಾನವಾಗಿ ಅಮೆರಿಕದ ಡಾಲರ್ (ಅಥವಾ ಇತರ ಭದ್ರ ಕರೆನ್ಸಿಗಳು) ಮೂಲಕವೇ ಜರುಗುತ್ತವೆ. ಆದರೆ, ನಿರ್ಬಂಧಗಳನ್ನು ಹೇರಿದ ಪ್ರತಿ ಪ್ರಕರಣದಲ್ಲೂ, ನಿರ್ಬಂಧಗಳಿಗೆ ಒಳಗಾದ ದೇಶಗಳು ತಮಗೆ ಎದುರಾದ ಕಷ್ಟಕೋಟಲೆಯ ನಿವಾರಣೆಗಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುತ್ತವೆ ಮತ್ತು ಆ ಮೂಲಕವಾಗಿ ಸಾಮ್ರಾಜ್ಯಶಾಹಿಯ ಶಕ್ತಿಯನ್ನು ದುರ್ಬಲಗೊಳಿಸುತ್ತವೆ. ಸಾಮ್ರಾಜ್ಯಶಾಹಿಯ ಅಧಿಕಾರ–ಶಕ್ತಿಯನ್ನು ಅಭಿವ್ಯಕ್ತಿಸುವ ಈ ನಿರ್ಬಂಧಗಳು, ಅಂತಿಮವಾಗಿ, ಅವುಗಳನ್ನು ಹೇರಿದ ಅದೇ ಅಧಿಕಾರವನ್ನು ದುರ್ಬಲಗೊಳಿಸುವಲ್ಲಿ ಪರಿಣಮಿಸುತ್ತವೆ. ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳಂತಹ ಪರ್ಯಾಯ ವ್ಯವಸ್ಥೆಗಳನ್ನು ಏರ್ಪಡಿಸಿಕೊಳ್ಳುವ ಮೂಲಕ ನಿರ್ಬಂಧಗಳಿಗೆ ಒಳಗಾದ ದೇಶಗಳು ನಿರ್ಬಂಧಗಳ ಪರಿಣಾಮ ದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ, ಮತ್ತು ಹೆಚ್ಚು ಹೆಚ್ಚು ದೇಶಗಳು ನಿರ್ಬಂಧಗಳಿಗೆ ಈಡಾಗುತ್ತಿದ್ದಂತೆ, ಈ ಪರ್ಯಾಯ ವ್ಯವಸ್ಥೆಗಳೂ ಹೇರಳವಾಗಿ ಹುಟ್ಟಿಕೊಳ್ಳುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಿರ್ಬಂಧಗಳನ್ನು ಹೇರುವ ಪ್ರಕ್ರಿಯೆಯ ಪರಿಣಾಮವೇ ಪ್ರಸ್ತುತ ಅಸ್ತಿತ್ವದಲ್ಲಿರುವ ನವ–ಉದಾರವಾದಿ ಆಳ್ವಿಕೆಗೆ ಕಾರ್ಯತಃ ಒಂದು ಪರ್ಯಾಯ ಆಳ್ವಿಕೆಯನ್ನು ತರುತ್ತದೆ ಮತ್ತು ಆ ಮೂಲಕ ನಿರ್ಬಂಧಗಳು ಪರಿಣಾಮಕಾರಿಯಾಗದಂತೆ ಮಾಡುತ್ತದೆ. ನಿರ್ಬಂಧಗಳು ಪರಿಣಾಮ

ಪುಟ 14 ಕ್ಕೆ

ಕ್ರಿಪ್ಟೊ ಕರೆನ್ಸಿ ಕಾನೂನುಬದ್ಧವೋ ಕಾನೂನುಬಾಹಿರವೋ?...... ಪುಟ 10 ರಿಂದ

ನಿಷೇಧಿಸುವಾಗಲೇ, ಕ್ರಿಪ್ಟೋ ಕರೆನ್ಸಿಯ ಮೂಲ-ತಂತ್ರಜ್ಞಾನ ಮತ್ತುಅದರ ಬಳಕೆಗಳನ್ನುಉತ್ತೇಜಿಸಲು ಕೆಲವು ವಿನಾಯಿತಿಗಳಿಗೆ ಈ ಮಸೂದೆಯು ಅವಕಾಶ ನೀಡುತ್ತದೆ. ಆದರೆ, ಚಳಿಗಾಲದ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಈ ಮಸೂದೆಯನ್ನು ಮಂಡಿಸಲಾಗಿಲ್ಲ.

ವಿರೋಧಾಭಾಸದ ನಡೆ

ಫೆಬ್ರವರಿ 1, 2022 ರಂದು, ಬಜೆಟ್ ಭಾಷಣದ ಸಮಯದಲ್ಲಿ, ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಕ್ರಿಪ್ಟೋ ಕರೆನ್ಸಿಗೆ ಸಂಬಂಧಿಸಿದಂತೆ ಎರಡು ಪ್ರಸ್ತಾಪಗಳನ್ನು ಮಾಡಿದ್ದಾರೆ: 1. "ವರ್ಚುವಲ್, ಡಿಜಿಟಲ್ ಸ್ವತ್ತುಗಳ ವಹಿವಾಟುಗಳಲ್ಲಿ ಅಸಾಧಾರಣ ಹೆಚ್ಚಳವಾಗಿದೆ. ಈ ವಹಿವಾಟುಗಳ ಪ್ರಮಾಣ ಮತ್ತು ಆವರ್ತನವು ಇವುಗಳನ್ನು ನಿರ್ದಿಷ್ಟ ತೆರಿಗೆ ವ್ಯಾಪ್ತಿಯೊಳಗೆ ತರುವುದನ್ನು ಅವಶ್ಯಕಗೊಳಿಸಿದೆ. ಅದರಂತೆ, "ವರ್ಚುವಲ್, ಡಿಜಿಟಲ್ ತೆರಿಗೆಯಾಗಿ, ಯಾವುದೇ "ವರ್ಚುವಲ್, ಡಿಜಿಟಲ್ ಆಸ್ತಿಯ ವರ್ಗಾವಣೆಯಿಂದ ಬರುವ ಯಾವುದೇ ಆದಾಯಕ್ಕೆ ಶೇಕಡಾ 30ರ ದರದಲ್ಲಿ ತೆರಿಗೆ ವಿಧಿಸಲಾಗುವುದು ಎಂದು ನಾನು ಪ್ರಸ್ತಾಪಿಸುತ್ತೇನೆ."

2. "ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿಯ (ಸಿಬಿಡಿಸಿ) ಪರಿಚಯವು ಡಿಜಿಟಲ್ ಆರ್ಥಿಕತೆಗೆ ದೊಡ್ಡ ಉತ್ತೇಜನ ನೀಡುತ್ತದೆ. ಡಿಜಿಟಲ್ ಕರೆನ್ಸಿಯು ಹೆಚ್ಚು ಪರಿಣಾಮಕಾರಿಯೂ ಮತ್ತು ಕರೆನ್ಸಿ ನಿರ್ವಹಣಾ ವ್ಯವಸ್ಥೆಯ ಖರ್ಚು ಕಡಿಮೆಯೂ ಆಗುತ್ತದೆ. ಆದ್ದರಿಂದ, 2022-23 ರಿಂದ ಭಾರತೀಯ ರಿಸರ್ವ್ ಬ್ಯಾಂಕ್, ಬ್ಲಾಕ್ ಚೈನ್ ಮತ್ತು ಇತರ ತಂತ್ರಜ್ಞಾನಗಳನ್ನು ಬಳಸಿಕೊಂಡು ಡಿಜಿಟಲ್ ರೂಪಾಯಿಯನ್ನು ಪರಿಚಯಿಸಲು ಪ್ರಸ್ತಾಪಿಸಲಾಗಿದೆ.

ಕೇಂದ್ರ ಸರ್ಕಾರದ ಈ ವಿರೋಧಾಭಾಸದ ನಡೆಯಿಂದ ಕ್ರಿಪ್ಟೋ ಕರೆನ್ಸಿಯು ಕಾನೂನು ಬದ್ಧವೇ ಅಥವಾ ಕಾನೂನು ಬಾಹಿರವೇ ಎನ್ನುವ ವಿಷಯವು ಇನ್ನಷ್ಟು ಗೊಂದಲಕ್ಕೆ ಈಡಾಗಿದೆ.ಕ್ರಿಪ್ಟೋ ಕರೆನ್ಸಿಯ ಮೇಲೆ ವ್ಯವಹರಿಸುವುದನ್ನು ನಿಷೇಧಿಸುವ ಆರ್‌ಬಿಐನ ಸುತ್ತೋಲೆಯನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿದ್ದರೂ, ಇದನ್ನು ನಿಭಾಯಿಸಲು ಯಾವುದೇ ದೃಢ ಪ್ರಸ್ತಾಪವು ಸರ್ಕಾರ/ಆರ್‌ಬಿಐ ಬಳಿ ಇಲ್ಲ. ಭಾರತದಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಖಾಸಗಿ ಕ್ರಿಪ್ಟೋ ಕರೆನ್ಸಿ ವಿನಿಮಯಗಳ ಸಂಖ್ಯೆಯು ಹೆಚ್ಚುತ್ತಿರುವಾಗ, ಕೇಂದ್ರ ಸರ್ಕಾರದ ಬಳಿಯಾವುದೇ ಅಧಿಕೃತ ದತ್ತಾಂಶವಿಲ್ಲ. ಈ ವಿನಿಮಯಗಳಿಗೆ ಸಂಬಂಧಿಸಿದ ಹೂಡಿಕೆದಾರರ ಸಂಖ್ಯೆಯ ಬಗ್ಗೆ ಸರ್ಕಾರದ ಬಳಿ ಯಾವುದೇ ಅಧಿಕೃತ ಮಾಹಿತಿ ಇಲ್ಲ. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರಿಪ್ಟೋ ಕರೆನ್ಸಿ ವಿನಿಮಯಗಳ ಸಂಖ್ಯೆ ಮತ್ತುಅವುಗಳೊಂದಿಗೆ ಸಂಪರ್ಕ ಹೊಂದಿರುವ ಹೂಡಿಕೆದಾರರ ಸಂಖ್ಯೆಯ ಬಗ್ಗೆ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಜುಲೈ 27, 2021 ರಂದು ರಾಜ್ಯ ಸಭೆಯಲ್ಲಿ ಮಂಡಿಸಲಾದ ಲಿಖಿತ ಉತ್ತರದಲ್ಲಿ: "ಈ ಮಾಹಿತಿಯನ್ನು ಸರ್ಕಾರ ಸಂಗ್ರಹಿಸುವುದಿಲ್ಲ". ಎಂಬ ಜಾರಿಕೆಯ ಉತ್ತರ ನೀಡಿರುತ್ತಾರೆ.

ಗಂಭೀರ ಪ್ರಶ್ನೆಗಳು

ಕ್ರಿಪ್ಟೋ ಕರೆನ್ಸಿ ವಿನಿಮಯ ಮತ್ತು ಭಾರತದಲ್ಲಿ ಹೂಡಿಕೆದಾರರ ಸಂಖ್ಯೆಯ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲದಿದ್ದಾಗ, ಆ ವ್ಯವಹಾರಗಳ ಲಾಭಗಳ ಮೇಲೆ ಶೇಕಡಾ 30%ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪವು ಕೇವಲ ಕಾಗದದ ಮೇಲೆ ಉಳಿದಂತಾಗುವುದಿಲ್ಲವೇ? ಕಳೆದ ಚಳಿಗಾಲದ ಅಧಿವೇಶನದವರೆಗೂ ನಿಷೇಧಿಸಲು ಉದ್ದೇಶಿಸಿದ್ದ ವರ್ಚುವಲ್ ಕರೆನ್ಸಿಯನ್ನು ಈ ತೆರಿಗೆ ಪ್ರಸ್ತಾಪದಿಂದ ಕಾನೂನು ಬದ್ಧಗೊಳಿಸಿದಂತಾಗುವುದಿಲ್ಲವೇ? ಖಾಸಗಿ ಆಟಗಾರರು ಬಳಸುವ "ಬ್ಲಾಕ್ ಚೈನ್ ತಂತ್ರಜ್ಞಾನ ಮತ್ತು ಇತರ ತಂತ್ರಜ್ಞಾನಗಳನ್ನು" ಬಳಸಿಕೊಂಡು ಆರ್‌ಬಿಐ ಡಿಜಿಟಲ್ ರೂಪಾಯಿಯನ್ನು ಪರಿಚಯಿಸುವುದಾಗಿ ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ. ಈ ಅಸ್ಪಷ್ಟ ಉದ್ದೇಶದ ಹೇಳಿಕೆಯು ಡಿಜಿಟಲ್ ರೂಪಾಯಿಯ ವಿಶ್ವಾಸಾರ್ಹತೆಯ ಬಗ್ಗೆ ಸಂಶಯ ಮೂಡಿಸುತ್ತದೆ. ಮಾತ್ರವಲ್ಲ, ಕಾನೂನು-ಬಾಹಿರ ಚಟುವಟಿಕೆಗಳಿಗೆ ಇದು ಬಳಕೆ ಆಗುವುದಿಲ್ಲವೆಂಬ ಖಾತ್ರಿ ಎಲ್ಲಿದೆ? ವಂಚನೆಗೆ ಒಳಗಾಗದಂತೆ ರಕ್ಷಣೆ ನೀಡುವ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆಯೇ ಎಂಬ ಗಂಭೀರ ಪ್ರಶ್ನೆಗಳಿಗೆ ಎಡೆ ಮಾಡಿಕೊಡುತ್ತದೆ.

ಕಳೆದ ವರ್ಷ, ಕ್ರಿಪ್ಟೋ ಕರೆನ್ಸಿಯನ್ನು ಚೀನಾ ನಿಷೇಧಿಸಿತು. ವಿವಿಧ ಹಂತಗಳಲ್ಲಿ ಈ ನಿಷೇಧವನ್ನು ಜಾರಿಗೊಳಿಸಿತು. ಮೊದಲನೆಯದಾಗಿ, ಮೇ ತಿಂಗಳಲ್ಲಿ ಹಣಕಾಸು ಸಂಸ್ಥೆಗಳು ಯಾವುದೇ ಕ್ರಿಪ್ಟೋ ವಹಿವಾಟುಗಳಲ್ಲಿ ತೊಡಗುವುದನ್ನು ನಿಷೇಧಿಸಿತು. ನಂತರ, ಅದು ಜೂನ್‌ನಲ್ಲಿ ಎಲ್ಲಾ ದೇಶೀಯ ಕ್ರಿಪ್ಟೋ ವ್ಯವಹಾರಗಳನ್ನು ನಿಷೇಧಿಸಿತು ಮತ್ತು ಅಂತಿಮವಾಗಿ ಸೆಪ್ಟೆಂಬರ್ 2021ರಲ್ಲಿ, ಕ್ರಿಪ್ಟೋ ಕರೆನ್ಸಿಗಳನ್ನು ಸಾರಾಸಗಟಾಗಿ ನಿಷೇಧಿಸಿತು. ಪರ್ಯಾಯವಾಗಿ, ಪೀಪಲ್ಸ್ ಬ್ಯಾಂಕ್ ಆಫ್ ಚೀನಾ, ಡಿಜಿಟಲ್ ಯುವಾನ್ ಹೆಸರಿನಲ್ಲಿ ವರ್ಚುವಲ್ ಕರೆನ್ಸಿಯನ್ನು ಬಿಡುಗಡೆ ಮಾಡಿತು. ಚೀನಾ ಮಾತ್ರವಲ್ಲದೆ, ಇತರ ಎಂಟು ದೇಶಗಳು – ಅಲ್ಜೀರಿಯಾ, ಬಾಂಗ್ಲಾದೇಶ, ಈಜಿಪ್ಟ್, ಇರಾಕ್, ಮೊರೊಕ್ಕೊ, ನೇಪಾಳ, ಕತಾರ್ ಮತ್ತು ಟುನೀಷಿಯಾ ದೇಶಗಳು ಈ ಡಿಜಿಟಲ್ ಕರೆನ್ಸಿಗಳ ಮೇಲೆ ಸಂಪೂರ್ಣ ನಿಷೇಧ ಹೇರಿವೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಡೆಪ್ಯುಟಿ ಗವರ್ನರ್, ಟಿ. ರಬಿಶಂಕರ್ ಅವರು, ದೇಶದಲ್ಲಿ ಕ್ರಿಪ್ಟೋ ಕರೆನ್ಸಿಗಳ ಮೇಲೆ ಸಂಪೂರ್ಣ ನಿಷೇಧಕ್ಕೆ ಕರೆ ನೀಡಿದ್ದಾರೆ. "ಕ್ರಿಪ್ಟೋ ಕರೆನ್ಸಿಗಳನ್ನು ಕರೆನ್ಸಿ, ಆಸ್ತಿ ಅಥವಾ ಸರಕು ಎಂದು ವ್ಯಾಖ್ಯಾನಿಸಲು ಬರುವುದಿಲ್ಲ. ಅವುಗಳಿಗೆ ಯಾವುದೇ ಆಂತರಿಕ ಮೌಲ್ಯವಿಲ್ಲ; ಅವು ಪೊಂಜಿ(ಚೀಟಿ ವ್ಯವಹಾರ) ಯೋಜನೆಗಳಿಗೆ ಹೋಲುತ್ತವೆ ಮತ್ತು ಬಹುಶಃ ಇನ್ನೂ ಕೆಟ್ಟದಾಗಿರಬಹುದು" ಎಂದು ಟಿ. ರಬಿಶಂಕರ್ ಅವರು ಫೆಬ್ರವರಿ 14, 2022ರಂದು ಭಾರತೀಯ ಬ್ಯಾಂಕುಗಳ ಸಂಘವು ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ಹೇಳಿದರು. "ಕ್ರಿಪ್ಟೋ-ತಂತ್ರಜ್ಞಾನವು ಸರ್ಕಾರದ ನಿಯಂತ್ರಣಗಳನ್ನು ತಪ್ಪಿಸುವ ತತ್ವಾಧಾರಿತವಾಗಿದೆ ಎಂಬುದನ್ನು ನಾವು ನೋಡಿದ್ದೇವೆ. ನಿಯಂತ್ರಿತ ಹಣಕಾಸು ವ್ಯವಸ್ಥೆಯನ್ನು ಕಡೆಗಣನೆ ಮಾಡಲು ಕ್ರಿಪ್ಟೋ ಕರೆನ್ಸಿಗಳನ್ನು ನಿರ್ದಿಷ್ಟವಾಗಿ ಅಭಿವೃದ್ಧಿಪಡಿಸಲಾಗಿದೆ. ಅದು ಕರೆನ್ಸಿ ವ್ಯವಸ್ಥೆ, ವಿತ್ತೀಯ ಪ್ರಾಧಿಕಾರ, ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಆರ್ಥಿಕತೆಯನ್ನು ನಿಯಂತ್ರಿಸುವ ಸರ್ಕಾರದ ಸಾಮರ್ಥ್ಯವನ್ನು ಹಾಳುಮಾಡಬಹುದು. 2021 ರಲ್ಲಿ ಕ್ರಿಪ್ಟೋ ಕರೆನ್ಸಿಗಳನ್ನು ಬಳಕೆಮಾಡಿಕೊಂಡು ಎಸಗಿದ ಅಪರಾಧಗಳ ಒಟ್ಟು ಮೌಲ್ಯವು 14 ಬಿಲಿಯನ್ ಡಾಲರುಗಳು ಎಂದು ಅಂದಾಜಿಸಲಾಗಿದೆ" ಎಂಬುದನ್ನು ಜನವರಿ 6, 2022ರ ವಾಲ್‌ಸ್ಟ್ರೀಟ್ ಜರ್ನಲ್ ಅನ್ನು ಉಲ್ಲೇಖಿಸಿ, ರಬಿ ಶಂಕರ್ ಹೇಳಿದ್ದಾರೆ.

ಕ್ರಿಪ್ಟೋ ಕರೆನ್ಸಿಗಳನ್ನು ನಿಭಾಯಿಸುವ ವಿಷಯದಲ್ಲಿ ಕೇಂದ್ರ ಸರ್ಕಾರದ ಇದುವರೆಗಿನ ನಿಲುಮೆಗಳು ಯಾವ ಭರವಸೆಯನ್ನೂ ಮೂಡಿಸಿಲ್ಲ. ಚುನಾವಣಾ ಬಾಂಡ್‌ನಂಥಹ ಪಾರದರ್ಶಕವಲ್ಲದ ಚುನಾವಣಾ ದೇಣಿಗೆ ವಿಧಾನದ ಪೂರ್ಣ ಫಲಾನುಭವಿ ಬಿಜೆಪಿ ಸರ್ಕಾರದಿಂದ ಸುರಕ್ಷಿತ ಮತ್ತು ಕಾಲ ಪರೀಕ್ಷಿತ ತಂತ್ರಜ್ಞಾನವನ್ನು ಬಳಸಿಕೊಂಡು ಆರ್‌ಬಿಐ ಮೂಲಕ ಡಿಜಿಟಲ್ ರೂಪಾಯಿಯನ್ನು ಪರಿಚಯಿಸಿ, ಎಲ್ಲಾ ಖಾಸಗಿ ವರ್ಚುವಲ್ ಕರೆನ್ಸಿಗಳನ್ನು ನಿಷೇಧಿಸುವ ದೃಢವಾದ ನಿಲುವನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ?

ಅನೌಪಚಾರಿಕ ವಲಯ ಕಿರಿದಾಗುತ್ತಿದೆ ಎಂಬುದು ಕ್ರೂರ ಕುಚೋದ್ಯ......... ಪುಟ 11 ರಿಂದ

ಇಂತಹ ಸನ್ನಿವೇಶದಲ್ಲಿ, ಪ್ರಮಾಣಿತ ಮಾರುಕಟ್ಟೆಗಳಲ್ಲಿ ಹೆಚ್ಚಿನ ಪಾಲನ್ನು ಪಡೆಯಲು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದೊಂದೇ ದಾರಿಯಾಗಿರುವಾಗ ಮತ್ತು ಉದಾರೀಕರಣಗೊಳಿಸುವ ಆಳ್ವಿಕೆಯಲ್ಲಿ ಉತ್ಪಾದನೆಗೆ ಅಗತ್ಯವಾದ ಲಾಗುವಾಡುಗಳ ಬೆಲೆಗಳ ಮೇಲೆ ಸ್ಥಳೀಯ ಗುತ್ತೇದಾರಿಗಳಿಗೆ ನಿಯಂತ್ರಣವಿಲ್ಲದಿರುವಾಗ, ಜಾಗತಿಕ ಮಾರುಕಟ್ಟೆಯಲ್ಲಿ 'ಸ್ಪರ್ಧಾತ್ಮಕ'ವಾಗಿ ಉಳಿದುಕೊಳ್ಳಲು ಶ್ರಮಿಕರ ಕೂಲಿ ಮತ್ತು ಹಕ್ಕುಗಳು ದಾಳಿಗೆ ಈಡಾಗಲೇ ಬೇಕಾಗುತ್ತವೆ. ಇಂತಹ ಸಂದರ್ಭದಲ್ಲಿ "ಅನೌಪಚಾರಿಕತೆ"ಯು ಹೆಚ್ಚಿನ ಶೋಷಣೆಗೆ ಪೂರ್ವಷರತ್ತಾಗಿ ಗೋಚರಿಸುತ್ತದೆ; ಕಾರ್ಮಿಕರ ಎಲ್ಲಾ ಹಕ್ಕುಗಳು ಕಾನೂನುಬದ್ಧತೆಯನ್ನು ಕಳಕೊಳ್ಳುತ್ತವೆ. ಇದರಿಂದಾಗಿಯೇ ಅನೌಪಚಾರಿಕತೆಯು ಅಥವಾ ಶ್ರಮಿಕನ ಅಪಮೌಲೀಕರಣ ಇವತ್ತಿನ ಬಂಡವಾಳ ಶೇಖರಣೆಗೆ ಆಧಾರಸ್ತಂಭವಾಗುತ್ತದೆ.

ಭಾರತಕ್ಕೆ ಸಂಬಂಧಪಟ್ಟಂತೆ, ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆಯ ಪ್ರಕಾರ ಕಾರ್ಖಾನೆಗಳ ಸರಾಸರಿ ಉದ್ಯೋಗ ಗಾತ್ರವು ಇಳಿಯುತ್ತ ಬಂದಿದೆ, ಉತ್ಪಾದನೆಯು ಉಪಗುತ್ತಿಗೆ (ಸಬ್‌ಕಾಂಟ್ರ್ಯಾಕ್ಟ್) ಮತ್ತು ಹೊರಗುತ್ತಿಗೆ ಮೇಲೆಯೇ ಹೆಚ್ಚೆಚ್ಚು ಅವಲಂಬಿತವಾಗುತ್ತಿದೆ ಮತ್ತು ಭಾರತದಲ್ಲಿನ ಕಾರ್ಖಾನೆಗಳಲ್ಲಿ ದುಡಿಯುತ್ತಿರುವವರಲ್ಲಿ ಮೂರನೇ ಒಂದಕ್ಕಿಂತಲೂ ಹೆಚ್ಚು ಗುತ್ತಿಗೆ ಕಾರ್ಮಿಕರಾಗಿದ್ದಾರೆ. ಆದ್ದರಿಂದ, ಬಂಡವಾಳಕ್ಕೆ ಕಾರ್ಮಿಕ ಕಾನೂನುಗಳನ್ನು ತಮಗೆ ಬೇಕಾಗುವಂತೆ ಸಡಿಲಗೊಳಿಸುವಂತಿರುವ, ತಮ್ಮ ಮನಸ್ಸಿಗೆ ಬಂದಂತೆ ಕಾರ್ಮಿಕರನ್ನು ಶೋಷಣೆ ಮಾಡುವ ಸ್ವಾತಂತ್ರ್ಯವನ್ನು ಅನುಭವಿಸಬಹುದಾದ, ಆದರೆ ಅದೇ ಸಮಯದಲ್ಲಿ ಶೋಷಣೆ ಹೆಚ್ಚಾದಂತೆಲ್ಲಾ ಸಂಭವನೀಯ ಅತೃಪ್ತಿಯನ್ನು ಶಮನಗೊಳಿಸಲು ಸರ್ಕಾರಿ ಬೊಕ್ಕಸದಿಂದ ಅಲ್ಪ-ಸ್ವಲ್ಪ ಹಣವನ್ನು ಸಾಮಾಜಿಕ ಭದ್ರತಾ ಸೌಲಭ್ಯದ ಹೆಸರಿನಲ್ಲಿ ವರ್ಗಾಯಿಸಬಹುದಾದ ಒಂದು ವ್ಯವಸ್ಥೆ ಬೇಕಾಗುತ್ತದೆ. ಒಂದರ್ಥದಲ್ಲಿ, ಸರ್ಕಾರವು ಶ್ರಮಿಕರನ್ನು ಶೋಷಿಸಲು ಬಂಡವಾಳಗಾರನಿಗೆ ವ್ಯಕ್ತಿಗತವಾಗಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ; ಪೈಪೋಟಿಯ ಹೆಸರಿನಲ್ಲಿ ಕಾರ್ಮಿಕರ ಸೇವಾ ನಿಯಮಗಳಿಗೆ ಸಂಬಂಧಪಟ್ಟ ಎಲ್ಲಾ ಕಾನೂನಾತ್ಮಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತದೆ, ಆದರೆ ಅದೇ ಸಮಯದಲ್ಲಿ ವ್ಯವಸ್ಥೆ ಸ್ಫೋಟಗೊಳ್ಳಬಾರದು ಎಂಬ ಇಡೀ ಬಂಡವಾಳಶಾಹಿ ವರ್ಗದ ಸಾಮೂಹಿಕ ಕಾಳಜಿಯನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಇದರಿಂದಾಗಿ, ಪ್ರಸಕ್ತ ಬಂಡವಾಳಶಾಹೀ ಅಭಿವೃದ್ಧಿಯ ಘಟ್ಟವು ಸಾರಭೂತವಾಗಿ ಅನೌಪಚಾರಿಕತೆಯ ಮೇಲೆಯೇ ಅವಲಂಬಿತವಾಗಿರುತ್ತದೆ; ಆದರೆ ಔಪಚಾರಿಕ ಉದ್ಯೋಗದ ಕಲ್ಪನೆಯನ್ನು ಮತ್ತು ಅಂತಹ ಕೆಲಸದ ಗುತ್ತಿಗೆಯೊಂದಿಗೆ ಬರುವ ಸಂಬಂಧಿತ ಹಕ್ಕುಗಳನ್ನು ದುರ್ಬಲಗೊಳಿಸುವ ಮೂಲಕ ಅದನ್ನು ಮರೆಮಾಚುತ್ತದೆ.

ಆದ್ದರಿಂದ, ಬಂಡವಾಳ-ಶ್ರಮದ ಸಂಬಂಧಗಳ ಸ್ವರೂಪದ ಬಗ್ಗೆ ಮಾತಾಡದೆ, ಹಾಗೂ ನಿರೂಪಣೆಗಳ ಮಾಯಾಜಾಲದ ಮೂಲಕ ಶ್ರಮಿಕರ ಹಕ್ಕುಗಳನ್ನು ಕ್ಷುಲ್ಲಕಗೊಳಿಸುವ ಬದಲು, ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವುದು, ನಿರ್ದಿಷ್ಟವಾಗಿ, ಹೊಸ ಉದ್ಯೋಗ ವಲಯಗಳಲ್ಲಿ ಹಕ್ಕುಗಳನ್ನು ಸ್ಥಾಪಿಸುವುದು ಬಹಳ ಮುಖ್ಯವಾಗಬೇಕು ಮತ್ತು ಅದರೊಂದಿಗೇ, ಸಾಮಾಜಿಕ ಭದ್ರತೆಯ ಸಾರಭೂತ ಅಂಶಗಳಿಗಾಗಿ ಮತ್ತು ಆದಾಯ ರಕ್ಷಣೆಗಾಗಿ ಹೋರಾಟವನ್ನೂ ಮಾಡಬೇಕಾಗುತ್ತದೆ; ಅದಕ್ಕೆ ಹಣಕಾಸನ್ನು ಒದಗಿಸಲು ಈಗಿನ ಸಡಿಲವಾದ ಕಾರ್ಮಿಕ ಕಾನೂನುಗಳ ಮೂಲಕ ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡಲು ಮುಕ್ತ ಅವಕಾಶ ಪಡೆದಿರುವ ಶ್ರೀಮಂತರಿಂದ ಹೆಚ್ಚಿನ ತೆರಿಗೆ ವಸೂಲಿ ಮಾಡಬೇಕು. ■

ನವ-ಉದಾರವಾದಕ್ಕೇ ಮುಳುವಾಗುತ್ತಿರುವ..... ಪುಟ 13 ರಿಂದ

ಕಾರಿಯಾಗಿರಬೇಕು ಎಂದಾದರೆ, ಪ್ರಸ್ತುತ ನವ ಉದಾರ ವ್ಯವಸ್ಥೆಯ ಮುಂದುವರಿಕೆ ಅಗತ್ಯವಾಗುತ್ತದೆ. ಆದರೆ, ನಿರ್ಬಂಧಗಳಿಂದ ಹೊರಬರಲು ಕಂಡುಕೊಂಡ ಪರ್ಯಾಯಗಳು ನಿರ್ಬಂಧಗಳನ್ನು ಹೇರುವ ನವ ಉದಾರವಾದಿ ಆಳ್ವಿಕೆಯ ಮುಂದುವರಿಕೆಯನ್ನು ಅಲ್ಲಗಳೆಯುತ್ತವೆ.

ಈ ವೈರುಧ್ಯವು ಮತ್ತೊಂದು ಆಧಾರಭೂತ ವೈರುಧ್ಯದಿಂದ ಹುಟ್ಟಿಕೊಂಡಿದೆ. ಈ ವಿದ್ಯಮಾನವನ್ನು ಹೀಗೆ ವಿವರಿಸಬಹುದು: ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ನಿರೂಪಿಸುವ ಪ್ರಸ್ತುತ ಆರ್ಥಿಕ ಏರ್ಪಾಟನ್ನು (ನವ ಉದಾರವಾದವನ್ನು) ತರ್ಕ ಬದ್ಧವಾದದ್ದೆಂದು ಬಿಂಬಿಸಿ, ದೇಶ ದೇಶಗಳು ಅದನ್ನು ಒಪ್ಪಿಕೊಳ್ಳುವಂತೆ ಮಾಡಲಾಗಿದೆ ಮತ್ತು ಅದರ ಪರವಾಗಿ ಮಂಡಿಸಲಾದ ವಾದವು ಅದರ ಆರ್ಥಿಕ ಅಪೇಕ್ಷಣೀಯತೆಯ ಮೇಲೇ ಗಮನ ಕೇಂದ್ರೀಕರಿಸಿದೆ. ಆದರೆ, ವಾಸ್ತವವಾಗಿ, ಅದು ಸಾಮ್ರಾಜ್ಯಶಾಹಿಯ ಶಕ್ತಿಯನ್ನು ಬಲಪಡಿಸಲು ಉದ್ದೇಶಿಸಿದ ವ್ಯವಸ್ಥೆಯಾಗಿದೆ ಮತ್ತು ಅದರ ಶಕ್ತಿಯನ್ನು(ಅಂದರೆ, ನಿರ್ಬಂಧಗಳನ್ನು) ಸಾಮ್ರಾಜ್ಯಶಾಹಿಯ ಕೋಪಕ್ಕೆ ಒಳಗಾದ ದೇಶಗಳ ಮೇಲೆ ಆರ್ಥಿಕವಲ್ಲದ ಕಾರಣಗಳ ಮೇಲೆ ಬಳಸಲಾಗುತ್ತಿದೆ. ಉಕ್ರೇನ್ ನ್ಯಾಟೋದ ಸದಸ್ಯನಾಗಬೇಕೆ ಎಂಬುದು, ಅಂತಾರಾಷ್ಟ್ರೀಯ ವ್ಯವಸ್ಥೆಯೇ ವ್ಯಾಖ್ಯಾನಿಸಿರುವಂತೆ, ಅರ್ಥಶಾಸ್ತ್ರದ ವ್ಯಾಪ್ತಿಯಿಂದ ಹೊರಗುಳಿಯುವ ವಿಷಯ. ಹಾಗಾಗಿ, ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಗೆ ಸಂಬಂಧಿಸದ ವಿಷಯಗಳನ್ನು ಆಧರಿಸಿ ನಿರ್ಬಂಧಗಳನ್ನು ಹೇರುವ ಮೂಲಕ ಸಾಮ್ರಾಜ್ಯಶಾಹಿಯು ಮಧ್ಯಪ್ರವೇಶಿಸಿದಾಗ, ಅದು ತನ್ನ ನಿಜ ಸ್ವರೂಪವನ್ನು ಮತ್ತು ಇಡೀ ವಿದ್ಯಮಾನವು ತಾನೇ ರಚಿಸಿದ ಒಂದು ನಾಟಕ ಎಂಬುದನ್ನು ಮತ್ತು ಅದು ತನ್ನ ಪರವಾಗಿ ಮಂಡಿಸಿದ ಆರ್ಥಿಕ ವಾದಗಳ ಟೊಳ್ಳುತನವನ್ನು ಬಹಿರಂಗಪಡಿಸುತ್ತದೆ. ಭದ್ರತೆಯ ಪ್ರಶ್ನೆಗಳ ಬಗ್ಗೆ ಅಥವಾ ವಿದೇಶಾಂಗ ನೀತಿಯ ಬಗ್ಗೆ ಅಥವಾ ನ್ಯಾಟೋ ಮತ್ತು ಇತರ ಮಹತ್ವದ್ದಾದ ವಿಷಯಗಳ ಬಗ್ಗೆ ಸಾಮ್ರಾಜ್ಯಶಾಹಿಯೊಂದಿಗೆ ಸಂಘರ್ಷಕ್ಕಿಳಿಯುವ ದೇಶಗಳು ಪ್ರಸಕ್ತ ಅಂತರರಾಷ್ಟ್ರೀಯ ವ್ಯವಸ್ಥೆಯಡಿಯಲ್ಲಿ ಆರ್ಥಿಕವಾಗಿ ಬಲಿಪಶುಗಳಾಗುತ್ತಿರುವುದನ್ನು ನಾವು ಕಾಣುತ್ತೇವೆ. ಹಾಗಾಗಿ, ಈ ಇಡೀ ವಿದ್ಯಮಾನದ ಫಲಿತಾಂಶವೆಂದರೆ, ಪ್ರಸಕ್ತ ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ವಿರುದ್ಧ ದೇಶ ದೇಶಗಳು ದಂಗೆ ಏಳುವುದು ಅನಿವಾರ್ಯವಾಗುತ್ತದೆ.

ಆದ್ದರಿಂದ, ಇಂದು ನಾವು ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ವೈರುಧ್ಯಗಳು ಹೊರ ಬಿದ್ದಿರುವುದನ್ನು ಕಾಣುತಿದ್ದೇವೆ. ನಿರ್ದಿಷ್ಟವಾಗಿ ಇದು, ನವ-ಉದಾರವಾದವು ಮುಂದೆ ದಾರಿ ಕಾಣದಂತಹ ಪರಿಸ್ಥಿತಿಯಲ್ಲಿ ಬಂದು ನಿಂತಿದೆ ಎಂಬುದನ್ನು ಪ್ರದರ್ಶಿಸುತ್ತಿದೆ. ಈ ಎಲ್ಲದರ ಪರಿಣಾಮವಾಗಿ ಉಂಟಾದ ಒಂದು ಸಂದಿಗ್ಧ ಸನ್ನಿವೇಶವೆಂದರೆ, ಒಂದು ಕಡೆಯಲ್ಲಿ ಈ ವಿದ್ಯಮಾನವು ವಿಶ್ವದ ಅರ್ಥವ್ಯವಸ್ಥೆಯ ದೀರ್ಘಕಾಲೀನ ಬಿಕ್ಕಟ್ಟಿನ ರೂಪದಲ್ಲಿ ಕಾಣಿಸಿಕೊಂಡರೆ, ಮತ್ತೊಂದೆಡೆಯಲ್ಲಿ ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಒಂದು ವಕ್ರ ರೂಪದಲ್ಲಿ ಅಮೆರಿಕಾದ ಪ್ರಾಬಲ್ಯಕ್ಕೆ ಸವಾಲಾಗಿ ಕಾಣಿಸಿಕೊಂಡಿದೆ. ●

ಸಾರ್ವಜನಿಕ ಉದ್ಯಮಗಳ ಖಾಸಗಿರಣ ನಿಲ್ಲಿಸಿ..... ಪುಟ 7 ರಿಂದ

ಬಂಡವಾಳವನ್ನು ಆಕರ್ಷಿಸಿದ್ದು

ಸರ್ಕಾರಕ್ಕೆ ತೆರಿಗೆ ಮತ್ತು ಲಾಭದ ರೂಪದಲ್ಲಿ ಭಾರೀ ಪ್ರಮಾನದ ಹಣ ಪಾವತಿ ಮಾಡಿದ್ದು

ಜತೆಗೆ ಸಾಮಾಜಿಕ ಹೊಣೆಗಾರಿಗೆ ನಿರ್ವಹಣೆ ಮೊದಲಾದ ಕೊಡುಗೆಗಳನ್ನು ನಿರಾಕರಿಸವಂತಿಲ್ಲ... ಖಾಸಗಿಕರಣವೆಂದರೆ ಬಂಗಾರದ ಮೊಟ್ಟೆಗಳನ್ನು ಇಡುವ ಕೋಳಿಗಳನ್ನೇ ನಾಶಪಡಿಸುವುದಕ್ಕೆ ಸಮವಾಗಿದೆ.

ಖಾಸಗಿಕರಣವೆಂದರೆ ಇದು ಸಾರ್ವಜನಿಕ ಸಂಪತ್ತನ್ನು ಜನರ ಹಣದಿಂದ ಅಭಿವೃದ್ಧಿಪಡಿಸಿ ದೇಶಿಯ ಹಾಗೂ ವಿದೇಶಿ ಖಾಸಗಿಯವರ ಕೈಗೆ ಒಪ್ಪಿಸುವ ತಂತ್ರವಲ್ಲದೆ ಬೇರೆನೂ ಅಲ್ಲ. ಇದು ಬಂಡವಾಳಿಗರಿಗೆ ದೇಶದ ಸಂಪತ್ತನ್ನು ಧಾರೆ ಎರೆಯುವ ನವ ಉದಾರವಾದದ ಅಂತರ್ಗತ ನೀತಿಯ ಭಾಗವೇ ಆಗಿದೆ. 'ಸರ್ಕಾರವು ವ್ಯಾಪಾರ ಕ್ಷೇತ್ರದಲ್ಲಿ ಯಾವುದೇ ವ್ಯವಹಾರ ಮಾಡುವುದಿಲ್ಲ' ಎನ್ನುವುದರ ಮೂಲಕ ಮೋದಿಯವರು ನೈಜ ಉದ್ದೇಶ ಏನೆಂಬುದನ್ನು ಸ್ಪಷ್ಟಪಡಿಸಿ ತಮ್ಮ ಮುಖವಾಡವನ್ನು ಪ್ರದರ್ಶಿಸಿದ್ದಾರೆ.

ಸಾರ್ವಜನಿಕ ಉದ್ಯಮಗಳ ಮಾರಾಟ ನಂತರದ ಪರಿಣಾಮಗಳು:

ಬೆಳೆದ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡಬೇಕೆಂಬುದು ನವಉದಾರವಾದಿ ಕಾಲಘಟ್ಟದ ಸದೃಡವಾದ ನೀತಿಯಾಗಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ತನ್ನ ಹತ್ತು ವರ್ಷಗಳ ಆಡಳಿತದಲ್ಲಿ 1.08 ಲಕ್ಷ ಕೋಟಿ ಸಾರ್ವಜನಿಕ ಉದ್ಯಮಗಳ ಸ್ವತ್ತುಗಳನ್ನು ಮಾರಾಟ ಮಾಡಿತ್ತು. ಆದರೆ ಇದೇ ನೀತಿಯನ್ನು ಈಗಿನ ಮೋದಿ ಸರ್ಕಾರ ಮತ್ತೊಂದು ಹೊಸ ಹಂತಕ್ಕೆ ಕೊಂಡ್ಯೊಯ್ದು ಕಾಂಗ್ರೆಸ್ ಸರ್ಕಾರ ಹತ್ತು ವರ್ಷಗಳಲ್ಲಿ ಮಾರಾಟ ಮಾಡಿದ್ದಕ್ಕಿಂತ ನಾಲ್ಕು ಪಟ್ಟು ಹೆಚ್ಚಾಗಿ ಸಾರ್ವಜನಿಕ ಉದ್ಯಮಗಳ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ.

ಮೋದಿ ಸರ್ಕಾರದ ಈ ಎಗ್ಗಿಲ್ಲದ ಖಾಸಗಿಕರಣದ ತೀವ್ರತೆ ಯಾವ ಪ್ರಮಾಣದಲ್ಲಿ ಮುಂದುವರೆದಿದೆ ಎಂದರೆ ಮೂಲಭೂತ ಸೌಕರ್ಯ ಕ್ಷೇತ್ರಗಳಾದ ರಸ್ತೆ, ರೈಲು, ಹಡಗು ತಾಣಗಳು, ವಿಮಾನ ನಿಲ್ದಾಣಗಳು, ತೈಲೋತ್ಪನ್ನ ಮತ್ತು ಅನಿಲ ಸಾಗಣೆ ವಿದ್ಯುತ್ ಲೈನ್‌ಗಳು, ಕಲ್ಲಿದ್ದಲು ಗಣಿಗಳು, ದೂರಸಂಪರ್ಕದ ಸೊತ್ತುಗಳು, ವೇರ್ ಹೌಸ್‌ಗಳು, ರಿಯಲ್ ಎಸ್ಟೇಟ್, ಕ್ರೀಡಾಂಗಣ ಹಾಗೂ ಕ್ರೀಡಾ ಸಂಕೀರ್ಣಗಳನ್ನು ರಾಷ್ಟ್ರೀಯ ನಗದೀಕಣ ಪೈಪ್ ಲೈನ್ ಹೆಸರಿನಲ್ಲಿ ಅಕ್ಷರಶಃ ಉಚಿತವಾಗಿ ನೀಡಿ ಖಾಸಗಿಕರಣಗೊಳಿಸಲಾಗುತ್ತಿದೆ.

ಸಾರ್ವಜನಿಕ ಉದ್ಯಮಗಳ ಶೇರುಗಳನ್ನು ವಿಕ್ರಯಗೊಳಿಸುವುದರಿಂದ ದೇಶದ ಸಾರ್ವಜನಿಕರ ಮೇಲೆ ಹಲವು ರೀತಿಯ ಪರಿಣಾಮಗಳುಂಟಾಗುತ್ತವೆ. ಇದರರ್ಥವೆಂದರೆ ಖಾಸಗಿಯವರು ವಶಪಡಿಸಿಕೊಳ್ಳುವ ಈ ಎಲ್ಲ ಘಟಕಗಳು ಲಾಭದ ಉದ್ದೇಶದಿಂದಲೇ ಕೆಲಸ ಮಾಡುತ್ತವೆ. ಇದುವರೆಗೂ ದೇಶಕ್ಕಾಗಿ ತಮ್ಮದೆ ಆದ ಕೊಡುಗೆಗಳನ್ನು ಈ ಉದ್ಯಮಗಳು ನೀಡುತ್ತಿದ್ದವು ಆದರೆ ಅವುಗಳು ಇನ್ನೂ ಮುಂದೆ ಖಾಸಗಿ ಮಾಲೀಕರ ಬೊಕ್ಕಸ ತುಂಬಿಸುವ ಕೆಲಸ ಮಾಡುತ್ತವೆ

ಇದಕ್ಕಿಂತಲೂ ಹೆಚ್ಚಾಗಿ ಸಾರ್ವಜನಿಕ ವಲಯದಲ್ಲಿರುವ ಸಾರ್ವಜನಿಕ ವಲಯದ ಕೆಲವು ಪ್ರಮುಖ ವ್ಯೂಹಾತ್ಮಕ ಉಧ್ಯಮಗಳು ದೇಶದ ಸಾರ್ವಭೌಮತ್ವದ ರಕ್ಷಕರಾಗಿ ಕೆಲಸ ಮಾಡಬೇಕಿರುವುದು ತೀರಾ ಅಗತ್ಯವಾಗಿದೆ. ಉದಾಹರಣೆಗೆ ರಕ್ಷಣಾ ವಲಯದ ಉತ್ಪಾದನೆಯನ್ನು ವಿದೇಶಿ ಸಹಭಾಗಿತ್ವ ಹೊಂದಿರುವ ರಿಲೆಯನ್ಸ್ ಖಾಸಗಿ ಕಂಪನಿಗೆ ವರ್ಗಾಹಿಸಲು ನಾವು ಅವಕಾಶ ನೀಡಿದರೆ ಇದರಿಂದ ದೇಶದ ಸ್ವಾತಂತ್ರ್ಯ ಮತ್ತು ನಮ್ಮ ಸ್ವಾವಲಂಬನೆಗೆ ತೀವ್ರ ಅಪಾಯವಾಗುವುದಿಲ್ಲವೇ?

ಸಾರ್ವಜನಿಕ ಉದ್ಯಮಗಳು ಕೇವಲ ಗರಿಷ್ಟ ಸಂಖ್ಯೆಯ ಉದ್ಯೋಗವಕಾಶಗಳನ್ನು ಸೃಷ್ಟಿಸಿರುವುದು ಮಾತ್ರವಲ್ಲ, ಉತ್ತಮ ವೇತನಗಳನ್ನು ಹಾಗೂ ದಲಿತರಿಗೆ ಸಾಮಾಜಿಕ ನ್ಯಾಯವನ್ನು ಮತ್ತಿತರೆ ಸೌಲಭ್ಯಗಳನ್ನು ಖಾಸಗಿಯವರಿಗಿಂತ ಅಧಿಕ ನೀಡಿವೆ. ಸಂವಿಧಾನಾತ್ಮಕವಾಗಿ ಕಡ್ಡಾಯವಾದ ಎಸ್.ಸಿ–ಎಸ್.ಟಿ ಮೀಸಲಾತಿಯನ್ನು ಪಾಲಿಸುತ್ತಿವೆ. ಆದರೆ ಒಂದು ವೇಳೆ ಖಾಸಗೀಕರಣಗೊಂಡರೆ ಇವೆಲ್ಲ ಗಾಳಿಗೆ ತೂರಿ ಹೋಗುತ್ತವೆ.

ಆದರೆ ಇದಿಷ್ಟೇ ಅಲ್ಲ ಪ್ರಸ್ತುತ ಜಾರಿಯಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯೇ ತೀವ್ರ ಬಿಕ್ಕಟ್ಟಿಗೆ ಸಿಲುಕಿರುವ ಹಿನ್ನಲೆಯಲ್ಲಿ ಈ ಸಾರ್ವಜನಿಕ ಉಧ್ಯಮಗಳು ಖಾಸಗಿಕರಣಗೊಂಡರೆ ಬಹಳಷ್ಟು ಸಂಖ್ಯೆಯಲ್ಲಿರುವ ಉತ್ಪಾದನಾ ವಲಯ ಹಾಗೂ ಸೇವಾ ವಲಯದಲ್ಲಿನ ನೇರ ಹಾಗೂ ಅಪ್ರತ್ಯಕ್ಷ ಅವಕಾಶಗಳು ನಾಶಗೊಳ್ಳಲಿವೆ. ಇದರಿಂದಾಗಿ ಈಗಾಗಲೇ ಅಪಾಯಕಾರಿ ಘಂಟೆ ಬಾರಿಸುತ್ತಿರುವ ನಿರುದ್ಯೋಗ ಹೆಚ್ಚಿ ಭವಿಷ್ಯದಲ್ಲಿ ಮತ್ತಷ್ಟು ಉದ್ಯೋಗದ ಅವಕಾಶಗಳು ನಾಶವಾಗಲಿವೆ. ಇದರಿಂದ ನಮ್ಮ ಆರ್ಥಿಕತೆಯಯೂ ನಾಶವಾಗಲಿದೆ. ಇದು ಜನತೆಯ ಮೇಲೆ ನಡೆಯುತ್ತಿರುವ ತೀವ್ರ ದಾಳಿ ಮಾತ್ರವಲ್ಲ ಇದು ದೇಶ ವಿರೋಧಿ ಕೆಲಸವಾಗಿದೆ.

ನೈಸರ್ಗಿಕ ಸಂಪನ್ಮೂಲಗಳು ಮತ್ತು ಮೂಲಭೂತ ಸೇವೆಗಳು:

ಇದು ಕೇವಲ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ ಮಾತ್ರ ಸೀಮಿತವಾಗಿಲ್ಲ ಇದು ಸರ್ಕಾರಿ ಸ್ವಾಮ್ಯದಲ್ಲಿರುವ ಸಾಗರದಿಂದ ಅರಣ್ಯದವರೆಗೆ ಇರುವ ಖನಿಜ ಭೂಮಿ ಮೊದಲಾದ ಸಂಪನ್ಮೂಲಗಳನ್ನು ವಿದೇಶಿ ಖಾಸಗಿಯವರ ಕೈಗೆ ಒಪ್ಪಿಸಲಾಗುತ್ತಿದೆ. ನಮ್ಮ ಶಿಕ್ಷಣ, ಆರೋಗ್ಯ ಮತ್ತು ಇತರೆ ಅವಶ್ಯಕ ಸೇವಾ ಅಗತ್ಯಗಳನ್ನು ವಾಣಿಜ್ಯೀಕರಣ ಮತು ಲಾಭಕೋರ ದೃಷ್ಟಿಯಿಂದಲೇ ಈ ಕೇಂದ್ರ ಸರ್ಕಾರ ವರ್ಗಾಹಿಸಲಾಗುತ್ತದೆ. ಸರ್ಕಾರಿ ಶಾಲೆ ಮತ್ತು ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳು ಹಣಕಾಸಿನ ನೆರವಿಲ್ಲದೆ ಬಳಲುತ್ತಿವೆ. ಮತ್ತೊಂದೆಡೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ದುಬಾರಿ ಶುಲ್ಕಗಳನ್ನು ಭರಿಸಲಾಗದೆ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸಾರ್ವಜನಿಕ ಆರೋಗ್ಯ ಶಿಕ್ಷಣ ಕ್ಷೇತ್ರಗಳ ಮೂಲಭೂತ ಸೌಕರ್ಯಗಳನ್ನು ಹೆಚ್ಚಬೇಕಾದ ಹಣಕಾಸು ಸಂಪನ್ಮೂಲ ಒದಗಿಸುವ ಬದಲು ಖಾಸಗಿ ಕಾರ್ಪೋರೇಟ್ ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಖಾಸಗಿಯವರ ಕೈಗೆ ವರ್ಗಾಹಿಸಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳಿಂದ ನಡೆಯುತ್ತಿದ್ದ ವೈದ್ಯಕೀಯ ತಪಾಸಣೆಯನ್ನು ಖಾಸಗಿಯವರಿಗೆ ವರ್ಗಾಯಿಸಲಾಗುತ್ತಿದೆ ಜನತೆಗೆ ತೀರ ಅವಶ್ಯಕವಾಗಿರುವ ವಿದ್ಯುಶ್ಚಕ್ತಿಯನ್ನು ಖಾಸಗಿಕರಿಸಬೇಕೆಂದು ಕೂಗು ಕೇಳಿ ಬರುತ್ತಿದೆ. ಅತ್ಯಂತ ಕೈಗೆಟುಕುವ ದರದಲ್ಲಿ ಜನತೆಗೆ ಪ್ರಯಾಣ ಸೇವೆ ಒದಗಿಸುವ ರೈಲ್ವೆಯನ್ನು ಖಾಸಗಿಕರಿಸಲಾಗಿದೆ. ಹೀಗಾಗಿ ಬಿಜೆಪಿ ಜಾರಿ ಮಾಡಲು ಹೊರಟಿರುವ ಈ ಅಮಲಿನ ಖಾಸಗಿಕರಣ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ಇದು ನಿಲ್ಲಬೇಕಾದರೆ ಅದು ಕಾರ್ಮಿಕ ವರ್ಗ ಮತ್ತು ಶೋಷಿತರ ಐಕ್ಯ ಚಳವಳಿಯಿಂದ ಮಾತ್ರ ಸಾಧ್ಯ.

ಈ ಹಿನ್ನಲೆಯಲ್ಲಿ ಮಾರ್ಚ 28–29 ರಂದು 2022 ರಂದು ಸಾರ್ವತ್ರಿಕ ಮುಷ್ಕರವು ಮೋದಿ ಸರ್ಕಾರದ ಖಾಸಗೀಕರಣ ಪ್ರಕ್ರಿಯೆ ವಿರುದ್ಧ ನಡೆಯುವಂತದ್ದು ಇದರರ್ಥ ದೇಶದ ಸಂಪತ್ತನ್ನು ದೊಡ್ಡ ಮತ್ತು ವಿದೇಶಿ ಬಂಡವಾಳಶಾಹಿಗಳಿಗೆ ವರ್ಗಾಹಿಸುವುದರ ವಿರುದ್ಧ ಈ ಮುಷ್ಕರ ನಡೆಸಲಾಗುತ್ತಿದೆ ಹೀಗಾಗಿ "ಇದು ದೇಶ ಉಳಿಸಿ ಮತ್ತು ಜನತೆ ಉಳಿಸಿ" ಮುಷ್ಕರವಾಗಿದೆ.



ಆದಿವಾಸಿ ಕೊರಗ ಸಮುದಾಯದ ಕಾಲೋನಿಗೆ ಬೃಂದಾ ಕಾರಟ್ ಭೇಟಿ

ಸೌಹಾರ್ದತೆಯ ಸಮಾವೇಶಕ್ಕೆ ಆಗಮಿಸಿದ್ದ ಸಂಗಾತಿ ಬೃಂದಾ ಕಾರಟ್ ರವರು ಮಂಗಳೂರಿನ ಕೋಟಿ ಮುರಾದ ಪ್ರದೇಶದಲ್ಲಿರುವ ಕೊರಗ ಸಮುದಾಯದ ನೂತನ ಕಾಲೋನಿಗೆ ಭೇಟಿ ನೀಡಿದರು. ಸಂಗಾತಿ ಬೃಂದಾ ಕಾರಟ್ ರವರು ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚ್ ನ ಅಖಿಲ ಭಾರತ ಉಪಾಧ್ಯಕ್ಷರು.

ಹರಪ್ಪಾ ನಾಗರೀಕತೆಯ ಭಾಷೆ ಸಂಸ್ಕೃತ ಎನ್ನುವುದು, ಬಸವಣ್ಣ ಇಂಗ್ಲಿಷ್ ಮಾತನಾಡುತ್ತಿದ್ದರು ಎನ್ನುವಷ್ಟೇ ಹಾಸ್ಯಾಸ್ಪದ...................... ಪುಟ 16 ರಿಂದ

ಒಂದು ಯುಗದ ವೈಚಾರಿಕತೆ ಅಥವಾ ಯುಗಧರ್ಮ (ಎಪಿಸ್ಟೀಮ್) ಬದಲಾಗಿ ಮತ್ತೊಂದು ವೈಚಾರಿಕತೆ/ಯುಗಧರ್ಮ ಮತ್ತು ಹೊಸ ನಾಗರಿಕತೆಯ ಆದಿಕಾಲದಲ್ಲಿ ಮಹಾಕಾವ್ಯ ಬರುತ್ತದೆ. ಮಹಾಭಾರತ ಅದರ ಹಿಂದಿನ ಯುಗದ ಚಿಂತನೆಯನ್ನು ನೆನಪಿನಲ್ಲಿಟ್ಟುಕೊಳ್ಳುವ ರೀತಿಯನ್ನು ದಾಖಲಿಸುತ್ತದೆ. ಏನನ್ನು ಯಾತಕ್ಕೆ ನೆನಪಿಸಿಕೊಳ್ಳಬೇಕು ಎಂಬುದನ್ನು ಸಹ ಮಹಾಭಾರತವು ತನ್ನದೇ ಮಾದರಿಯಿಂದ ತೋರಿಸುತ್ತದೆ ಎಂದು ಪ್ರೊ.ಸಿ.ಎನ್.ಆರ್ ಪುಸ್ತಕದ ಸಾರವನ್ನು ನಿರೂಪಿಸಿದರು.

ಮಹಾಭಾರತವನ್ನು ನಮ್ಮ ಕಾಲಕ್ಕೆ ಭಾವಿಸಲು ಅನುವು

ಅನುವಾದಕ ಡಾ.ಎಂ.ಜಿ.ಹೆಗಡೆ ಅವರು ಈ ಅನುವಾದದ ಪ್ರಕ್ರಿಯೆಯೇ, ಈ ಪುಸ್ತಕದಲ್ಲಿ ಬರುವ ಮಹಾಭಾರತದ ವಿವಿಧ ವ್ಯಾಖ್ಯಾನಗಳು, ಸಂಬಂಧಪಟ್ಟ ಆಕರಗಳ ಅದರ ಅನುವಾದಗಳ ಓದು ಮರು–ಓದುಗಳನ್ನು ನೆನಪಿಸುವ ಮೂಲಕ, ನನಗೆ ಸಂತೋಷ ಕೊಟ್ಟಿದೆಯೆಂದರು. ಈ ಪುಸ್ತಕವನ್ನು ಬರೆಯುವಲ್ಲಿ ಮತ್ತು ಎಲ್ಲ ಭಾಷೆಗಳಲ್ಲಿ ಇದರ ಅನುವಾದ ಬೇಗನೇ ಬರಬೇಕು ಎಂದು ದೇವಿ ಅವರ ಓಘದ ಹಿಂದೆ ಇರುವ ತುರ್ತಿನ ಕಾರಣ ಗಮನಿಸಬೇಕು. ಇಂದು ಮುನ್ನೆಲೆಗೆ ಬರಲು ಹಪಹಪಿಸುತ್ತಿರುವ ಕೆಲವು ಶಕ್ತಿಗಳು ಕ್ಷಾತ್ರ ಹಿಂದೂ ಸಮಾಜದ ಕಲ್ಪನೆಯನ್ನು ಮುಂದೊತ್ತುತ್ತಿರುವುದು, ದೇಶದ ಪ್ರತಿಷ್ಠಿತ ವಿ.ವಿ ಯ ಪದಗ್ರಹಣ ಮಾಡಿದ ಕುಲಪತಿ 'ಇಂಡಿಯಾ–ಸೆಂಟ್ರಿಕ್ ನರೇಟಿವ್' ಬಿತ್ತರಿಸಲು ವಿ.ವಿ ಕೆಲಸ ಮಾಡಲಿದೆಯೆಂದು ಹೇಳಿದ್ದು ಕಾರಣವಾಗಿರಬೇಕು. ಈ ಭಾವೋನ್ಮಾದದ ವಾತಾವರಣವನ್ನು ಕಳೆಯಲು ಮತ್ತು ಮಹಾಭಾರತವನ್ನು ನಮ್ಮ ಕಾಲಕ್ಕೆ ಭಾವಿಸುವುದಕ್ಕೆ ಈ ಪುಸ್ತಕ ಅನುವು ಮಾಡಿಕೊಡುತ್ತದೆ ಎಂದು ಡಾ. ಎಂ.ಜಿ. ಹೆಗಡೆ ಮಾತನಾಡುತ್ತಾ ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮವನ್ನು ಕೆ.ಎಸ್.ವಿಮಲ ಅವರು ನಿರ್ವಹಿಸಿದರು. ವಸಂತರಾಜ ಎನ್. ಕೆ ಅಧ್ಯಕ್ಷತೆ ವಹಿಸಿದ್ದರು. 'ಜನಶಕ್ತಿ ಮೀಡಿಯಾ' ಈ ಕಾರ್ಯಕ್ರವನ್ನು ಫೇಸ್ ಬುಕ್ ಲೈವ್ ಆಗಿ ಬಿತ್ತರಿಸಿದ್ದು ಅದು ವೆಬ್ ನಲ್ಲಿ ಲಭ್ಯವಿದೆ.

ಮೀಡಿಯಾ' ಈ ಕಾರ್ಯಕ್ರವನ್ನು ಫೇಸ್ ಬುಕ್ ಲೈವ್ ಆಗಿ ಬಿತ್ತರಿಸಿದ್ದು ಅದು ವೆಬ್ ನಲ್ಲಿ ಲಭ್ಯವಿದೆ.

https://www.facebook.com/690357324363690/videos/681521559699754

ಈ ಕಾರ್ಯಕ್ರಮದ ಮೂರು ಪ್ರಮುಖ ಭಾಷಣಗಳು ಯೂ ಟ್ಯೂಬ್ ನಲ್ಲಿ ಪ್ರತ್ಯೇಕವಾಗಿ ಲಭ್ಯ ಇವೆ.

ಪುಸ್ತಕದ ಆಯ್ದ ಭಾಗಗಳು

ಗತಕಾಲವನ್ನು ಸ್ಮರಿಸಿಕೊಳ್ಳುವ ಅಗತ್ಯ ವಿಧಾನವನ್ನು ಮಹಾಭಾರತವು ರೂಪಿಸಿತು. ತನ್ನ ರಾಷ್ಟ್ರೀಯ ಸ್ಮರಣೆಯನ್ನು ಕಾಪಿಡುವ ಮಾರ್ಗವಾಗಿ ಆ ವಿಧಾನವನ್ನು ಭಾರತವು ಅಂತರಂಗೀಕರಿಸಿಕೊಂಡಿದೆ. ಆ ಅರ್ಥದಲ್ಲಿ ಮಹಾಭಾರತವು ನಮ್ಮ ರಾಷ್ಟ್ರೀಯ ಮಹಾಕಾವ್ಯ. ಅದು ರಾಷ್ಟ್ರದ ಬಗ್ಗೆ ಇರುವ ಕಾವ್ಯವಲ್ಲ; ಬದಲಾಗಿ, ನಾವು ಗತಕಾಲವನ್ನು ನೆನಪಿಟ್ಟುಕೊಳ್ಳುವ ವಿಧಾನದ ಬಗ್ಗೆ ಇರುವ ಕಾವ್ಯ. ಸಮಾನವಾಗಿ ಗ್ರಹಿಸಲ್ಪಟ್ಟ ಗತದ ಮೂಲಕವೇ ಮಹಾಭಾರತವು ನಮ್ಮನ್ನು ಒಂದು ರಾಷ್ಟ್ರವಾಗಿ ಒಂದುಗೂಡಿಸುವುದೇ ಹೊರತು ಸಮಾನವಾಗಿ ಗ್ರಹಿಸಿಕೊಂಡ ಸಾಮೂಹಿಕ ಅಸ್ಮಿತೆಯ ಮೂಲಕವಲ್ಲ. ಈ ವಿಧಾನದಲ್ಲಿ ಗತಕಾಲದ ಕುರಿತು ಆತಂಕವಿಲ್ಲ. ಏಕೆಂದರೆ ಅದು ಹಲವು ಆರಂಭಗಳನ್ನು ಅನುಮತಿಸುತ್ತದೆ. ಮಹಾಭಾರತ ಮನೋಭಾವವೇ ಎಂತಹುದೆಂದರೆ ಯಾವುದೇ ಬಗೆಯ ಕದನಶೀಲವೂ ಏಕರೂಪಿಯೂ ಆದ ರಾಷ್ಟ್ರವಾಗಿ ಈ ಉಪಖಂಡವನ್ನು ಕಲ್ಪಿಸಿದರೆ ಅದು ಚಳವಳಿ ಹೂಡುವುದು ಶತಃಸಿದ್ಧ. ಏಕೆಂದರೆ ಎಲ್ಲ ಬಗೆಯ ಅಪಾರ ವೈವಿಧ್ಯದಿಂದಲೇ ಅದು ತುಂಬಿಕೊಂಡಿದೆ. ಈ ಭೂಮಕಾವ್ಯವು ನಮ್ಮನ್ನು ಯಾವುದೇ ಕಲ್ಪಿತವಾದ, ಸೀಮಾಬದ್ಧವಾದ ರಾಷ್ಟ್ರವಾಗಿ ಒಂದುಗೂಡಿಸುವುದಿಲ್ಲ. ಅದು ನಮ್ಮನ್ನು ಒಗ್ಗೂಡಿಸುವುದು ಕಾಲಚಕ್ರದಿಂದ ಸಂಕೇತಿಸಲ್ಪಟ್ಟ ಕಾಲದ ಕಲ್ಪನೆಯಿಂದ. ಮಹಾಭಾರತದ ಈ ಅಪ್ರತಿಮ ಸಂಕೇತವು ಪ್ರತಿಯೊಂದನ್ನೂ ಸಂಪೂರ್ಣ ನಮ್ರತೆಯಿಂದ ಒಪ್ಪಿಕೊಳ್ಳುವ ಶ್ರೇಷ್ಠವಾದ ಸ್ವೀಕರಣ ಮನೋಭಾವವನ್ನು ಕಲಿಸುತ್ತದೆ.

– ಪ್ರೊ. ಗಣೇಶ ದೇವಿ

****

ಸದ್ಯ ಮುನ್ನೆಲೆಗೆ ಬರಲು ಹಪಹಪಿಸುತ್ತಿರುವ ಮತ್ತು ಅಧಿಕೃತಗೊಳ್ಳಲು ಎಲ್ಲಾ ಉಪಕರಣಗಳನ್ನೂ ಬಳಸುತ್ತಿರುವ ರಾಷ್ಟ್ರ, ಚರಿತ್ರೆ ಮತ್ತು ಸಮಾಜದ ಕಲ್ಪನೆಗಳು ರಾಷ್ಟ್ರೀಯ ಕಾವ್ಯವೆಂದು ಮನ್ನಣೆ ಪಡೆದಿರುವ ಮಹಾಭಾರತಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ ಎನ್ನುವುದು ದೇವಿಯವರ ಮಹಾಭಾರತ ವ್ಯಾಖಾನದ ಕೇಂದ್ರ ಗ್ರಹೀತಗಳಲ್ಲೊಂದು. ಅಂದರೆ ವಸಾಹತುಶಾಹಿ ವಿಕಲ್ಪಗಳಿಗೆ ನೇತುಬಿದ್ದಿರುವ ವರ್ತಮಾನದ ರಾಜಕೀಯಕ್ಕೆ ಪರಂಪರೆಯ ವಿವೇಕವನ್ನು ನೆನಪಿಸುವ ಉದ್ದೇಶದ ಕೃತಿಯಿದು. ದೇವಿಯವರು ಮಹಾಭಾರತವನ್ನು ಭಾರತೀಯ ಸಂಸ್ಕೃತಿಯ ಪ್ರತ್ಯಭಿಜ್ಞಾನಕ್ಕೆ ಒದಗುವ ಮಹತ್ವದ ಆಕರಗ್ರಂಥವಾಗಿ ಪರಿಗಣಿಸುತ್ತಾರೆ. ಮಹಾಭಾರತದ ವ್ಯಾಸನೇ ಆದರೂ ಎರಡೂ ಕೈ ಎತ್ತಿ ಕೂಗಿ ಹೇಳುತ್ತಿದ್ದರೂ ವಿವೇಕದ ಮಾತನ್ನು ಯಾರೂ ಕೇಳುತ್ತಿಲ್ಲ ಎನ್ನಬಹುದು. ಆದರೆ ದೇವಿಯವರು ಮಾತ್ರ ಭವಿಷ್ಯದ ಭಾರತ ವೈರಸ್‌ಗಳಿಂದ ಮುಕ್ತವಾಗುತ್ತದೆ ಎಂಬ ಭರವಸೆಯನ್ನು ಕಳೆದುಕೊಳ್ಳಲಾರರು

–ಡಾ.ಎಂ.ಜಿ.ಹೆಗಡೆ

JANASHAKTHI KANNADA VARA PATRIKE MARCH 28-APRIL 03, 2022 Price: Rs. 10/- Date of Publication: 25 MARCH 2022 RNI No. KARKAN /2006/17926 Posted on 28-03-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಹರಪ್ಪಾ ನಾಗರೀಕತೆಯ ಭಾಷೆ ಸಂಸ್ಕೃತ ಎನ್ನುವುದು, ಬಸವಣ್ಣ ಇಂಗ್ಲಿಷ್ ಮಾತನಾಡುತ್ತಿದ್ದರು ಎನ್ನುವಷ್ಟೇ ಹಾಸ್ಯಾಸ್ಪದ: ಪ್ರೊ. ಗಣೇಶ ದೇವಿ

ಮಹಾಭಾರತ ಹಿಂದಿನ ದೀರ್ಘ ಅವಧಿಯ 'ಇತಿಹಾಸ'ವನ್ನು ವಿಶಿಷ್ಟ ರೀತಿಯಲ್ಲಿ ಕಟ್ಟಿಕೊಡುತ್ತದೆ. ಹೆಚ್ಚಾಗಿ ಪುರಾಣವಾದ ಅಲ್ಪಸ್ವಲ್ಪ ಇತಿಹಾಸವಿರುವ ಗತವನ್ನು ನೆನಪಿಟ್ಟುಕೊಳ್ಳುವ, ಶಾಶ್ವತ ಮತ್ತು ಬದಲಾವಣೆಯ ಆಯಾಮಗಳನ್ನು ಒಳಗೊಳ್ಳುವ ಕಾಲಚಕ್ರ ವಿಧಾನವನ್ನು ಅಂಗೀಕರಿಸುತ್ತದೆ. ಒಂದು 'ಯುಗ' ಮುಗಿದು ಇನ್ನೊಂದು ಯುಗ ಆರಂಭವಾಗುವಾಗ ಹೆಚ್ಚಾಗಿ ಮಹಾಕಾವ್ಯ ಉದ್ಭವಿಸುತ್ತದೆ. ಇರಾವತಿ ಕರ್ವೆ ಅವರು 'ಯುಗಾಂತರ' ಕೃತಿಯಲ್ಲಿ ಹೇಳುವಂತೆ ಭಾರತದಲ್ಲಿ 'ಪಶುಪಾಲನಾ' ಯುಗ ಮುಗಿದು, ಪ್ರಭುತ್ವ ಸಾಮ್ರಾಜ್ಯ ಗಳಿರುವ ಯುಗ ಆರಂಭವಾಗುವ ಸ್ಥಿತ್ಯಂತರದಲ್ಲಿ ಮಹಾಭಾರತ ಬರುತ್ತದೆ. ಮಹಾಭಾರತ ಒಂದು ಬಹುತ್ವ ಎತ್ತಿ ಹಿಡಿಯುವ, ಫೆಡೆರಲ್ ಮಹಾಕಾವ್ಯ, ರಾಮಾಯಣ ದಂತೆ ಈಗಿನ ಆಳುವವರಿಗೆ ಪ್ರಿಯವಾದ 'ಯುನಿಟರಿ' (ಬಹುತ್ವ ನಿರಾಕರಿಸುವ ಏಕತ್ವದ) ಮಹಾಕಾವ್ಯವಲ್ಲ. ಇಂದು ಏಕತ್ವದ ರಾಜಕೀಯ ಎದುರಿಸಲು ಬಹುತ್ವವನ್ನು ಎತ್ತಿ ಹಿಡಿಯುವ ಮಹಾಭಾರತವನ್ನು ರಾಜಕೀಯವಾಗಿ ಬಳಸಬಹುದು.

ವಸಂತರಾಜ ಎನ್.ಕೆ

"ಹರಪ್ಪಾ ನಾಗರೀಕತೆಯ ಭಾಷೆ ಸಂಸ್ಕೃತ ಎನ್ನುವುದು ಬಸವಣ್ಣ ಇಂಗ್ಲಿಷ್ ಮಾತನಾಡುತ್ತಿದ್ದರು ಎನ್ನುವಷ್ಟೇ ಹಾಸ್ಯಾಸ್ಪದ!" – ಹೀಗೆಂದವರು ಪ್ರೊ. ಗಣೇಶ ದೇವಿ. ಅವರು ತಮ್ಮ ಇಂಗ್ಲೀಷ್ ಮೂಲ ಪುಸ್ತಕ "ಮಹಾಭಾರತ: ದಿ ಎಪಿಕ್ ಅಂಡ್ ದಿ ನೇಶನ್" ದ ಕನ್ನಡ ಅನುವಾದ "ಮಹಾಭಾರತ: ಭೂಮಕಾವ್ಯ ಮತ್ತು ಭಾರತ ರಾಷ್ಟ್ರ" ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ಈ ಸಮಾರಂಭವನ್ನು ಪುಸ್ತಕದ ಪ್ರಕಾಶಕ ಕ್ರಿಯಾ ಮಾಧ್ಯಮ ಮಾರ್ಚ್ 19ರಂದು ಬಿ.ಎಂ.ಶ್ರೀ ಪ್ರತಿಷ್ಠಾನ ಸಭಾಂಗಣದಲ್ಲಿ ಏರ್ಪಡಿಸಿತ್ತು. "ಮಹಾಭಾರತ ." ಪುಸ್ತಕ ಬರೆಯಲು ಕಾರಣವಾದ ಅಂಶಗಳ ಕುರಿತು ದೇವಿ ಅವರು ಮಾತನಾಡುತ್ತಿದ್ದರು. ಇಡೀ ಭಾರತ ಉಪಖಂಡದಲ್ಲಿಯೇ ಮಹಾಭಾರತದ ಸಾರ್ವಕಾಲಿಕ ಸಾರ್ವತ್ರಿಕ ಜನಪ್ರಿಯತೆಗೆ ಕಾರಣಗಳೇನು? ಶುದ್ಧ ಇತಿಹಾಸವೂ ಅಲ್ಲದೆ, ಶುದ್ಧ ಪುರಾಣವೂ ಅಲ್ಲದೆ, ಆದರೆ ಇತಿಹಾಸವೆಂದು ಹೆಚ್ಚಿನವರು ನಂಬುವ ಈ ಅದ್ಭುತ ಮಹಾಕಾವ್ಯದಲ್ಲಿ ಇದನ್ನು ಸಾಧಿಸಲು ಅದರ ಕೃತಿಕಾರ ವ್ಯಾಸ ಬಳಸಿದ ವಿಧಾನವೇನು?– ಈ ಕುರಿತು ಕುತೂಹಲವೇ ಈ ಪುಸ್ತಕ ಬರೆಯಲು ಪ್ರಮುಖ ಕಾರಣವೆಂದು ದೇವಿ ಅವರು ಹೇಳಿದರು.

ಇದಲ್ಲದೆ ಭಾರತ ಸರಕಾರದ ಸಂಸ್ಕೃತಿ ಸಚಿವಾಲಯವು 2016 ರಲ್ಲಿ ಭಾರತದ ನಾಗರಿಕತೆ, ಸಂಸ್ಕೃತಿಗಳ ಮೂಲ ಮತ್ತು 12 ಸಾವಿರ ವರ್ಷಗಳ ಇತಿಹಾಸವನ್ನು 'ಪುನರ್ರಚಿಸಲು' ಒಂದು ಸಮಿತಿಯನ್ನು ನೇಮಿಸಿದ್ದು ಸಹ ಕಾರಣವಾಯಿತು. ಈ ಸಮಿತಿಯ ಕೆಲವು ಇತಿಹಾಸಕಾರರು ಈಗಾಗಲೇ ಹರಪ್ಪಾ ನಾಗರೀಕತೆಯ ಭಾಷೆ ಸಂಸ್ಕೃತವೆಂದು ಹೇಳುತ್ತಿದ್ದಾರೆ. ಇದನ್ನು ಇನ್ನಷ್ಟು ಹಿಂದಕ್ಕೆ ಒಯ್ಯಲು ಪ್ರಯತ್ನ ನಡೆದಿದೆಯೆಂಬುದು ಸ್ಪಷ್ಟ. ಈ ಹಿನ್ನೆಲೆಯಲ್ಲಿ ಮಹಾಭಾರತ ಕಟ್ಟಿಕೊಡುವ 'ಇತಿಹಾಸ' ಭಾರತದ ಅದುವರೆಗಿನ ನಾಗರಿಕತೆ, ಸಂಸ್ಕೃತಿಗಳ ಕುರಿತು ಏನು ಹೇಳುತ್ತದೆ ಎಂದು ಚರ್ಚಿಸುವ ತುರ್ತು ಅಗತ್ಯಕ್ಕೆ ನನ್ನ ಪಾಲಿನ ಕೊಡುಗೆ ಕೊಡಬೇಕು ಎಂಬ ಹಂಬಲ ಸಹ ಈ ಪುಸ್ತಕ ಬರೆಯಲು ಕಾರಣವಾಯಿತೆಂದು ಪ್ರೊ. ದೇವಿ ಅವರು ಹೇಳಿದರು.

'ಬಹುತ್ವ ಎತ್ತಿ ಹಿಡಿಯುವ ಮಹಾಕಾವ್ಯ'

ಮೊದಲಿನ ಅವತರಣಿಕೆ 'ಭಾರತ' ಮತ್ತು 'ಮಹಾಭಾರತ' ಗಳ ನಡುವಿನ ಅವಧಿಯು (ಕ್ರಿ.ಪೂ. 1400ರಿಂದ ಕ್ರಿ.ಪೂ 800) ಸನಾತನ ವೈದಿಕ ಮತಕ್ಕೆ ಎರಡು ದೊಡ್ಡ ಸವಾಲುಗಳು ಎದುರಾದ ಅವಧಿ. ಒಂದು ಕಡೆ ಬುದ್ಧನ ಮತ ಪಾಲಿ ಭಾಷೆಯಲ್ಲಿ ದೇವರು, ಜ್ಞಾನ, ಸಾಮಾಜಿಕ ನೈತಿಕತೆ ಗಳ ಕುರಿತು ಸವಾಲೊಡ್ಡಿತ್ತು. ಇನ್ನೊಂದು ಕಡೆ ಮಹಾವೀರನ ಜೈನಮತ ಪ್ರಾಕೃತ ಭಾಷೆಯಲ್ಲಿ 'ಅಪರಿಗ್ರಹ'ದ ಸವಾಲೆಸೆದಿತ್ತು. 'ನಾನು ನನ್ನ ವೈರಿಯನ್ನು ಸೋಲಿಸಿ ಸಾವಿರ ಹಸುಗಳನ್ನು ಹೊಡೆದುಕೊಂಡು ಬಂದಿದ್ದೇನೆ, ನಾಳೆ ಇನ್ನೊಬ್ಬ ವೈರಿಯನ್ನು ಸೋಲಿಸಿ ಹತ್ತು ಸಾವಿರ ಹಸುಗಳನ್ನು ಹೊಡೆದುಕೊಂಡು ಬರಲು ಶಕ್ತಿ ಕೊಡು' ಎಂದು ಪ್ರಾರ್ಥನೆ ಮಾಡುವ ಸನ್ನಿವೇಶದಲ್ಲಿ 'ಅಪರಿಗ್ರಹ'ದ ಸವಾಲನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ ಈ ಅವಧಿಯು ಸಂಸ್ಕೃತದ ಲಿಖಿತ ಸಾಹಿತ್ಯ ಇತಿಹಾಸಗಳಲ್ಲಿ ಒಂದು ಬಗೆಯ 'ಮೌನದ ಕಾಲ'ವಾಗಿದೆ. ಅತ್ಯಾಚಾರಕ್ಕೆ ಬಲಿಯಾದವಳಿಗೆ "ಶಾಂತತಾ, ಕೋರ್ಟ್ ಚಾಲೂ ಆಹೆ" (ಮೌನವಾಗಿರು! ಕೋರ್ಟು ನಡೆಯುತ್ತಿದೆ) ಎಂಬ ಹೆಸರಿನ ಮರಾಠಿ ನಾಟಕದಲ್ಲಿ ಹೇಳುವಂತಹ 'ಮೌನ'ವಿದು.

ಮಹಾಭಾರತ ಈ ಅವಧಿಯ ಮತ್ತು ಇನ್ನೂ ಹಿಂದಿನ ದೀರ್ಘ ಅವಧಿಯ 'ಇತಿಹಾಸ'ವನ್ನು ವಿಶಿಷ್ಟ ರೀತಿಯಲ್ಲಿ ಕಟ್ಟಿಕೊಡುತ್ತದೆ. ಹೆಚ್ಚಾಗಿ ಪುರಾಣವಾದ ಅಲ್ಪಸ್ವಲ್ಪ ಇತಿಹಾಸವಿರುವ ಗತವನ್ನು ನೆನಪಿಟ್ಟುಕೊಳ್ಳುವ, ಶಾಶ್ವತ ಮತ್ತು ಬದಲಾವಣೆಯ ಆಯಾಮಗಳನ್ನು ಒಳಗೊಳ್ಳುವ ಕಾಲಚಕ್ರ ವಿಧಾನವನ್ನು ಅಂಗೀಕರಿಸುತ್ತದೆ. ಒಂದು 'ಯುಗ' ಮುಗಿದು ಇನ್ನೊಂದು ಯುಗ ಆರಂಭವಾಗುವಾಗ



ಹೆಚ್ಚಾಗಿ ಮಹಾಕಾವ್ಯ ಉದ್ಭವಿಸುತ್ತದೆ. ಇರಾವತಿ ಕರ್ವೆ ಅವರು 'ಯುಗಾಂತರ' ಕೃತಿಯಲ್ಲಿ ಹೇಳುವಂತೆ ಭಾರತದಲ್ಲಿ 'ಪಶುಪಾಲನಾ' ಯುಗ ಮುಗಿದು, ಪ್ರಭುತ್ವ ಸಾಮ್ರಾಜ್ಯ ಗಳಿರುವ ಯುಗ ಆರಂಭವಾಗುವ ಸ್ಥಿತ್ಯಂತರದಲ್ಲಿ ಮಹಾಭಾರತ ಬರುತ್ತದೆ. ಮಹಾಭಾರತ ಒಂದು (ಬಹುತ್ವ ಎತ್ತಿ ಹಿಡಿಯುವ) ಫೆಡೆರಲ್ (ಒಕ್ಕೂಟ) ಮಹಾಕಾವ್ಯ, ರಾಮಾಯಣ ದಂತೆ ಈಗಿನ ಆಳುವವರಿಗೆ ಪ್ರಿಯವಾದ 'ಯುನಿಟರಿ' (ಬಹುತ್ವ ನಿರಾಕರಿಸುವ ಏಕತ್ವದ) ಮಹಾಕಾವ್ಯವಲ್ಲ. ಇಂದು ಆಳುವವರ ಏಕತ್ವದ ರಾಜಕೀಯ ಎದುರಿಸಲು ಬಹುತ್ವವನ್ನು ಎತ್ತಿ ಹಿಡಿಯುವ ಮಹಾಭಾರತವನ್ನು ರಾಜಕೀಯವಾಗಿ ಬಳಸಬಹುದು ಎಂದು ಪ್ರೊ.ದೇವಿ ಅವರು ಪುಸ್ತಕದ ಆಶಯವನ್ನು ಮಂಡಿಸಿದರು.


ಸಮಾರಂಭದ ಮೊದಲಿಗೆ ಪ್ರಸಿದ್ಧ ವಿಮರ್ಶಕ, ಲೇಖಕ, ಚಿಂತಕ ಪ್ರೊ. ಸಿ.ಎನ್. ರಾಮಚಂದ್ರನ್ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. ಮೊದಲಿಗೆ ಅವರು ಮೂಲ ಲೇಖಕ ಪ್ರೊ.ದೇವಿ ಅವರನ್ನು ಪರಿಚಯಿಸಿದರು. ಡಾ.ಶಾಂತಿನಾಥ ದೇಸಾಯಿ ಅವರ 'ಪೆಟ್ ಸ್ಟೂಡೆಂಟ್' ಆಗಿದ್ದ ಗಣೇಶ ದೇವಿ ಅವರ ಜೀವನದ ಮೂರು ಪ್ರಮುಖ ಅವಧಿಗಳನ್ನು ಪರಿಚಯಿಸಿದರು. ಮೊದಲ ಕೃತಿ 'ಆಫ್ಟರ್ ಅಮ್ನೇಶಿಯಾ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಸಾಹಿತ್ಯ–ಸಂಸ್ಕೃತಿ ವಿಮರ್ಶೆಯ ಅಕಾಡೆಮಿಕ್ ಜೀವನ ದೇವಿ ಅವರ ಜೀವನದ ಮೊದಲ ಅವಧಿ. ಎರಡನೆಯ ಅವಧಿಯಲ್ಲಿ ಅವರು ತಮ್ಮ ಉದ್ಯೋಗ ತ್ಯಾಗ ಮಾಡಿ ಆದಿವಾಸಿ ಭಾಷೆ, ಬದುಕು, ಸಂಸ್ಕೃತಿಗಳ ಅಧ್ಯಯನಕ್ಕೆ ತಮ್ಮನ್ನು ಮುಡಿಪಾಗಿಟ್ಟರು. ಮೂರನೆಯ ಅವಧಿಯಲ್ಲಿ 'ದಕ್ಷಿಣಾಯಣ' ಸ್ಥಾಪಿಸಿ ಹೆಚ್ಚಿನ 'ಆಕ್ಟಿವಿಸ್ಟ್' ಪಾತ್ರ ವಹಿಸುತ್ತಿದ್ದಾರೆ.

'ಪ್ರಧಾನ ರಸ ವೀರರಸವಲ್ಲ, ಶಾಂತರಸ'

ಪುಸ್ತಕದ ಕುರಿತು ಮಾತನಾಡುತ್ತಾ ಇದು ಮಹಾಭಾರತದ ಮರುಕಥನವಲ್ಲ, ಮತ್ತೊಂದು ಮಹಾಭಾರತವಲ್ಲ, ಮಹಾಭಾರತದ ವ್ಯಾಖ್ಯಾನದಲ್ಲಿ ಹೊಸ ರೀತಿಯ ಚಿಂತನೆ ತಾತ್ವಿಕತೆಯನ್ನು ಒಳಗೊಂಡಂದ್ದು ಎಂದರು. ಮಹಾಕಾವ್ಯಗಳಲ್ಲೇ ಹೆಚ್ಚಿನ ವ್ಯಾಪ್ತಿಯ, ಭವ್ಯವಾದ, ವಿಶಿಷ್ಟವಾದ ಮಹಾಭಾರತವನ್ನು ವ್ಯಾಖ್ಯಾನಿಸಲು, ಕುವೆಂಪು ಅವರು ಮೊದಲು ಬಳಕೆಗೆ ತಂದ 'ಭೂಮಕಾವ್ಯ'ವೆಂಬ ಶಬ್ದ ಬಳಸಿದ್ದು ಸೂಕ್ತವಾಗಿದೆಯೆಂದರು. ಮಹಾಭಾರತದ ವಿಕಾಸದ ಮೂರು ಘಟ್ಟಗಳು ಮತ್ತು ಪರಂಪರೆಗಳನ್ನು ವಿವರಿಸಿದರು. ವಿಕಾಸದ ಮೂರು ಘಟ್ಟಗಳೆಂದರೆ – ಜಯ, ಭಾರತ, ಮಹಾಭಾರತ. ಭಂಡಾರಕರ್ಸ್ ಸಂಸ್ಥೆ ಅಂಗೀಕರಿಸಿದ ವಿಮರ್ಶಾತ್ಮಕ ಆವೃತ್ತಿ ಸೇರಿದಂತೆ ಹಲವು ಲಿಖಿತ ಮಹಾಭಾರತದ ಸಂಸ್ಕೃತ ಆವೃತ್ತಿಗಳು, ಪ್ರಾದೇಶಿಕ ಭಾಷೆಯ ಮಹಾಭಾರತಗಳು, ಆದಿವಾಸಿ ಬುಡಕಟ್ಟು ಜನಸಮುದಾಯಗಳಲ್ಲಿ ಮೌಖಿಕವಾಗಿ ಸಂಸ್ಕೃತ ಮಹಾಭಾರತವೇ ಇಂತಹ ಹಲವು ಆಗ ಪ್ರಚಲಿತವಿದ್ದ ಕತೆ ಐತಿಹ್ಯಗಳ ಸಂಕಲನವೇ ಎಂದು ಹೇಳಲಾಗುತ್ತದೆ) ಪ್ರಚಲಿತವಿರುವವು–ಇವು ಮಹಾಭಾರತದ ಮೂರು ಪರಂಪರೆಗಳು. ಇವುಗಳಲ್ಲಿ ಕೆಲವು (ಉದಾ: ಪ್ರಾದೇಶಿಕ ಭಾಷೆಗಳವು) ಮರುಕಥನಗಳು, ಕೆಲವು ಸ್ವತಂತ್ರ ಕಥನಗಳು (ಉದಾ: ಮೌಖಿಕ ಪರಂಪರೆಯವು). ಈ ಹಲವು ಮಹಾಭಾರತಗಳಲ್ಲಿ ಹಲವು ಪಾತ್ರಗಳು, ಘಟನೆಗಳಲ್ಲಿ ಸಾಮ್ಯವಿರುತ್ತದೆ. ಆದರೆ ಸಾಕಷ್ಟು ವ್ಯತ್ಯಾಸಗಳೂ (ಉದಾ: ಮೌಖಿಕ ಮಹಾಭಾರತಗಳಲ್ಲಿ ಕುರುಕ್ಷೇತ್ರ ಯುದ್ಧವೇ ಇಲ್ಲ) ಸ್ವತಂತ್ರ ಕಥೆಗಳೂ ಇರುತ್ತವೆ. ಮಹಾಭಾರತದ ಕುರಿತ ಈ ವಿವರಗಳನ್ನೂ ಕೊಟ್ಟ ನಂತರ ದೇವಿ ಅವರು ಹಲವು ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾರೆ. ಇದಕ್ಕೆ ಉತ್ತರಗಳನ್ನು ಕಂಡುಕೊಳ್ಳಲು ಸಾಹಿತ್ಯ ವಿಮರ್ಶೆ, ಇತಿಹಾಸ, ಚರಿತ್ರೆ,, ಭಾಷಾಶಾಸ್ತ್ರ, ತಳಿಶಾಸ್ತ್ರ – ಮುಂತಾದ ಹಲವು ಜ್ಞಾನಶಿಸ್ತುಗಳ ತಿಳಿವಳಿಕೆ, ವಿಧಾನಗಳನ್ನು ಬಳಸುತ್ತಾರೆಂದರು ಪ್ರೊ.ಸಿ.ಎನ್. ಆರ್.

ಮಹಾಭಾರತದಲ್ಲಿ ಯಾರೂ ನಾಯಕರಿಲ್ಲ, ನಾಯಕಿಯರಿಲ್ಲ, ಖಳನಾಯಕರಿಲ್ಲ ಅಥವಾ ಎಲ್ಲರೂ ನಾಯಕರೇ, ನಾಯಕಿಯರೇ. ಪಾಂಡವರು, ಕೌರವರಲ್ಲದೆ ಭೀಷ್ಮ, ಯಮ, ಅಶ್ವತ್ಥಾಮ, ಕೃಷ್ಣ, ದ್ರೌಪದಿ, ಪ್ರಮೀಳಾ, ಸುಭದ್ರೆ ಹೀಗೆ ಅನೇಕ ನಾಯಕರು ನಾಯಕಿಯರಿದ್ದರೆ. ಇದರಲ್ಲಿ ಅನೇಕ ಭಾಷೆಗಳು ಇವೆ. ಇಲ್ಲಿನ ಪಾತ್ರಗಳು ಹಲವು ಕುಲಗಳಿಂದ ಪ್ರದೇಶಗಳಿಂದ ಬಂದವರು. ಒಂದೇ ಕಾಲದವರೂ ಅಲ್ಲ. ಏಳು ತಲೆಮಾರುಗಳಿಗೆ ಸೇರಿದವರು. ಇಲ್ಲಿನ ಹಲವು ಘಟನೆಗಳು ಈಗಿನ ಭಾರತದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತವೆ. ಕುರುಕ್ಷೇತ್ರ ಯುದ್ಧ ದೊಡ್ಡ ಭಾಗವಾಗಿದ್ದರೂ, ಮಹಾಭಾರತದ ಪ್ರಧಾನ ರಸ ವೀರರಸವಲ್ಲ ಶಾಂತರಸ. ಹೀಗೆ ಇಲ್ಲಿನ ಪಾತ್ರಗಳು ಘಟನೆಗಳು ಸಂವಾದಗಳಲ್ಲಿ ಹಲವು ಕುಲಗಳು, ಭಾಷೆಗಳು, ಮತಧರ್ಮಗಳು, ಪ್ರದೇಶಗಳು, ಚಿಂತನೆಗಳು, ಮೌಲ್ಯಗಳು ಇವೆ. ಯಾವುದೇ ಒಂದಕ್ಕೆ ಪ್ರಾಧಾನ್ಯವಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಮಹಾಭಾರತವು ಬಹುತ್ವವನು ಎತ್ತಿ ಹಿಡಿಯುವ ಗತಕಾಲದ ನೆನಪು.

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**